
ದುಡಿಯುವ ಜನರ ಪ್ರಾಣಮಿತ್ರ

# ಜನಶಕ್ತಿ

ಕನ್ನಡ ವಾರಪತ್ರಿಕೆ

ಜಾತ್ಯಾತೀತತೆಯ
ಮೌಲ್ಯಗಳನ್ನು
ಎತ್ತಿ ಹಿಡಿದ
ಪ್ರಖರ ಹೋರಾಟಗಾರ
ಎ.ಕೆ. ಸುಬ್ಬಯ್ಯ ಇನ್ನಿಲ್ಲ



ಸಂಪುಟ 13 | ಸಂಚಿಕೆ 36 | ಸೆಪ್ಟೆಂಬರ್ 2-8, 2019 | ಪುಟ 16 | ರೂ.10/-

Web : www.janashakthi.co.in, e-mail : js_weekly@yahoo.com





## ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ಕೊಟ್ಟಿದ್ದೇಕೆ?



## ಕರ್ನಾಟಕದ ಯುವ ನಿರುದ್ಯೋಗ



## ಕಾನೂನು ಕುಣಿಕೆಯಿಂದ ತಪ್ಪಿಸಿಕೊಳ್ಳಲ್ಲೊಂದು ರಾಜಮಾರ್ಗ!



## ಹೊತ್ತಿ ಉರಿಯುತ್ತಿರುವ ಅಮೆಜಾನ್

## ರಿಝರ್ವ್ ಬ್ಯಾಂಕ್ ನಿಂದ 1.76ಲಕ್ಷ ಕೋಟಿ ರೂ. 'ಲಾಭಾಂಶ' ವರ್ಗಾವಣೆ

# ಒಂದು ಹತಾಶ ಕ್ರಮ–ಸಿಪಿಐ(ಎಂ) ಪೊಲಿಟ್ ಬ್ಯುರೊ

### ದೇಶದ ಆರ್ಥಿಕ ಮತ್ತು ಜನಗಳ ಜೀವನಾಧಾರಗಳ ಮೇಲೆ ಈ ನಿರ್ದಯ ದಾಳಿಯ ವಿರುದ್ಧ ಪ್ರತಿಭಟನೆಗಳನ್ನು ಸಂಘಟಿಸಲು ಕರೆ

ಭಾರತದ ರಿಝರ್ವ್ ಬ್ಯಾಂಕ್ ಸರಕಾರಕ್ಕೆ 1.76ಲಕ್ಷ ಕೋಟಿ ರೂ.ಗಳಷ್ಟು ತನ್ನ ಮಿಗುತಾಯ ನಿಧಿಯನ್ನು ಭಾರತ ಸರಕಾರಕ್ಕೆ ವಗಾಯಿಸಲು ನಿರ್ಧರಿಸಿದೆ ಎಂಬ ಸುದ್ದಿಗೆ ಪ್ರತಿಕ್ರಿಯಿಸುತ್ತ, ಸರಕಾರದ ಹಣಕಾಸು ಕೊರತೆಯನ್ನು ತುಂಬಿಸಿಕೊಳ್ಳಲು ರಿಝರ್ವ್ ಬ್ಯಾಂಕಿನ ಮೀಸಲು ನಿಧಿಗಳನ್ನು ಬಳಸಿಕೊಂಡಿರುವ ವಿಧಾನ ಖಂಡಿತಾ ಒಪ್ಪತಕ್ಕಂತದ್ದಲ್ಲ ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೊ ಹೇಳಿದೆ. ಇದೇ ರೀತಿಯಲ್ಲಿ ಈ ಹಿಂದೆ ಒ.ಎನ್.ಜಿ.ಸಿ. ಮುಂತಾದ ಸಾರ್ವಜನಿಕ ವಲಯದ ಲಾಭದಾಯಕವಾಗಿ ನಡೆಯುತ್ತಿದ್ದ ನವರತ್ನಗಳನ್ನು ಮೋದಿ ಸರಕಾರದ ಪ್ರಚಾರ ಮುಂತಾದ ದುಂದುವೆಚ್ಚಗಳಿಗಾಗಿ ಬಳಸಿಕೊಳ್ಳಲಾಗಿತ್ತು ಎಂಬುದನ್ನು ಅದು ನೆನಪಿಸಿದೆ.


ರಿಝರ್ವ್ ಬ್ಯಾಂಕ್ ಆಫ್ ಇಂಡಿಯ ಉಸ್ತುವಾರಿ ನಡೆಸುವ ಅಧಿಕಾರವುಳ್ಳ ಸಂಸ್ಥೆ, ಕಟ್ಟಕಡೆಯದಾಗಿ ಸಾಲ ನೀಡುವಂತದ್ದು. ಅದರ ಹಣಕಾಸು ಸ್ಥಿರತೆ ನಮ್ಮ ಆರ್ಥಿಕ ವ್ಯವಸ್ಥೆಗೆ ಹಣಸಂಬಂಧಿ, ಆಥವ ವಿತ್ತೀಯ ಅಸ್ಥಿರತೆ ಅಥವ ಜಾಗತಿಕವಾಗಿ ಉಂಟಾಗುವ ಬಿಕ್ಕಟ್ಟಿನಿಂದ ರಕ್ಷಣೆ ನೀಡಲು ಅತ್ಯವಶ್ಯವಾಗಿದೆ.

ಈಗ ಈ ಸರಕಾರ ರಿಝರ್ವ್ ಬ್ಯಾಂಕ್ 1.76ಲಕ್ಷ ಕೋಟಿ ರೂ.ಗಳಷ್ಟು ಬೃಹತ್ ಮೊತ್ತವನ್ನು ವರ್ಗಾಯಿಸುವಂತೆ ಬಲವಂತ ಮಾಡಿದೆ. ಕಳೆದ ಐದು ವರ್ಷಗಳಲ್ಲಿ ಮೋದಿ ಸರಕಾರ ಪ್ರತೀ ವರ್ಷ ರಿಝರ್ವ್ ಬ್ಯಾಂಕಿನ ನಿವ್ವಳ ಲಾಭದ 99.99ಶೇವನ್ನು ಹೀರಿಕೊಂಡಿದೆ. ಅದೂ ಸಾಲದೆಂಬಂತೆ ಈಗ ಈ ಬೃಹತ್ ವರ್ಗಾವಣೆ ನಡೆದಿದೆ ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೊ ಹೇಳಿದೆ.

ಈ ಮಿಗುತಾಯ ವರ್ಗಾವಣೆಯನ್ನು "ಲಾಭಾಂಶ" (ಡಿವಿಡೆಂಡ್) ಎಂದು ಹೆಸರಿಸಲಾಗಿದ್ದು, ಹಿಂದಿನ ದಾಖಲೆ 'ಡಿವಿಡೆಂಡ್' ಮೊತ್ತವೆಂದರೆ 65896 ಕೋಟಿ ರೂ.ಗಳು. ಅಂದರೆ ಈಗ ಈ ದಾಖಲೆ ಮೊತ್ತದ ದುಪ್ಪಟ್ಟು ಮೊತ್ತವನ್ನು ಸರಕಾರ ಪಡೆದಿದೆ. ಆರ್ಥಿಕ ನಿಧಾನಗತಿ ನವರತ್ನಗಳ ಸಮಸ್ಯೆಗಳನ್ನು ಕೂಡ ಇನ್ನಷ್ಟು ಕ್ಲಿಷ್ಟಗೊಳಿಸುತ್ತಿದೆ ಎಂಬುದನ್ನು ಸಿಪಿಐ(ಎಂ) ಪೊಲಿಟ್ ಬ್ಯುರೊ ಈ ಸಂದರ್ಭದಲ್ಲಿ ನೆನಪಿಸಿದೆ.

ನಿರುದ್ಯೋಗ ದರ 9ಶೇ.ವನ್ನು ದಾಟುತ್ತಿದ್ದು, ಇದು ಈ ದಶಕದಲ್ಲೇ ಅತಿ ಹೆಚ್ಚಿನ ನಿರುದ್ಯೋಗ ದರ ಎಂದು ದಾಖಲಾಗಿದೆ. ಇಂತಹ ಸಂದರ್ಭದಲ್ಲಿ ಸರಕಾರದ ವೆಚ್ಚಗಳನ್ನು ಭರಿಸಲು, ಅದರ ಏರುತ್ತಿರುವ ಹಣಕಾಸು ಕೊರತೆಯನ್ನು ತುಂಬಲು ಈ ರೀತಿ ಮಿಗುತಾಯದ ವರ್ಗಾವಣೆಯನ್ನು ಮಾಡುತ್ತಿರುವುದು ದೇಶದ ಆರ್ಥಿಕವನ್ನು ಮತ್ತು ನಮ್ಮ ದುಡಿಯುವ ಜನಗಳ ಬದುಕನ್ನು ಬಹುವಾಗಿ ತಟ್ಟುತ್ತದೆ.

ಪ್ರಧಾನ ಮಂತ್ರಿಗಳು "ಸಂಪತ್ತಿನ ಸೃಷ್ಟಿಕರ್ತ"ರನ್ನು ಗೌರವಿಸಬೇಕು ಎಂದಿದ್ದಾರೆ. ಸಂಪತ್ತು ಸೃಷ್ಟಿಯಾಗುವುದು ಮೌಲ್ಯವನ್ನು ಉತ್ಪಾದಿಸಿದಾಗ ಮಾತ್ರ. ಆದರೆ ದುಡಿಯುವ ವಿಶಾಲ ಜನಸ್ತೋಮಕ್ಕೆ ಈಗ ಮೌಲ್ಯವನ್ನು ಉತ್ಪತ್ತಿ ಮಾಡಲು ಕೆಲಸವೇ ಇಲ್ಲವಾಗಿದೆ. ಎಲ್ಲ ವಿಭಾಗಗಳನ್ನು, ರೈತರು, ಕಾರ್ಮಿಕರು, ಮಧ್ಯಮ, ಸಣ್ಣ ಮತ್ತು ಅತಿ ಸಣ್ಣ ಉದ್ದಿಮೆದಾರರು, ಯುವಜನ ಮತ್ತು ಮಹಿಳಾ ಕಾರ್ಮಿಕರ ಮೇಲೆ ಇದು ಭಾರೀ ದುಷ್ಪರಿಣಾಮ ಉಂಟು ಮಾಡುತ್ತಿದೆ ಎಂದಿರುವ ಸಿಪಿಐ(ಎಂ) ಪೊಲಿಟ್ ಬ್ಯುರೊ ನಮ್ಮ ಆರ್ಥಿಕ ಮತ್ತು ಜನಗಳ ಜೀವನಾಧಾರಗಳ ಮೇಲೆ ಈ ನಿರ್ದಯ ದಾಳಿಯ ವಿರುದ್ಧ ಪ್ರತಿಭಟನೆಗಳನ್ನು ಸಂಘಟಿಸಬೇಕು ಎಂದು ದೇಶದಲ್ಲಿನ ತನ್ನ ಎಲ್ಲ ಘಟಕಗಳಿಗೆ ಕರೆ ನೀಡಿದೆ.



## ಕಲ್ಲಿದ್ದಲು ಮತ್ತು ಚಿಲ್ಲರೆ ವ್ಯಾಪಾರದಲ್ಲಿ 100ಶೇ. ಎಫ್.ಡಿ.ಐ

## –ಸಿಪಿಐ(ಎಂ) ಪೊಲಿಟ್ ಬ್ಯುರೊ ಖಂಡನೆ

### "ಬಿಜೆಪಿ ಸರಕಾರ ಖನಿಜ ಸಂಪನ್ಮೂಲಗಳ ಮೇಲೆ ರಾಷ್ಟ್ರೀಯ ಹತೋಟಿಯನ್ನು ಬಿಟ್ಟು ಕೊಡುತ್ತಿದೆ"

ಕೇಂದ್ರ ಸಂಪುಟ ಕಲ್ಲಿದ್ದಲು ಗಣಿಗಾರಿಕೆಯಲ್ಲಿ ಎಲ್ಲ ವಾಣಿಜ್ಯ ಉದ್ದೇಶಗಳಿಗೆ, ಅದರ ಜೊತೆಗೆ ಕಾಂಟ್ರಾಕ್ಟ್ ತಯಾರಿಕೆಯಲ್ಲಿ 100 ಶೇಕಡಾ ವಿದೇಶಿ ನೇರ ಹೂಡಿಕೆ(ಎಫ್.ಡಿ.ಐ.)ಗೆ ಅವಕಾಶ ನೀಡಲು ಮಾಡಿರುವ ನಿರ್ಧಾರವನ್ನು ಸಿಪಿಐ(ಎಂ) ಪೊಲಿಟ್ ಬ್ಯುರೊ ಬಲವಾಗಿ ಖಂಡಿಸಿದೆ. ಈ ದುಡುಕಿನ ಕ್ರಮ ವಿದೇಶಿ ಕಂಪನಿಗಳಿಗೆ ನಮ್ಮ ದೇಶದ ಖನಿಜ ಸಂಪನ್ಮೂಲಗಳನ್ನು ಕೊಳ್ಳೆ ಹೊಡೆಯಲು ಅನುಕೂಲ ಮಾಡಿಕೊಡುತ್ತದೆ ಎಂದು ಅದು ಖೇದ ವ್ಯಕ್ತಪಡಿಸಿದೆ.

ಈ ನಿರ್ಧಾರ ಪ್ರಧಾನ ರಾಷ್ಟ್ರೀಯ ಕಲ್ಲಿದ್ದಲು ಗಣಿಗಾರಿಕೆಯ ಕಂಪನಿ ಕೋಲ್ ಇಂಡಿಯಾ ಲಿ. ಮೇಲೂ ಹಾನಿಕಾರಕ ಪರಿಣಾಮ ಬೀರಲಿದೆ. ಮೋದಿ ಸರಕಾರ ಸಾರ್ವಜನಿಕ ವಲಯದ ಈ ಕಲ್ಲಿದ್ದಲು ಕಂಪನಿಯನ್ನು ದುರ್ಬಲಗೊಳಿಸಲು ಟೊಂಕ ಕಟ್ಟಿದೆ. ಅದು ಈಗಾಗಲೇ ತನ್ನ ಹಿಂದಿನ ಆಳ್ವಿಕೆಯಲ್ಲಿ ಕಲ್ಲಿದ್ದಲು ಗಣಿಗಾರಿಕೆಯನ್ನು ಭಾರತೀಯ ಖಾಸಗಿಯವರಿಗೆ ತೆರೆದಿತ್ತು. ಬಿಜೆಪಿ ಸರಕಾರ ಖನಿಜ ಸಂಪನ್ಮೂಲಗಳ ಮೇಲೆ ರಾಷ್ಟ್ರೀಯ ಹತೋಟಿಯನ್ನು ಬಿಟ್ಟು ಕೊಡುತ್ತಿದೆ. ಇದು ದೇಶದ ಹಿತಾಸಕ್ತಿಗಳಿಗೆ ಬಹಳಷ್ಟು ಮಾರಕವಾಗಿದೆ ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೊ ಹೇಳಿದೆ.

ಏಕಬ್ರಾಂಡ್ ಚಿಲ್ಲರೆ ವ್ಯಾಪಾರದಲ್ಲಿಯೂ 100 ಶೇ. ಎಫ್.ಡಿ.ಐ.ಗೆ ನಿಯಮಾವಳಿಗಳನ್ನು ಸಡಿಲಗೊಳಿಸುವ ಇನ್ನೊಂದು ನಿರ್ಧಾರ ದೇಶದಲ್ಲಿವ ವಿಶಾಲ ಚಿಲ್ಲರೆ ವ್ಯಾಪಾರ ವಲಯದ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ ಎಂದಿರುವ ಸಿಪಿಐ(ಎಂ) ಪೊಲಿಟ್ ಬ್ಯುರೊ ಈ ಕ್ರಮಗಳನ್ನು ಹಿಂದಕ್ಕೆ ಪಡೆಯಬೇಕು ಎಂದು ಸರಕಾರವನ್ನು ಆಗ್ರಹಿಸಿದೆ.

### ಜಮ್ಮು ಮತ್ತು ಕಾಶ್ಮೀರ ಪ್ರವೇಶಿಸಲು ಪ್ರತಿಪಕ್ಷಗಳ ನಿಯೋಗಕ್ಕೆ ಅನುಮತಿ ನಿರಾಕರಣೆ

## ಸಂವಿಧಾನ ಖಾತ್ರಿಪಡಿಸಿರುವ ಹಕ್ಕುಗಳ ಹಗಲು ದರೋಡೆ

### – ಸಿಪಿಐ(ಎಂ) ಪೊಲಿಟ್ ಬ್ಯುರೊ ಖಂಡನೆ

ಜಮ್ಮು ಮತ್ತು ಕಾಶ್ಮೀರ ಆಡಳಿತ ಎಂಟು ರಾಜಕೀಯ ಪಕ್ಷಗಳನ್ನು ಪ್ರತಿನಿಧಿಸಿದ್ದ ಹನ್ನೊಂದು ಸದಸ್ಯರ ನಿಯೋಗಕ್ಕೆ ಆ ರಾಜ್ಯಕ್ಕೆ ಭೇಟಿ ನೀಡಲು ಅನುಮತಿ ನಿರಾಕರಿಸಿರುವುದನ್ನು ಸಿಪಿಐ(ಎಂ) ಪೊಲಿಟ್ ಬ್ಯುರೊ ಬಲವಾಗಿ ಖಂಡಿಸಿದೆ. ಕಾಂಗ್ರೆಸ್, ಸಿಪಿಐ(ಎಂ), ಸಿಪಿಐ, ಡಿಎಂಕೆ, ಎನ್‌ಸಿಪಿ, ಜೆಡಿ(ಎಸ್), ಆರ್‌ಜೆಡಿ ಮತ್ತು ಟಿಎಂಸಿ ಪಕ್ಷಗಳ ಜಂಟಿ ನಿಯೋಗ ಆಗಸ್ಟ್ 24ರ ಬೆಳಿಗ್ಗೆ ಸಂವಿಧಾನದ ವಿಧಿ 370ನ್ನು ರದ್ದು ಮಾಡುವ ಸಂದರ್ಭದಲ್ಲಿ ಜಮ್ಮು ಮತ್ತು ಕಾಶ್ಮೀರ ರಾಜ್ಯದಲ್ಲಿ ಹಾಕಿರುವ ರಾಜಕೀಯ ನಿರ್ಬಂಧದ ವಿರುದ್ಧ ಇರುವ ಸನ್ನಿವೇಶದ ಒಂದು ಅಂದಾಜು ಮಾಡಲು ಶ್ರೀನಗರಕ್ಕೆ ಹೋಗಿತ್ತು.

ಮುಂದಿನ ಕೆಲವು ದಿನಗಳಲ್ಲಿ ರಾಜ್ಯದ ವಿವಿಧ ಭಾಗಗಳಿಗೆ ಭೇಟಿ ನೀಡಿ ವಿವಿಧ ಜನಗಳೊಂದಿಗೆ ಮತ್ತು ವಿವಿಧ ರಾಜಕೀಯ ಅಭಿಪ್ರಾಯಗಳುಳ್ಳ ವಿಭಾಗಗಳೊಂದಿಗೆ ಮಾತನಾಡಿ ಕಾಶ್ಮೀರ ಕಣಿವೆಯನ್ನು ಹಲವು ದಿನಗಳಿಂದ ಸಂಪೂರ್ಣವಾಗಿ ಮುಚ್ಚಿ ಬಿಟ್ಟಿರುವುದರ ಫಲಿತಾಂಶವಾಗಿ ಅವರೆಲ್ಲ ಎದುರಿಸುತ್ತಿರುವ ಕಷ್ಟಗಳು ಹಾಗೂ ನೆಲಮಟ್ಟದಲ್ಲಿ ಉಂಟಾಗಿರುವ ಪರಿಸ್ಥಿತಿಯನ್ನು ತಿಳಿಯುವ ಯೋಜನೆಯನ್ನು ಈ ನಿಯೋಗ ಹಾಕಿಕೊಂಡಿತ್ತು.

ಮಾನ್ಯತೆ ಪಡೆದ ರಾಜಕೀಯ ಪಕ್ಷಗಳ ಸುಪರಿಚಿತ ಮುಖಂಡರು ಗಳಿಗೆ ಪ್ರವೇಶ ನಿರಾಕರಿಸಿರುವುದು ತಮ್ಮ ಪಕ್ಷಗಳಿಗೆ ಸೇರಿದವರನ್ನು ಭೇಟಿಯಾಗುವ, ಅವರೊಂದಿಗೆ ಮಾತಾಡುವ ರಾಜಕೀಯ ಪಕ್ಷಗಳ ಹಕ್ಕುಗಳ ಮೇಲೆ ನಡೆಸಿರುವ ನೇರ ದಾಳಿಯಾಗಿದೆ. ಶ್ರೀನಗರ ವಿಮಾನ ನಿಲ್ದಾಣದಲ್ಲಿ ಮಾಧ್ಯಮಗಳವರೊಂದಿಗೆ ಪೋಲೀಸರ ದುರ್ವರ್ತನೆ ಪತ್ರಿಕಾ ಸ್ವಾತಂತ್ರ್ಯವನ್ನು ದಮನಿಸುವ ಒಂದು ನಗ್ನ ಪ್ರಯತ್ನವಾಗಿದೆ ಎಂದಿರುವ ಪೊಲಿಟ್ ಬ್ಯುರೊ, ಸರಕಾರ ಹೇಳಿಕೊಳ್ಳುವಂತೆ ಕಣಿವೆಯಲ್ಲಿ "ಸಾಮಾನ್ಯ" ಸ್ಥಿತಿ ಇರುವುದಾದರೆ, ರಾಜಕೀಯ ಪಕ್ಷಗಳ ಪ್ರತಿನಿಧಿಗಳು ಜನರನ್ನು ಭೇಟಿಯಾಗದಂತೆ ಅದು ತಡೆಯುವುದಾದರೂ ಏಕೆ ಎಂದು ಪ್ರಶ್ನಿಸಿದೆ. ದೇಶಾದ್ಯಂತ ಜನಗಳು ಸರ್ವಾಧಿಕಾರಿ ಆಳ್ವಿಕೆಯನ್ನು ಹೇರಲು ಪ್ರಯತ್ನಿಸುತ್ತಿರುವ ಪಕ್ಷವೊಂದು ಜನಗಳ ಮತ್ತು ಅವರ ಪ್ರತಿನಿಧಿಗಳ ಪ್ರಜಾಪ್ರಭುತ್ವ ಹಕ್ಕುಗಳನ್ನುತುಳಿದು ಹಾಕುತ್ತಿರುವ ನಗ್ನ ಪ್ರದರ್ಶನವನ್ನು ಕಾಣುತ್ತಿದ್ದಾರೆ ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೊ ಹೇಳಿದೆ.

ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿಯವರು ಈ ನಿಯೋಗದಲ್ಲಿದ್ದರು.

## ತರಿಗಾಮಿಯವರನ್ನು ಭೇಟಿ ಮಾಡಲು ಯೆಚುರಿಯವರಿಗೆ ಅನುಮತಿ ನೀಡುವಂತೆ ಸುಪ್ರಿಂ ಕೋರ್ಟ್ ಆದೇಶ

ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿಯವರು ಪಕ್ಷದ ಕೇಂದ್ರ ಸಮಿತಿಯ ಸದಸ್ಯರು ಹಾಗೂ ಜಮ್ಮು ಮತ್ತು ಕಾಶ್ಮೀರ ವಿಧಾನಸಭೆಗೆ ನಾಲ್ಕು ಬಾರಿ ಆಯ್ಕೆಯಾಗಿರುವ ಮಹಮ್ಮದ್ ಯುಸುಫ್ ತರಿಗಾಮಿಯವರು ಆಗಸ್ಟ್ 5ರಿಂದ ಎಲ್ಲಿದ್ದಾರೆಂದು ತಿಳಿದಿಲ್ಲ, ಅವರನ್ನು ಹಾಜರು ಪಡಿಸಬೇಕು ಎಂದು ಕೋರುವ ಹೆಬಿಯಸ್ ಕಾರ್ಪಸ್ ಅರ್ಜಿಯನ್ನು ಆಗಸ್ಟ್ 24ರಂದು ಸುಪ್ರಿಂ ಕೋರ್ಟಿನಲ್ಲಿ ಸಲ್ಲಿಸಿದ್ದರು.

ಅದನ್ನು ಆಗಸ್ಟ್ 28ರಂದು ವಿಚಾರಣೆಗೆತ್ತಿಕೊಂಡ ಸುಪ್ರಿಂ ಕೋರ್ಟ್ ಕಾಶ್ಮೀರದಲ್ಲಿ ತರಿಗಾಮಿಯವರನ್ನು ಭೇಟಿ ಮಾಡಲು ಯೆಚುರಿಯವರಿಗೆ ಅನುಮತಿ ನೀಡಬೇಕು ಎಂದು ಆದೇಶ ನೀಡಿದೆ. ಅವರು ಮರಳಿ ಬಂದು ನ್ಯಾಯಾಲಯಕ್ಕೆ ತರಿಗಾಮಿಯವರ ಆರೋಗ್ಯದ ಕುರಿತು ವಿವರಗಳನ್ನು ಕುರಿತಂತೆ ಅಫಿಡವಿಟ್ ಸಲ್ಲಿಸಬೇಕು ಎಂದು ಅದು ಹೇಳಿದೆ.

ಅದರ ಪ್ರಕಾರ ಯೆಚುರಿಯವರು ಆಗಸ್ಟ್ 29ರಂದು ಶ್ರೀನಗರಕ್ಕೆ ಮತ್ತೊಮ್ಮೆ ತೆರಳಲಿದ್ದಾರೆ ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೊ ತಿಳಿಸಿದೆ. ಈ ಹಿಂದೆ ಎರಡು ಬಾರಿ ಯೆಚುರಿಯವರು ತರಿಗಾಮಿಯವರನ್ನು ಭೇಟಿ ಮಾಡಲು ಪ್ರಯತ್ನಿಸಿದ್ದರು. ಎರಡೂ ಬಾರಿ ಅಲ್ಲಿನ ಅಧಿಕಾರಿಗಳು ಅವರನ್ನು ಶ್ರೀನಗರ ವಿಮಾನ ನಿಲ್ದಾಣದಿಂದ ವಾಪಾಸು ಕಳಿಸಿದ್ದರು.

ಸುಪ್ರಿಂ ಕೋರ್ಟ್ ಆದೇಶ ಬಂದ ನಂತರ ಯೆಚುರಿಯವರು ಮತ್ತೊಮ್ಮೆ ಜಮ್ಮು ಮತ್ತು ಕಾಶ್ಮೀರದ ರಾಜ್ಯಪಾಲರಿಗೆ ಪತ್ರ ಬರೆದು ಸರ್ವೋಚ್ಚ ನ್ಯಾಯಾಲಯದ ಆದೇಶಕ್ಕೆ ಅನುಗುಣವಾಗಿ ಆಗಸ್ಟ್ 29ರಂದು ತಾನು ಶ್ರೀನಗರಕ್ಕೆ ಬಂದು ತರಿಗಾಮಿಯವರನ್ನು ಭೇಟಿಯಾಗುವುದಾಗಿ ತಿಳಿಸಿದ್ದಾರೆ. ತನ್ನ ಆರೋಗ್ಯ ಸರಿಯಿಲ್ಲವಾದ್ದರಿಂದ ಒಬ್ಬ ಆಪ್ತ ಸಹಾಯಕರು ಜತೆಗೆ ಬರುತ್ತಿದ್ದಾರೆ, ತಾನು ಸುಪ್ರಿಂ ಕೋರ್ಟ್ ನಿರ್ದೇಶನಗಳಿಗೆ ಅನುಸಾರವಾಗಿ ಬರುತ್ತಿರುವುದರಿಂದ ಈ ಆಪ್ತ ಸಹಾಯಕರು ಜತೆಗೆ ಬರಲು ಆಡಳಿತ ಅನುಮತಿ ನೀಡುತ್ತದೆ ಎಂಬ ಆಶಯವನ್ನೂ ಯೆಚುರಿ ವ್ಯಕ್ತಪಡಿಸಿದ್ದಾರೆ.

## ಮುಷ್ಕರ ನಿಲ್ಲಿಸಲು ರಕ್ಷಣಾ ನೌಕರರ ನಿರ್ಧಾರ

ಆಗಸ್ಟ್ 20ರಿಂದ ಒಂದು ತಿಂಗಳ ಚಾರಿತ್ರಿಕ ಮುಷ್ಕರವನ್ನು ಆರಂಭಿಸಿದ್ದ ದೇಶದ 41 ಶಸ್ತ್ರ ಕಾಖಾನೆಗಳ ಒಂದು ಲಕ್ಷಕ್ಕೂ ಹೆಚ್ಚು ರಕ್ಷಣಾ ಉತ್ಪಾದನಾ ವಲಯದ ನೌಕರರು ಆಗಸ್ಟ್ 26 ರಂದು ತಮ್ಮ ಮುಷ್ಕರವನ್ನು ಹಿಂತೆಗೆದುಕೊಳ್ಳಲು ನಿರ್ಧರಿಸಿದರು. ರಕ್ಷಣಾ ಉತ್ಪಾದನಾ ಇಲಾಖೆಯ ಕಾರ್ಯದರ್ಶಿಯೊಡನೆ ಒಂದು ಭೇಟಿಯ ನಂತರ ನೌಕರರ ಒಕ್ಕೂಟಗಳು ಈ ನಿರ್ಧಾರವನ್ನು ಕೈಗೊಂಡರು.. ಇಲಾಖಾ ಕಾರ್ಯದರ್ಶಿಗಳು ಈ ಕಾಖಾನೆಗಳ ಕಂಪನೀಕರಣ ಕುರಿತಂತೆ ಸರಕಾರ ಯಾವುದೇ ನಿರ್ಧಾರವನ್ನು ಕೈಗೊಂಡಿಲ್ಲ, ನೌಕರರು ಈ ಬಗ್ಗೆ ವ್ಯಕ್ತಪಡಿಸಿರುವ ಆತಂಕಗಳನ್ನು ಪರೀಕ್ಷಿಸಲು ಒಂದು ಉನ್ನತ ಮಟ್ಟದ ಅಧಿಕೃತ ಸಮಿತಿಯನ್ನು ರಚಿಸಲು ನಿರ್ಧರಿಸಲಾಗುವುದು ಎಂದು ಆಶ್ವಾಸನೆ ನೀಡಿದರು. ಇದನ್ನು ನಂಬಲು ನಿರ್ಧರಿಸಿ ಇದನ್ನನುಸರಿಸಿ ತಮ್ಮ ಮುಷ್ಕರವನ್ನು ಹಿಂತೆದುಕೊಳ್ಳಲು ನಿರ್ಧರಿಸಲಾಗಿದೆ ಎಂದು ಈ ಮೂರು ಒಕ್ಕೂಟಗಳು ಹಾಗೂ ಮಾನ್ಯತೆ ಪಡೆದ ರಕ್ಷಣಾ ಸಂಘಗಳ ಮಹಾಒಕ್ಕೂಟ(ಸಿಡಿಆರ್ಎ) ಒಂದು ಜಂಟಿ ಹೇಳಿಕೆಯಲ್ಲಿ ತಿಳಿಸಿವೆ. 15 ದಿನಗಳ ನಂತರ ಮತ್ತೆ ಸಭೆ ಸೇರಿ ಮುಂದಿನ ಕೇಂದ್ರೀಕೃತ ಕಾರ್ಯಾಚರಣೆಗಳ ಬಗ್ಗೆ ನಿರ್ಧರಿಸಲಾಗುವುದು. ಈ ನಡುವೆ ಕಂಪನೀಕರಣದ ವಿರುದ್ಧ ಸ್ಥಳೀಯ ಮಟ್ಟಗಳಲ್ಲಿ ಪ್ರಚಾರ ಕಾರ್ಯವನ್ನು ಹಿಂದಿನದೇ ಹುರುಪಿನಿಂದ ಮುಂದುವರೆಸಲಾಗುವುದು. ಸರಕಾರ ತನ್ನ ಆಶ್ವಾಸನೆಯನ್ನು ಉಲ್ಲಂಘಿಸಿದರೆ ಮತ್ತೆ ಮುಷ್ಕರ ನಡೆಸಲಾಗುವುದ ಎಂದು ಜಂಟಿ ಹೇಳಿಕೆ ತಿಳಿಸಿದೆ.

ಈ ಅಭೂತಪೂರ್ವ ಮುಷ್ಕರಕ್ಕೆ ಎಲ್ಲಡೆಗಳಿಮದ ಬೆಂಬಲ ವ್ಯಕ್ತವಾಗಿದ್ದು, ಹತ್ತು ಕೇಂದ್ರೀ ಯ ಕಾರ್ಮಿಕ ಸಂಘಟನೆಗಳು ಮತ್ತು ಸ್ವತಂತ್ರ ನೌಕರ ಒಕ್ಕೂಟಗಳು ಆಗಸ್ಟ್ 27ರಂದು ಒಂದು ಸೌಹಾರ್ದ ಕಾರ್ಯಾಚರಣೆ ನಡೆಸಬೇಕು ಎಂದು ತಮ್ಮ ಘಟಕಗಳಿಗೆ ಕರೆ ನೀಡಿದ್ದವು.

ಸಂಪಾದಕೀಯ

# ಕಾನೂನು ಕುಣಿಕೆಯಿಂದ ತಪ್ಪಿಸಿಕೊಳ್ಳಲ್ಲೊಂದು ರಾಜಮಾರ್ಗ !

ಕಾಂಗ್ರೆಸ್ ಪಕ್ಷಕ್ಕೆ ಹಿನ್ನಡೆಯ ಮೇಲೆ ಹಿನ್ನಡೆ ಆಗುತ್ತಲೇ ಇದೆ. ಅದರ ಹಿರಿಯ ನಾಯಕರು ಒಬ್ಬರ ನಂತರ ಒಬ್ಬರಂತೆ ಕಾನೂನಿನ ಕುಣಿಕೆಗೆ ಕೊರಳೊಡ್ಡುವ ಪರಿಸ್ಥಿತಿಗೆ ಒಳಗಾಗುತ್ತಿದ್ದಾರೆ.ಐಎನ್ಎಕ್ಸ್ ಮೀಡಿಯಾ ಹಗರಣದಲ್ಲಿ ಕಾಂಗ್ರೆಸ್ ಹಿರಿಯ ನಾಯಕರೂ ಕೇಂದ್ರದ ಮಾಜಿ ಹಣಕಾಸು ಸಚಿವರು ಆಗಿದ್ದ ಪಿ.ಚಿದಂಬರಂ ಸಿಬಿಐ ವಶದಲ್ಲಿದ್ದು ಜಾರಿ ನಿರ್ದೇಶನಾಲಯ (ಇ.ಡಿ)ಅವರನ್ನು ಬಂಧಿಸಿ ವಿಚಾರಣೆಗೆ ಒಳಪಡಿಸಲು ತುದಿಗಾಲ ಮೇಲೆ ನಿಂತಿದೆ.

ಇತ್ತ ಕರ್ನಾಟಕದ ಪ್ರಮುಖ ಕಾಂಗ್ರೆಸ್ ಮುಖಂಡರೂ, ಮಾಜಿ ಸಚಿವರು ಮತ್ತು ಹಾಲಿ ಶಾಸಕರೂ ಆಗಿರುವ ಡಿ.ಕೆ.ಶಿವಕುಮಾರ್ ಅವರ ದೆಹಲಿ ಮನೆಯಲ್ಲಿ ಆದಾಯ ತೆರಿಗೆ ಇಲಾಖೆ ವಶಪಡಿಸಿಕೊಂಡ 8.6 ಕೋಟಿ ರೂ. ದಾಖಲೆ ರಹಿತ ಹಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯ ನೀಡಿದ ಸಮನ್ಸ್ ರದ್ದುಗೊಳಿಸಲು ಕೋರಿ ಸಲ್ಲಿಸಲಾದ ಮನವಿಯನ್ನು ಹೈಕೋರ್ಟ್ ತಿರಸ್ಕರಿಸಿರುವುದರಿಂದ ಅವರಿಗೆ ಬಂಧನ ಭೀತಿ ಎದುರಾಗಿದೆ.

ಕಾನೂನಿನ ಎದುರು ಎಲ್ಲರೂ ಸರಿಸಮಾನರು. ಅಕ್ರಮ ಹಣ ವರ್ಗಾವಣೆ, ಕಾನೂನು ಬಾಹಿರ ಚಟುವಟಿಕೆಗಳಿಂದ ಹಣ ಸಂಪಾದಿಸುವುದು,ಅಪರಾಧ ಚಟುವಟಿಕೆಗಳಿಂದ ಸಂಪಾದಿಸಿದ ಹಣವನ್ನು ಸ್ಥಿರ ಹಾಗೂ ಚರ ಆಸ್ತಿಗಳಲ್ಲಿ ಹೂಡಿಕೆ ಮಾಡುವುದು ಮೊದಲಾದವುಗಳು ಗಂಭೀರ ಸ್ವರೂಪದ ಆರ್ಥಿಕ ಅಪರಾಧಗಳು. ಆರ್ಥಿಕ ಉದಾರೀಕರಣದ ನೀತಿಗಳ ಅನುಷ್ಠಾನ ಇಂತಹ ಅಪರಾಧಗಳ ಬೆಳವಣಿಗೆಗೆ ವಿಫುಲವಾದ ಅವಕಾಶಗಳನ್ನು ಒದಗಿಸುತ್ತದೆ.

ಆರ್ಥಿಕ ಅಪರಾಧಿಗಳು ದೈತ್ಯ ತಿಮಿಂಗಿಲಗಳಾಗಿ ಬೆಳೆದಿರುತ್ತಾರೆ. ಅವರು ಸುಲಭವಾಗಿ ಬಲೆಯೊಳಗೆ ಸಿಕ್ಕಿ ಹಾಕಿಕೊಳ್ಳುವುದಿಲ್ಲ.ಅವರಿಗೆ ಬಲವಾದ ರಾಜಕೀಯ ರಕ್ಷಣೆ ಇರುತ್ತದೆ. ಬಂಡವಾಳಶಾಹಿ ರಾಜಕೀಯ ಪಕ್ಷಗಳಿಗೆ ಇಂತಹ ಪ್ರಭಾವಿಗಳೇ ಜೀವಾಳ.ಚುನಾವಣೆಗಳೂ ಸೇರಿದಂತೆ ಅವುಗಳ ಎಲ್ಲ ವ್ಯವಹಾರಗಳಿಗೆ ಇವರಿಂದ ಕಪ್ಪು ಹಣ ಹರಿದು ಬರುತ್ತದೆ. ಇದೆಲ್ಲವೂ ಗೌಪ್ಯವಾಗಿ ನಡೆಯುತ್ತದೆ.

ಬಂಡವಾಳಶಾಹಿ ರಾಜಕೀಯ ಪಕ್ಷಗಳಲ್ಲಿ ಅಧಿಕಾರ ಗಿಟ್ಟಿಸಿ ಕೊಳ್ಳಲು ಪೈಪೋಟಿ ನಡೆದಿರುತ್ತದೆ. ಅದು ದ್ವೇಷದ ರಾಜಕಾರಣವಾಗಿ ಸ್ಫೋಟಗೊಳ್ಳುತ್ತಿರುತ್ತದೆ.ಆಗ ಗೌಪ್ಯವಾಗಿ ನಡೆಯುವ ಆರ್ಥಿಕ ಅಪರಾಧಗಳು ಬಯಲಿಗೆ ಬರುತ್ತವೆ.ಇಂದು ದೇಶದಲ್ಲಿ ಅದು ಬಿಜೆಪಿ ಮತ್ತು ಕಾಂಗ್ರೆಸ್ ಎಂಬ ಎರಡು ಬಂಡವಾಳಶಾಹಿ ಪಕ್ಷಗಳ ನಡುವೆ ನಡೆಯುತ್ತಿದೆ.

ಬಂಡವಾಳಶಾಹಿ ರಾಜಕೀಯ ಪಕ್ಷಗಳು ಹಿಂದಿನಿಂದಲೂ ಸಿಬಿಐ,ಇ.ಡಿ ಮುಂತಾದ ತನಿಖಾ ಸಂಸ್ಥೆಗಳನ್ನು ದುರ್ಬಳಕೆ ಮಾಡುತ್ತಾ ಬಂದಿವೆ. ಕಾಂಗ್ರೆಸ್ ಪಕ್ಷ ಅಧಿಕಾರದಲ್ಲಿದ್ದಾಗ, ಅದು ಪ್ರತಿಪಕ್ಷದವರನ್ನು ಸದೆ ಬಡಿಯಲು ತನಿಖಾ ಸಂಸ್ಥೆಗಳ ದುರ್ಬಳಕ್ಕೆ ಮಾಡುತ್ತಾ ಬಂದಿದೆ.ಈಗ ಬಿಜೆಪಿ ಅಧಿಕಾರಕ್ಕೆ ಬಂದಿದ್ದು ಅದು ಮುಖ್ಯವಾಗಿ ಕಾಂಗ್ರೆಸಿಗೆ ಗುರಿ ಇಟ್ಟು ದಾಳಿ ಮಾಡುತ್ತಿದೆ. ಹೀಗಾಗಿ ಕಾಂಗ್ರೆಸಿನ ಪ್ರಮುಖ ನಾಯಕರು ಜೈಲು ಪಾಲಾಗುತ್ತಿದ್ದಾರೆ. ಇದರೊಂದಿಗೆ ಗಣಿ ಹಗರಣದಲ್ಲಿ ಜೈಲು ಸೇರಿದ ಬಿಜೆಪಿಯ ಜನಾರ್ದನ ರೆಡ್ಡಿ,ಭ್ರಷ್ಟಾಚಾರ ಪ್ರಕರಣದಲ್ಲಿ ಜೈಲು ಕಂಡು ಬಂದ ಮುಖ್ಯ ಮಂತ್ರಿ ಯಡಿಯೂರಪ್ಪ ಅಂತವರು ಬಿಜೆಪಿಗೆ ಹಚ್ಚಿದ ಕಳಂಕ ಮರೆಯಾಗುತ್ತಿದೆ.

ಭ್ರಷ್ಟಾಚಾರಿಗಳಿಗೆ ಕಾನೂನು ಕುಣಿಕೆಯಿಂದ ತಪ್ಪಿಸಿ ಕೊಳ್ಳಲು ರಾಜ ಮಾರ್ಗವೊಂದು ತೆರೆದು ಕೊಂಡಿದೆ.ಕಾನೂನು ಕ್ರಮದಿಂದ ತಪ್ಪಿಸಿಕೊಳ್ಳಬೇಕಾದರೆ ಸದ್ಯ ಕೇಂದ್ರದಲ್ಲಿ ಮತ್ತು ರಾಜ್ಯದಲ್ಲಿ ಅಧಿಕಾರದಲ್ಲಿರುವ ಆಳುವ ಪಕ್ಷಕ್ಕೆ ಸೇರಿದರೆ ಸಾಕು! ತನಿಖೆಯೂ ಇಲ; ಶಿಕ್ಷೆಯೂ ಇಲ್ಲ. ಪಿ.ಚಿದಂಬರಂ ಆಗಲಿ,ಡಿ.ಕೆ.ಶಿವಕುಮಾರ್ ಆಗಲಿ,ಕಾನೂನು ಕುಣಿಕೆಯಿಂದ ಪಾರಗಲು ಬಿಜೆಪಿ ಸೇರಿದರೆ ಸಾಕು.ಬಿಜೆಪಿಯಲ್ಲಿ ಭ್ರಷ್ಟಾಚಾರದ ಆರೋಪಕ್ಕೆ ಒಳಗಾದವರು ಹಲವರಿದ್ದಾರೆ.ಸಿ.ಬಿ.ಐ ಆಗಲಿ ಜಾರಿ ನಿರ್ದೇಶನಾಲಯವಾಗಲಿ ಇವರ ಮನೆಗಳ ಮೇಲೆ ದಾಳಿ ಮಾಡುವುದಿಲ್ಲ.ಅವರನ್ನು ಬಂಧಿಸಿ, ವಿಚಾರಣೆಗೆ ಒಳಪಡಿಸುವುದಿಲ್ಲ. ಭ್ರಷ್ಟಾಚಾರದ ವಿರುದ್ಧ ಹೋರಾಟ ಮಾಡುತ್ತೇನೆ ಎನ್ನುವ ಮೋದಿ ಸರ್ಕಾರ ಆಯ್ದ ಕೆಲವರನ್ನಷ್ಟೇ ಗುರಿಯಾಗಿಸಿಕೊಂಡು ಬೇಟೆಯಾಡುತ್ತಿದೆ.ಕರ್ನಾಟಕ ದಲ್ಲಿ ಮೈತ್ರಿ ಸರ್ಕಾರ ಪತನಕ್ಕೆ ಕಾರಣರಾದ ಅತೃಪ್ತರು ಎಂದು ಕರೆಯಲ್ಪಡುವ ಶಾಸಕರಲ್ಲಿ ಹೆಚ್ಚಿನವರು ತಮ್ಮ ಕಪ್ಪು ಕೃತ್ಯಗಳಿಗೆ ರಕ್ಷಣೆ ಪಡೆಯುದಕ್ಕಾಗಿಯೇ ತಮ್ಮನ್ನು ಚುನಾವಣೆಗೆ ನಿಲ್ಲಿಸಿ ಗೆಲ್ಲಿಸಿದ ಪಕ್ಷಕ್ಕೆ ದ್ರೋಹ ಮಾಡಿ ಬಿಜೆಪಿ ಎಂಬ ಗೆದ್ದೆತ್ತಿನ ಬಾಲ ಹಿಡಿದುಕೊಂಡು ಕಾನೂನಿನ ಕುಣಿಕೆಯಿಂದ ತಪ್ಪಿಸಿಕೊಳ್ಳಲು ಹೋದವರಾಗಿದ್ದಾರೆ. ಪಿ. ಚಿದಂಬರಂ ಮತ್ತು ಡಿ.ಕೆ. ಶಿವಕುಮಾರ್ ಬಿಜೆಪಿಗೆ ಶರಣಾಗತರಾದರೆ ಅವರು ಕುಣಿಕೆಯಿಂದ ಪಾರಾಗುತ್ತಾರೆ!.

## ಬಿ.ಎಲ್. ಸಂತೋಷ್ ಹೇಳಿಕೆಗೆ ಖಂಡನೆ



ಬಿಜೆಪಿ ಅಖಿಲ ಭಾರತ ಕಾರ್ಯದರ್ಶಿಯಾಗಿರುವ ಬಿ.ಎಲ್. ಸಂತೋಷ ಅವರು ಇತ್ತೀಚಿಗೆ ಬೆಂಕಿ ಹಚ್ಚುವುದು ನಮಗೂ ಗೊತ್ತು ಎಂಬ ಹೇಳಿಕೆ ನೀಡಿದ್ದು, ಇದನ್ನು ಭಾರತ ಕಮ್ಯುನಿಸ್ ಪಕ್ಷ(ಮಾರ್ಕ್ಸ್‌ವಾದಿ) ತೀವ್ರವಾಗಿ ಖಂಡಿಸಿದೆ. ಕೂಡಲೇ ಸರ್ಕಾರವು ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ಅವರ ಮೇಲೆ ಸ್ವಯಂ ಪ್ರೇರಿತವಾಗಿ ಕ್ರಿಮಿನಲ್ ಮೊಕದ್ದಮೆಯನ್ನು ದಾಖಲಿಸಬೇಕೆಂದು ಒತ್ತಾಯಿಸಿದೆ. ಈ ಕುರಿತು ಸಿಪಿಐ(ಎಂ) ಕುರುಗೋಡು ತಾಲೂಕು ಸಮಿತಿ ಪ್ರತಿಭಟನಾ ಮನವಿಯೊಂದನ್ನು ಸಲ್ಲಿಸಿದೆ.

ದೇಶದ ಕೋಮು ಸಾಮರಸ್ಯವನ್ನು ಕಾಪಾಡಬೇಕಾಗಿರುವುದು ಪ್ರತಿಯೊಬ್ಬ ನಾಗರೀಕ ಮತ್ತು ರಾಜಕೀಯ ಪಕ್ಷಗಳ ಮುಖ್ಯ ಕರ್ತವ್ಯವಾಗಿದೆ. ದೇಶದ ಜನತೆ ಹಸಿವು, ಬಡತನ, ನಿರುದ್ಯೋಗದಂತಹ ಗಂಭೀರವಾದ ಸಮಸ್ಯೆಗಳಲ್ಲಿ ಮುಳುಗಿರುವಾಗ ಒಂದು ರಾಷ್ಟ್ರೀಯ ಪಕ್ಷದ ನೇತಾರರಾಗಿ ಇಂತಹ ಹೇಳಿಕೆ ನೀಡುವುದು ಅಕ್ಷಮ್ಯ ಅಪರಾಧವಾಗಿದೆ ಎಂದು ಸಿಪಿಐ(ಎಂ) ಹೇಳಿದೆ.

ಕೇಂದ್ರದ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ನಿರುದ್ಯೋಗ ಸಮಸ್ಯೆ ತೀವ್ರವಾಗಿ ತಾಂಡವಾಡುತ್ತಿದ್ದು, ಜನರ ಭಾವನೆಯ ವಿಚಾರಗಳನ್ನು ಬಳಸಿ ಜನರ ನಿಜವಾದ ಸ್ವಂಸ್ಯೆಗಳಿಂದ ಹಿಮ್ಮುಖರನ್ನಾಗಿ ಮಾಡುವ ಉದ್ದೇಶ ಇದರ ಹಿಂದಿದೆ ಎಂದು ಸಿಪಿಐ(ಎಂ) ಪ್ರತಿಪಾದಿಸುತ್ತದೆ. ಈ ರೀತಿಯ ಹೇಳಿಕೆಗಳನ್ನು ನೀಡುವುದರ ಮುಖಾಂತರ ಕೋಮು ಸಾಮರಸ್ಯವನ್ನು ಹಾಳುಗೆಡುವುದೇ ಇವರ ಉದ್ದೇಶವಾಗಿದೆ, ಅಲ್ಪಸಂಖ್ಯಾತರ ಮೇಲೆ ಹೆಚ್ಚುತ್ತಿರುವ ದಾಳಿಗಳನ್ನು ಈ ಹಿನ್ನಲೆಯಲ್ಲಿ ನೋಡಬಹುದಾಗಿದೆ.

ಆದ್ದರಿಂದ ಸರ್ಕಾರ ಕೂಡಲೇ ಇವರ ಮೇಲೆ ಕ್ರಿಮಿನಲ್ ಮೊಕದ್ದಮೆಯನ್ನು ದಾಖಲಿಸಬೇಕೆಂದು ಸಿಪಿಐ(ಎಂ) ಪ್ರತಿಭಟನೆಯ ಮುಖಾಂತರ ಒತ್ತಾಯ ಮಾಡಿ ಮನವಿ ಸಲ್ಲಿಸಿದೆ. ಸಿಪಿಐ(ಎಂ) ತಾಲೂಕು ಕಾರ್ಯದರ್ಶಿ ಗಾಳಿ ಬಸವರಾಜ, ಜಿಲ್ಲಾ ಸಮಿತಿ ಸದಸ್ಯ ವಿ.ಎಸ್. ಶಿವಶಂಕರ್, ತಾಲೂಕು ಸಮಿತಿ ಸದಸ್ಯರಾದ ಎನ್. ಸೋಮಣ್ಣ, ಎಚ್. ಯಂಕಮ್ಮ, ಕೆಂಚಪ್ಪ, ಮಂಜುನಾಥ, ಕೆ. ಜಯರಾಮ, ಹುಲುಗಪ್ಪ ಮೊದಲಾದವರು ಸಹಿ ಮಾಡಿದ್ದಾರೆ.

## ಸವದಿ ಕೈಬಿಡಲು ಮಹಿಳಾ ಸಂಘದ ಆಗ್ರಹ

ರಾಜ್ಯದ ಯಡಿಯೂರಪ್ಪರವರ ಸರ್ಕಾರ ಸದನದಲ್ಲಿ ನೀಲಿಚಿತ್ರ ವೀಕ್ಷಣೆ ಮಾಡಿ ವಾಗ್ದಂಡನೆಗೆ ಒಳಗಾದ ಲಕ್ಷಣಸವದಿಯವರನ್ನು ಮತ್ತೆ ಸಚಿವರನ್ನಾಗಿ ಹಾಗೂ ಉಪಮುಖ್ಯ ಮಂತ್ರಿಯನ್ನಾಗಿ ಸಚಿವ ಸಂಪುಟದಲ್ಲಿ ಸ್ಥಾನ ಕಲ್ಪಿಸಿರುವುದನ್ನು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ಕರ್ನಾಟಕ ರಾಜ್ಯ ಸಮಿತಿ ತೀವ್ರವಾಗಿ ಖಂಡಿಸಿದೆ.


ಸಂವಿಧಾನ, ಕಾನೂನುಗಳಲ್ಲಿ ಅವಕಾಶವಿಲ್ಲದ ಉಪ ಮುಖ್ಯಮಂತ್ರಿ ಹುದ್ದೆಯನ್ನು ಅತೃಪ್ತರನ್ನು ಸಂತೃಪ್ತರನ್ನಾಗಿಸುವ ಮಾರ್ಗವಾಗಿ ಬಳಕೆ ಮಾಡಲಾಗುತ್ತಿದೆ. ಆದರೆ ಸಧ್ಯ ಕರ್ನಾಟಕದಲ್ಲಿ ರಾಜಕೀಯ ಅರಾಜಕತೆಯನ್ನು ಸೃಷ್ಟಿ ಮಾಡಿ ಅಧಿಕಾರ ಹಿಡಿದ ಯಡಿಯೂರಪ್ಪರವರ ಸರ್ಕಾರ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಚುನಾವಣೆಯಲ್ಲಿ ಸೋತವರನ್ನು ಕೇವಲ ಮಂತ್ರಿಯಷ್ಟೆ ಅಲ್ಲ ಉಪ ಮುಖ್ಯ ಮಂತ್ರಿಯನ್ನಾಗಿ ಮಾಡಿದೆ.


ಪ್ರಜಾಪ್ರಭುತ್ವ ವ್ಯವಸ್ಥೆಗೆ ಸವಾಲೆಸೆಯುವ ರೀತಿಯಲ್ಲಿ ನಡೆದ ಕರ್ನಾಟಕದ ರಾಜಕೀಯ ಬೆಳವಣಿಗೆಗೆ ನಾವೆಲ್ಲರೂ ಸಾಕ್ಷಿಯಾಗಿದ್ದೇವೆ. ಇದಿಷ್ಟೇ ಸಾಲದೆಂಬಂತೆ ಈಗ ಮಹಿಳೆಯರ ಬಗ್ಗೆ ಕೀಳು ಭಾವನೆ ಹೊಂದಿರುವ, ಜೊತೆಗೆ ಸದನದಲ್ಲಿ ಬರ–ರೈತರ ಬವಣೆಗಳ ಬಗ್ಗೆ ಚರ್ಚೆ ನಡೆಯುತ್ತಿರುವಾಗ ನೀಲಿ ಚಿತ್ರ ವೀಕ್ಷಿಸುತ್ತಿದ್ದ ವ್ಯಕ್ತಿಯನ್ನು ತಮ್ಮ ಸಂಕುಚಿತ ಜಾತಿ ರಾಜ ಕಾರಣದ ಲೆಕ್ಕಾಚಾರದ ಭಾಗವಾಗಿ ಸಚಿವರನ್ನಾಗಿ ಮಾಡಿ, ಉಪ ಮುಖ್ಯ ಮಂತ್ರಿ ಪಟ್ಟ ಕಟ್ಟಿರುವುದು ಖಂಡನೀಯ. ಇದು ರಾಜ್ಯದ ಮಹಿಳೆಯರಿಗೆ ಮಾಡಿದ ಅವಮಾನವೆಂದು ನಾವು ಭಾವಿಸುತ್ತೇವೆ.

ದೇಶದ ಜನರಿಗೆ ಆರೋಗ್ಯ ಕಾಪಾಡಿಕೊಳ್ಳಲು 'ಫಿಟ್‌ನೆಸ್ ಡೇ' ಮಾಡಿ ಬೋಧಿಸುವ ಬಿಜೆಪಿ ಪ್ರಧಾನ ಮಂತ್ರಿಗಳು ಮೊದಲು ತಮ್ಮ ಪಕ್ಷದ ಶಾಸಕರು, ಕಾರ್ಯಕರ್ತರಿಗೆ ಸ್ವಸ್ಥ ಮಾನಸಿಕತೆಯನ್ನು ಹೊಂದಲು ಅಗತ್ಯವಾದ ವ್ಯಾಯಾಮ ಮಾಡಿಸುವ ಅಗತ್ಯವಿದೆ.

ಮಹಿಳೆಯರ ಘನತೆಯ ಕುರಿತು ಕಿಂಚಿತ್ತಾದರೂ ಗೌರವ ಇದ್ದರೆ ಲಕ್ಷ್ಮಣ ಸವದಿಯವರನ್ನು ತಕ್ಷಣ ಸಚಿವ ಸ್ಥಾನದಿಂದ ಕೈಬಿಡಬೇಕೆಂದು ಮುಖ್ಯ ಮಂತ್ರಿ ಯಡಿಯೂರಪ್ಪರವರನ್ನು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಒತ್ತಾಯಿಸುತ್ತದೆ.

–ಗೌರಮ್ಮ



ವರದಿ: ವಾ.ಉ.

# ಸಿಐಟಿಯು ಕುಂದಾಪುರ ತಾಲೂಕು ಸಮ್ಮೇಳನ:



ಸಿಐಟಿಯು ಕುಂದಾಪುರ ತಾಲೂಕು ನಾಲ್ಕನೇ ಸಮ್ಮೇಳನವು ಆಗಸ್ಟ್ 25 ರಂದು ಕುಂದಾಪುರ ಕಾರ್ಮಿಕ ಭವನದಲ್ಲಿ ನಡೆಯಿತು. ಸಿಐಟಿಯು ರಾಜ್ಯ ಉಪಾಧ್ಯಕ್ಷರಾದ ಕೆ.ಶಂಕರ್ ಅವರು ಸಮ್ಮೇಳನವನ್ನು ಉದ್ಘಾಟಿಸಿದರು.

ಕಾರ್ಮಿಕ ವರ್ಗವು ಹೋರಾಟಗಳಿಂದ ಗಳಿಸಿಕೊಂಡ ಕಾನೂನುಗಳನ್ನು ಹಾಗೂ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಸದ್ಯ ರಕ್ಷಿಸಿಕೊಳ್ಳಬೇಕಾದ ಅಗತ್ಯ ಬಂದಿದೆ. ಸಂಘ ಕಟ್ಟುವ ಹಾಗೂ ಹೋರಾಟ ನಡೆಸುವ ಹಕ್ಕುಗಳ ಮೇಲೆ ಕೇಂದ್ರ ಸರಕಾರ ಪ್ರಾಯೋಜಿತ ದಾಳಿಗಳನ್ನು ನಡೆಸಲು ಮುಂದಾಗುತ್ತಿದೆ. ಕೇಂದ್ರ ಸರಕಾರವು ತನ್ನ ಲಾಭಕ್ಕಾಗಿ ಕೆಲವೇ ಕೆಲವು ಉದ್ಯಮಪತಿಗಳಿಗೆ ವಿಪರೀತ ಲಾಭ ಮಾಡಿಕೊಡುತ್ತಿದೆ. ನೋಟ್ ರದ್ದತಿ ಹಾಗೂ ಸರಕಾರದ ತಪ್ಪು ಆರ್ಥಿಕ ನೀತಿಗಳ ಪರಿಣಾಮವಾಗಿ ಲಕ್ಷಾಂತರ ಕಾರ್ಮಿಕರು ನಿರುದ್ಯೋಗಿಗಳಾಗಿದ್ದಾರೆ. ಕೇಂದ್ರ ಸರಕಾರವು ತನ್ನ ಆಡಳಿತ ವೈಫಲ್ಯಗಳನ್ನು ಮುಚ್ಚಿಹಾಕಲು ಭಾವನಾತ್ಮಕ ವಿಷಯಗಳನ್ನು ಮುನ್ನೆಲೆಗೆ ತರುತ್ತಿದೆ ಎಂದು ಕೆ.ಶಂಕರ್ ಹೇಳಿದರು.



ಹಿರಿಯ ಕಾರ್ಮಿಕ ಮುಖಂಡ ವಿ.ನರಸಿಂಹ ಸಮ್ಮೇಳನದ ಧ್ವಜಾರೋಹಣ ನೆರವೇರಿಸಿದರು. ಎಚ್.ನರಸಿಂಹ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಸಿಐಟಿಯು ತಾಲೂಕು ಮುಖಂಡರಾದ ಸುರೇಶ್ ಕಲ್ಲಾಗರ, ಮಹಾಬಲ ವಡೇರಹೋಬಳಿ, ರಾಜೀವ ಪಡುಕೋಣೆ, ವೆಂಕಟೇಶ ಕೋಣಿ, ಸುಶೀಲ ನಾಡ ಉಪಸ್ಥಿತರಿದ್ದರು.

ಈ ಸಂದರ್ಭದಲ್ಲಿ ಕುಂದಾಪುರ ಮತ್ತು ಬೈಂದೂರು ತಾಲೂಕಿಗೆ 2 ಪ್ರತ್ಯ ಪ್ರತ್ಯೇಕ ಸಮಿತಿಗಳನ್ನು ಆಯ್ಕೆ ಮಾಡಲಾಯಿತು. ಸಿಐಟಿಯು ಕುಂದಾಪುರ ತಾಲೂಕು ಸಮಿತಿಗೆ ಸಂಚಾಲಕರಾಗಿ ಎಚ್.ನರಸಿಂಹ, ಸಹಸಂಚಾಲಕರಾಗಿ ಮಹಾಬಲ ವಡೇರಹೋಬಳಿ, ಸಂತೋಷ ಹೆಮ್ಮಾಡಿ ಒಳಗೊಂಡ 17 ಮಂದಿಯ ಸಮಿತಿಯನ್ನು ಆಯ್ಕೆ ಮಾಡಲಾಯಿತು. 15 ಮಂದಿಯ ಬೈಂದೂರು ತಾಲೂಕು ಸಮಿತಿಗೆ ಸಂಚಾಲಕರಾಗಿ ರೊಲಾಲ್ಡ್ ರಾಜೇಶ್ ಕ್ವಾಡ್ರಸ್, ಸಹಸಂಚಾಲಕರಾಗಿ ಉದಯಮೊಗೇರಿ, ಸಿಂಗಾರಿ ಆಯ್ಕೆಯಾದರು.




# ಮೋಟಾರು ವಾಹನ ಮಸೂದೆ ವಿರೋಧಿಸಿ ಉಡುಪಿ, ಮಂಗಳೂರು, ವಿಟ್ಲಗಳಲ್ಲಿ ಧರಣಿ:

ಕೇಂದ್ರ ಸರಕಾರ ಖಾಸಗಿ ಇನ್ಶೂರೆನ್ಸ್, ಅಟೋಮೊಬೈಲ್ ಸೇರಿದಂತೆ ಕಾರ್ಪರೇಟ್ ಕಂಪೆನಿಗಳಿಗೆ ಲಾಭ ಮಾಡುವ ಉದ್ದೇಶದಿಂದ ಮೋಟಾರ್ ವಾಹನ ತಿದ್ದುಪಡಿ ಮಸೂದೆ–2019ನ್ನು ಜಾರಿಗೆ ತರಲಿದೆ. ಈ ಕಾಯಿದೆ ಅವೈಜ್ಞಾನಿಕವಾಗಿದ್ದು, ಸರಕಾರ 15 ವರ್ಷಗಳಾದ ಆಟೋಗಳನ್ನು ರದ್ದುಪಡಿಸುತ್ತಿದೆ. ರಸ್ತೆ ಸಾರಿಗೆ ಸುರಕ್ಷತಾ ಹೆಸರಲ್ಲಿ ಮೂರುಬಾರಿ ಬದಲಾವಣೆ ಮಾಡಿ, ಅದನ್ನೇ ಕೇಂದ್ರ ಮೋಟಾರು ವಾಹನ ಮಸೂದೆ–2019 ಎಂದು ಜಾರಿಗೆ ಹೊರಟಿದೆ. ಆಟೋ ಚಾಲಕರ ಆದಾಯವನ್ನು ಕಿತ್ತುಕೊಳ್ಳುವ ನೀತಿಯಾಗಿದ್ದು, ಸಣ್ಣ ತಪ್ಪಿಗೂ ಸಹ 10 ಪಟ್ಟು ದಂಡ ಹೆಚ್ಚಳ ಮಾಡಲಾಗಿದೆ. ಚಾಲಕರಿಗೆ ವಿದ್ಯಾರ್ಹತೆ ಕಡ್ಡಾಯ ಮಾಡಲಾಗಿದೆ.

ಪೆಟ್ರೋಲಿಯಂ ಉತ್ಪನ್ನಗಳ ಬೆಲೆಗಳು, ವಾಹನಗಳ ಬಿಡಿಭಾಗಗಳ ದರಗಳು ಹಾಗೂ ಇನ್ಶೂರೆನ್ಸ್ ಪ್ರೀಮಿಯಂ ದರಗಳು ಈಗಾಗಲೇ ವಿಪರೀತವಾಗಿ ಹೆಚ್ಚಿದ್ದು, ಅದರಿಂದ ಕಂಗಾಲಾಗಿರುವ ಆಟೋ ರಿಕ್ಷಾ ಚಾಲಕರಿಗೆ ಕೇಂದ್ರ ಸರಕಾರವು ತಂದಿರುವ ಮೋಟಾರು ವಾಹನ ತಿದ್ದುಪಡಿ ಮಸೂದೆಯು ಗಾಯದ ಮೇಲೆ ಬರೆ ಎಳೆದಂತಾಗಿದೆ. ಇದನ್ನು ವಿರೋಧಿಸಿ ರಾಜ್ಯಾದ್ಯಂತ ಸಿಐಟಿಯು ಸಂಯೋಜಿತ ಆಟೋ ಚಾಲಕ ಸಂಘಗಳು ಆಗಸ್ಟ್ 27 ರಂದು ಧರಣಿ ನಡೆಸಲು ಕರೆಕೊಟ್ಟ ಮೇರೆಗೆ ಕರಾವಳಿ ಜಿಲ್ಲೆಗಳಲ್ಲಿ ನಡೆದಿರುವ ಧರಣಿಗಳು ವರದಿಯಾಗಿದೆ.

ಉಡುಪಿ ಜಿಲ್ಲಾಧಿಕಾರಿ ಕಚೇರಿ ಎದುರು ಉಡುಪಿ ಹಾಗೂ ಕುಂದಾಪುರ ಆಟೋ ರಿಕ್ಷಾ ಮತ್ತು ವಾಹನ ಚಾಲಕರ ನೇತೃತ್ವದಲ್ಲಿ ಧರಣಿ ನಡೆಯಿತು. ಧರಣಿಯನ್ನು ಉದ್ದೇಶಿಸಿ ಸಿಐಟಿಯು ಉಡುಪಿ ಜಿಲ್ಲಾ ಉಪಾಧ್ಯಕ್ಷ ಬಾಲಕೃಷ್ಣ ಶೆಟ್ಟಿ ಮಾತನಾಡಿದರು. ಕುಂದಾಪುರ ತಾಲೂಕು ಸಂಘದ ಅಧ್ಯಕ್ಷ ಲಕ್ಷ್ಮಣ್ ಬರೆಕಟ್ಟೆ, ಕಾರ್ಯದರ್ಶಿ ರಾಜು ದೇವಾಡಿಗ, ಉಡುಪಿ ತಾಲೂಕು ಸಂಘದ ಅಧ್ಯಕ್ಷ ರಾಜು ಸಾಲ್ಯಾನ್, ಕಾರ್ಯದರ್ಶಿ ರತ್ನಾಕರ ಮರಕಲ, ಸಿಐಟಿಯು ಉಡುಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕೆ.ಶಂಕರ್, ಜಿಲ್ಲಾ ಮುಖಂಡರಾದ ಎಚ್.ನರಸಿಂಹ, ಶಶಿಧರ ಗೊಲ್ಲ, ಕವಿರಾಜ್ ಭಾಗವಹಿಸಿದ್ದರು.

ಮಂಗಳೂರಿನಲ್ಲಿ ಜಿಲ್ಲಾಧಿಕಾರಿ ಕಚೇರಿ ಎದುರು ನಡೆದ ಪ್ರತಿಭಟನೆಯನ್ನುದ್ದೇಶಿಸಿ ಸಿಐಟಿಯು ದ.ಕ. ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್ ಮಾತನಾಡಿದರು. ಪ್ರತಿಭಟನೆಯಲ್ಲಿ ಸಿಐಟಿಯು ಜಿಲ್ಲಾ ಮುಖಂಡರಾದ ಯೋಗೀಶ್ ಜಪ್ಪಿನಮೊಗರು, ಜಯಂತ ನಾಯ್ಕ್, ಸಂತೋಷ್ ಆರ್.ಎಸ್, ಆಟೋ ರಿಕ್ಷ ಚಾಲಕರ ಸಂಘಟನೆಯ ಮಹಮ್ಮದ್ ಅನ್ವಾರ್ ಭಾಗವಹಿಸಿದ್ದರು.

ವಿಟ್ಲ ನಾಡಕಚೇರಿ ಎದುರು ವಿಟ್ಲ ಆಟೋರಿಕ್ಷಾ ಡ್ರೈವರ್ಸ್ ಯೂನಿಯನ್ ನೇತೃತ್ವದಲ್ಲಿ ನಡೆದ ಪ್ರತಿಭಟನೆಯನ್ನುದ್ದೇಶಿಸಿ ಸಿಐಟಿಯು ದ.ಕ.ಜಿಲ್ಲಾ ಕಾರ್ಯದರ್ಶಿ ರಾಮಣ್ಣ ವಿಟ್ಲ ಮಾತನಾಡಿದರು. ಸಿಐಟಿಯು ಜಿಲ್ಲಾ ಸಮಿತಿ ಸದಸ್ಯ ದೇಜಪ್ಪ ಪೂಜಾರಿ, ಡ್ರೈವರ್ಸ್ ಯೂನಿಯನ್ ಮುಖಂಡರಾದ ಶಿವಪ್ಪ ನಾಯ್ಕ್, ತಾರನಾಥ ಮತ್ತಿತರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.







## ಬೆಳ್ತಂಗಡಿ ಪ್ರಕೃತಿ ವಿಕೋಪ
# ರೈತ ಸಂಘ ನಿಯೋಗದಿಂದ ಪ್ರತ್ಯಕ್ಷ ದರ್ಶನ

ಆಗಸ್ಟ್ ತಿಂಗಳ ಆರಂಭದಿಂದಲೇ ಕರಾವಳಿಯ ಮೂರು ಜಿಲ್ಲೆಗಳಲ್ಲಿ ವಿಪರೀತ ಮಳೆ ಒಂದೇ ಸವನೆ ಸುರಿದು ಅನಾಹುತಗಳನ್ನು ಸೃಷ್ಟಿಸಿದ್ದು, ಮಾಧ್ಯಮಗಳಲ್ಲೂ ವರದಿಯಾಗಿದೆ. ಆಗಸ್ಟ್ 9 ರಂದು ಬೆಳ್ತಂಗಡಿ ತಾಲೂಕಿನ ಪಶ್ಚಿಮ ಘಟ್ಟ ಪ್ರದೇಶದಲ್ಲಿ ಮೇಘಸ್ಫೋಟದಿಂದ ಮಳೆಯಾಗಿರುವುದು ಅಲ್ಲಿನ ಭೌಗೋಲಿಕ ಚಹರೆಗಳನ್ನೇ ಬದಲಾಯಿಸಿಬಿಟ್ಟಿದೆ. (ಜನಶಕ್ತಿಯ ಕಳೆದ ವಾರದ ಸಂಚಿಕೆಯಲ್ಲಿ ಆದಿವಾಸಿ ಮಲೆಕುಡಿಯರ ವಸತಿ ಪ್ರದೇಶಗಳಿಗೆ ಆಗಿದ್ದ ಅನಾಹುತದ ಬಗ್ಗೆ ಶೇಖರ ಲಾಯಿಲ ವಿವರಿಸಿದ್ದಾರೆ.)

ಆಗಸ್ಟ್ 22 ರಂದು ಕರ್ನಾಟಕ ಪ್ರಾಂತ ರೈತ ಸಂಘದ ದ.ಕ.ಜಿಲ್ಲಾ ಸಮಿತಿ ಆದಿವಾಸಿ ಹಕ್ಕುಗಳ ಜಿಲ್ಲಾ ಸಮಿತಿ ಮುಂದಾಳುಗಳ ಜೊತೆಗೂಡಿ ಬೆಳ್ತಂಗಡಿಯ ಪ್ರಮುಖ ಬಾಧಿತ ಪ್ರದೇಶಗಳಿಗೆ ಭೇಟಿ ನೀಡಿತು ಮತ್ತು ಅಲ್ಲಿನ ರೈತ ಸಂಘ ಮತ್ತು ಆದಿವಾಸಿ ಹಕ್ಕುಗಳ ತಾಲೂಕು ಸಮಿತಿ ಸದಸ್ಯರಿಂದ ಮಾಹಿತಿ ಸಂಗ್ರಹಿಸಿತು. ಭೇಟಿ ನೀಡಿದ ಪ್ರದೇಶಗಳಲ್ಲಿ ಮನೆ ಕಳಕೊಂಡ ನಾಗರಿಕರನ್ನು ಮಾತನಾಡಿಸಿತು. ಅಡಿಕೆ, ತೆಂಗು, ಬಾಳೆ ಬೆಳೆಗಾರರ, ಕೆಲವೆಡೆ ಭತ್ತದ ಬೆಳೆಗಾರರ ಕೃಷಿಭೂಮಿಯೂ ಬೆಳೆಗಳೂ ಹಾನಿಗೀಡಾಗಿದ್ದು, ಜಾನುವಾರುಗಳು ಘಾಸಿಗೊಂಡಿವೆ. ಇಂಥ ರೈತರನ್ನು ಕೆಲವರನ್ನು ಭೇಟಿಯಾಗಿ ಸಾಂತ್ವಾನ ವ್ಯಕ್ತಪಡಿಸಿತು.

ಕರಾವಳಿ ಜಿಲ್ಲೆಗಳಲ್ಲಿ ಮಾಮೂಲಾಗಿ ಉಂಟಾಗುವ ನೆರೆ, ಪ್ರವಾಹಗಳಂತೆ ಬೆಳ್ತಂಗಡಿ ಭಾಗದ ಪ್ರವಾಹ ಇರಲಿಲ್ಲ. ಆಗಸ್ಟ್ 9ರ ಧಾರಾಕಾರ ಮಳೆಗೆ ಸಾವಿರಾರು ಅಡಿಗಳ ಎತ್ತರದ ಪರ್ವತ ಪ್ರದೇಶಗಳ ಕೆಲವು ಮಗ್ಗುಲುಗಳು ಬೃಹತ್ ವೃಕ್ಷಗಳ ಸಮೇತ ಜರಿದುಬಿದ್ದು–ಹಲವಾರು ಕಡೆ ದೂರದಿಂದಲೇ ಕಾಣಿಸುವಂಥ–ಭೂಕುಸಿತಗಳಾಗಿವೆ. ಕುದುರೆಮುಖ, ಎಳನೀರು, ಬಂಡಾಜೆ ಅಬ್ಬಿ, ಚಾರ್ಮಾಡಿ, ಬಾಂಜಾರುಮಲೆ–ಈ ಪರ್ವತ ಪ್ರದೇಶ ಅರ್ಧ ವೃತ್ತಾಕಾರದಲ್ಲಿ ಬೆಳ್ತಂಗಡಿ ತಾಲೂಕಿನ ಈಶಾನ್ಯ ಭಾಗವನ್ನು ಆವರಿಸಿದ್ದು, ಅಲ್ಲಿ ಉಂಟಾದ ಮಳೆ, ಭೂಕುಸಿತ ಹಾಗೂ ಪ್ರವಾಹದಿಂದಲಾಗಿ, ದೈತ್ಯ ಗಾತ್ರದ ಮರಗಳು ದಿಢೀರ್ ಉಂಟಾದ ಪ್ರವಾಹದಲ್ಲಿ ಕಿಲೋಮೀಟರ್‌ಗಟ್ಟಲೆ ದೂರ ತೇಲಿ ಬರುತ್ತಾ ಸೇತುವೆ, ಅಣೆಕಟ್ಟು ಅಡಿಕೆ ತೋಟಗಳಲ್ಲಿ ಜಮೆಯಾಗಿದೆ. ಸೇತುವೆ, ತೂಗುಸೇತುವೆಗಳನ್ನು ಮುರಿದಿದೆ. ಪರ್ವತದಲ್ಲಿ ಎಲ್ಲಿತ್ತೋ ಮರಳು, ಆ ಮರಳನ್ನು ಹಿತ್ತಿಲು ತೋಟಗಳಲ್ಲಿ ತುಂಬಿ ಬಿಟ್ಟಿದೆ. ಭತ್ತದ ಗದ್ದೆಗಳನ್ನು ಮರಳು ಆವರಿಸಿದೆ. ಸಮೀಕ್ಷಾ ತಂಡ ಭೇಟಿ ನೀಡಿದಾಗಲೂ ಮರ, ದಿಮ್ಮಿಗಳು, ಮರಳು ರಾಶಿ ಇನ್ನೂ ಅಲ್ಲೇ ಇದ್ದವು.

ಸಂಜೆ ಬೆಳ್ತಂಗಡಿಯಲ್ಲಿ ಪತ್ರಿಕಾಗೋಷ್ಠಿ ನಡೆಸಿ, ಬೆಳ್ತಂಗಡಿ ತಾಲೂಕಿನಲ್ಲಿ ಆಗಿರಬಹುದಾದ ಹಾನಿಗಳ ಬಗ್ಗೆ ಮಾಧ್ಯಮದವರಿಗೆ ವಿವರಿಸಲಾಯಿತು. ಜಿಲ್ಲಾಧಿಕಾರಿಗಳಿಗೆ ಪರಿಹಾರ ನೀಡುವ ಬಗ್ಗೆ ಮನವಿ ಸಲ್ಲಿಸುವುದಾಗಿ ತಿಳಿಸಲಾಯಿತು. ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪನವರು ಭೇಟಿ ನೀಡಿದಾಗ ಕುಕ್ಕಾವು ಎಂಬಲ್ಲಿ ಮಾತ್ರ ಸೇತುವೆಯಿಂದ ➚



## ಸಾರ್ವಜನಿಕ ಆಸ್ಪತ್ರೆಗಳ ಅವ್ಯವಸ್ಥೆ ನಿವಾರಣೆಗೆ ಆಗ್ರಹ

**ಹೊಸಪೇಟೆ:** ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣದ ಕಾರ್ಮಿಕರು ಸಿಡಬ್ಲ್ಯೂಎಫ್ಐ, ಸಿಐಟಿಯು ಸೇರಿದಂತೆ ಹೊಸಪೇಟೆಯ ನಾಗರೀಕರು ಸಾರ್ವಜನಿಕ ಆಸ್ಪತ್ರೆಗಳ ಹಲವು ಕುಂದು ಕೊರತೆಗಳನ್ನು ನಿವಾರಿಸಲು, ಹಾಗೂ ಅವ್ಯವಸ್ಥೆ ಸರಿಪಡಿಸಲು ಆಗ್ರಹಿಸಿ ಹೋರಾಟ ನಡೆಸಿದರು. ಈ ಸಂದರ್ಭ ದಲ್ಲಿ ಉಪಸ್ಥಿತರಿದ್ದ ಸಿಐಟಿಯು ರಾಜ್ಯ ಉಪಾಧ್ಯಕ್ಷರಾದ ಆರ್.ಎಸ್. ಬಸವರಾಜರವರು ಮಾತನಾಡಿ ಬಳ್ಳಾರಿ ಜಿಲ್ಲೆಯ ವಿಮ್ಸ್ ಸೇರಿದಂತೆ ಎಲ್ಲಾ ತಾಲೂಕೂಗಳಲ್ಲಿನ ಸಾರ್ವಜನಿಕ ಆಸ್ಪತ್ರೆಗಳಲ್ಲಿ ಬಡರೋಗಿಗಳಿಗೆ ಸರಿಯಾಗಿ ಚಿಕಿತ್ಸೆ ಸಿಗುತ್ತಿಲ್ಲ. ಕರ್ತವ್ಯ ನಿರತ ವೈದ್ಯರಿಂದ ವ್ಯಾಪಕ ಹಣ ಸುಲಿಗೆ, ಹಾಗೂ ಪೀಠೋಪಕರಣಗಳ ಕೊರತೆ, ಮಾರಕ ಖಾಯಿಲೆಗಳಿಗೆ ನುರಿತ ವೈದ್ಯರ ಕೊರತೆ, ಔಷಧಿಗಳು ಇಲ್ಲದಿರುವುದು, ಅನೇಕ ಗಂಭೀರ ಸಮಸ್ಯೆಗಳು ಕಾಣಸಿಗುತ್ತಿವೆ. ಇದಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರಗಳಿಗೆ ಹಲವು ಸಲ ಮನವಿ ಮಾಡಿದರು ಪ್ರಯೋಜನವಾಗಿಲ್ಲ ಮತ್ತು ಅದೇ ರೀತಿ ಸೌಕರ್ಯಗಳ ಆರೋಗ್ಯ, ಹಾಗು ಮೂಲಭೂತ ಸೌಕರ್ಯ ಕಲ್ಪಿಸಲು ಗಣಿಗಾರಿಕೆ ವಿಕೋಪಕ್ಕೆ ನಲುಗಿದ ಜನರಿಗಾಗಿ 20000 ಕೋಟಿ ಸಂಗ್ರಹ ಆಗಿದೆ. ಅದನ್ನು ಕಾರ್ಮಿಕರ, ಬಡವರ, ನಿರ್ಗತಿಕರ ಹಿತದೃಷ್ಟಿಯಿಂದ ಮಲ್ಟಿಸ್ಪೆಷಲ್ ಆಸ್ಪತ್ರೆ ಸೇರಿದಂತೆ ಈ ಜಿಲ್ಲೆಯಲ್ಲಿ ಅವಶ್ಯಕ ಇದೆ ಎಂದರು. ಈ ಸಂದರ್ಭದಲ್ಲಿ ಆರ್. ಭಾಸ್ಕರ ರೆಡ್ಡಿ, ಎಂ. ಜಂಬಯ್ಯನಾಯ್ಕ, ಎಂ. ಗೋಪಾಲ, ಎನ್. ಯಲ್ಲಾಲಿಂಗ, ಡಿಹೆಚ್ಎಸ್ ನ ರಮೇಶ, ರಾಮಾಂಜಿನಿ, ಮಹಿಳಾ ಮುಖಂಡರು, ಕಾರ್ಯಕರ್ತರು, ಭಾಗವಹಿಸಿದ್ದರು.

## ನಿವೇಶನ ರಹಿತರಿಗೆ ನಿವೇಶನ ಮಂಜೂರು ಮಾಡಲು ಕೆಪಿಆರ್ಎಸ್ ಆಗ್ರಹ

ಲಿಂಗಸುಗೂರು: ತಾಲೂಕಿನಲ್ಲಿ ಕಳೆದ ಮೂರ್ನಾಲ್ಕು ವರ್ಷಗಳಿಂದ ಬರಬಿದ್ದಿದ್ದು, ಬಡವರು ಬದುಕು ಸಾಗಿಸುವುದು ದುಸ್ತರವಾಗಿದೆ. ಸಹಸ್ರಾರು ಜನ ಸೂರಿಲ್ಲದೇ ಸಂಕಷ್ಟದ ಜೀವನ ನಡೆಸುತ್ತಿದ್ದಾರೆ. ಕೂಡಲೇ ಸಮೀಕ್ಷೆ ಮಾಡಿ ತಾಲೂಕಿನ ನಿವೇಶನ ರಹಿತ ಕುಟುಂಬಗಳಿಗೆ ನಿವೇಶನ ಮಂಜೂರು ಮಾಡಬೇಕೆಂದು ಕರ್ನಾಟಕ ಪ್ರಾಂತ ರೈತ ಸಂಘದ ಕಾರ್ಯಕರ್ತರು ಒತ್ತಾಯಿಸಿದರು.

ತಾಲೂಕು ಪಂಚಾಯತ್ ಅಧಿಕಾರಿಗೆ ಶುಕ್ರವಾರ ಮನವಿ ಸಲ್ಲಿಸಿ, ತಾಲೂಕಿನ ಮುದಗಲ್, ಬನ್ನಿಗೋಳ, ತಲೆಖಾನ್, ವೀರಾಪೂರ, ನಿಲೋಗಲ್, ಚಿಕ್ಕನಗನೂರು, ಹಿರೇನಗನೂರು, ಯರದಾಳ, ಮಟ್ಟೂರು, ಮಟ್ಟೂರು ತಾಂಡ, ಹಿರೇಲೆಕ್ಕಿಹಾಳ, ಆಮ್ದಿಹಾಳ ಸೇರಿ ನಾನಾ ಗ್ರಾಮಗಳಲ್ಲಿ ಸಹಸ್ರಾರು ಬಡವರು ಸೂರಿಲ್ಲದೇ ವಸತಿ ವಂಚಿತರಾಗಿದ್ದಾರೆ.

ಬದುಕಿನ ಬಂಡಿ ಸಾಗಿಸಲು ಬೆಂಗಳೂರು, ಪೂನಾ, ಗೋವಾ, ಬಾಂಬೆಗಳಂಥ ಮಹಾನಗರಗಳಿಗೆ ಗುಳೆ ಹೋಗುತ್ತಿದ್ದಾರೆ. ಗುಳೆ ತಡೆಯುವಲ್ಲಿ ಆಡಳಿತ ವಿಫಲವಾಗಿದೆ. ಕರ್ನಾಟಕ ಪ್ರಾಂತ ರೈತ ಸಂಘದ ನೇತೃತ್ವದಲ್ಲಿ ನಿವೇಶನ ರಹಿತ ಬಡವರಿಗೆ ನಿವೇಶನ ಹಂಚಿಕೆ ಮಾಡಬೇಕೆಂದು ಒತ್ತಾಯಿಸಿದರು.

ಸಂಘಟನೆಯ ಜಿಲ್ಲಾ ಕಾರ್ಯದರ್ಶಿ ಕೆ.ಜಿ.ವಿರೇಶ, ತಾಲೂಕು ಅದ್ಯಕ್ಷ ಮಾನಪ್ಪ ಲೆಕ್ಕಿಹಾಳ, ಉಪಾಧ್ಯಕ್ಷ ಆಂಜನೇಯ, ಕಾರ್ಯದರ್ಶಿ ಹನುಮಂತ ಬಲದಂಡೆ, ಎಸ್.ಎಫ್.ಐ. ಜಿಲ್ಲಾ ಕಾರ್ಯದರ್ಶಿ ರಮೇಶ ವೀರಾಪೂರ, ಮುಖಂಡರಾದ ಸದ್ದಾಂಹುಸೇನ್, ಕರಿಯಪ್ಪ, ರಮೇಶ, ತಿಪ್ಪಣ್ಣ ನಿಲೋಗಲ್, ಶಿವಪ್ಪ, ಅಮರಪ್ಪ, ಬಸಲಿಂಗಪ್ಪ ಸೇರಿ ಇತರರು ಇದ್ದರು.




## ಜಾತ್ಯತೀತತೆ ಮೌಲ್ಯಗಳನ್ನು ಎತ್ತಿ ಹಿಡಿದ ಪ್ರಖರ ರಾಜಕಾರಣಿ ಎ.ಕೆ. ಸುಬ್ಬಯ್ಯ



ಎ.ಕೆ. ಸುಬ್ಬಯ್ಯ ಕರ್ನಾಟಕ ಕಂಡ ಅಪರೂಪದ ರಾಜಕಾರಣಿ. ಪಿ.ಎಸ್.ಪಿ., ಜನಸಂಘದಲ್ಲಿ ತಮ್ಮ ರಾಜಕೀಯ ಜೀವನ ಆರಂಭಿಸಿ ಬಿಜೆಪಿಯ ಮೊದಲ ರಾಜ್ಯ ಘಟಕದ ಅಧ್ಯಕ್ಷರಾಗಿದ್ದು ಆರೆಸ್ಸೆಸ್ ಮೂಗು ತೂರಿಸುವಿಕೆ, ಮೌಲ್ಯಗಳು ಎರಡರ ವಿರುದ್ಧವೂ ಬಂಡೆದ್ದು, ಜಾತ್ಯತೀತ ಮೌಲ್ಯಗಳನ್ನು ಪ್ರಾಮಾಣಿಕವಾಗಿ ದೃಢವಾಗಿ ಎತ್ತಿ ಹಿಡಿದ ರಾಜಕಾರಣಿಯಾಗಿ ಹೊಮ್ಮಿದ್ದು ಒಂದು ಅಚ್ಚರಿ. ಕರ್ನಾಟಕದ ಹೆಚ್ಚು ಕಡಿಮೆ ಎಲ್ಲಾ ಪ್ರಮುಖ ರಾಜಕೀಯ ಪಕ್ಷಗಳಲ್ಲಿ ಇದ್ದರೂ, ಅವರು ಅಧಿಕಾರದಿಂದ ದೂರವಿದ್ದೋ (ಅಥವಾ ದೂರವಿಡಲ್ಪಟ್ಟೋ) ಪ್ರಖರ ವಿರೋಧ ಪಕ್ಷದ ರಾಜಕಾರಣಿಯಾಗಿ ಮಿಂಚಿದ್ದೇ ಹೆಚ್ಚು. ಲೋಕಸಭೆ, ವಿಧಾನ ಸಭೆ, ವಿಧಾನ ಪರಿಷತ್ತು ಎಲ್ಲದರಲ್ಲೂ ಚುನಾಯಿತರಾಗಿದ್ದರೂ, ಅವರು ಚುನಾವಣಾ ರಾಜಕಾರಣದಲ್ಲಿ ಸೋತಿದ್ದೇ ಹೆಚ್ಚು. ಹಲವು ಪಕ್ಷಗಳಲ್ಲಿ ಇದ್ದಿದ್ದು ಅವಕಾಶವಾದಿತನದಿಂದ ಅಲ್ಲ, ಪ್ರಾಮಾಣಿಕವಾಗಿ ತಾವು ನಂಬಿದ ಮೌಲ್ಯಗಳಿಗೆ ನಡೆದುಕೊಂಡಿದ್ದರಿಂದ. ಯಾರಿಗೂ ತಗ್ಗಿ ಬಗ್ಗಿ ನಡೆಯಲು ನಿರಾಕರಿಸಿದ್ದರಿಂದ. ರಾಮಕೃಷ್ಣ ಹೆಗಡೆ ಸರಕಾರಕ್ಕೆ ಅವರ ನಾಯಕತ್ವದ ಬಿಜೆಪಿ ಬೆಂಬಲಿಸಿದ್ದರಿಂದ ಅವರು ಬೇಕಾಗಿದ್ದರೆ ಉಪಮುಖ್ಯಮಂತ್ರಿ ಆಗಬಹುದಿತ್ತು. ಆದರೆ ಅವರು ಹೊರಗಿಂದ ಬೆಂಬಲಿಸುತ್ತಾ ವಿರೋಧ ಪಕ್ಷವಾಗಿ ಇರುವುದನ್ನು ಆಯ್ದುಕೊಂಡರು.

ಅವರು ತುರ್ತು ಪರಿಸ್ಥಿತಿಯಲ್ಲಿ ಬಂಧಿತರಾದ ಮೊದಲ ಮತ್ತು ಕೊನೆಯ ಬಿಡುಗಡೆಯಾದ ರಾಜಕೀಯ ಕೈದಿಯಾಗಿದ್ದರು. ದೇವರಾಜ ಅರಸು, ಗುಂಡೂ ರಾವ್, ರಾಮಕೃಷ್ಣ ಹೆಗಡೆ ಅವರ ಸರಕಾರಕ್ಕೆ ಸಿಂಹಸ್ವಪ್ನವಾಗಿದ್ದವರು. ಗುಂಡೂರಾವ್ ಸರಕಾರದ ಇಬ್ಬರು ಮಂತ್ರಿಗಳು ಅವರ ಟೀಕೆಗೆ ಬಲಿಯಾಗಿ ರಾಜೀನಾಮೆ ಕೊಡಬೇಕಾಗಿ ಬಂದಿತ್ತು. ವಿರೋಧಿ ರಾಜಕಾರಣಿಯಾಗಿ ಸುಬ್ಬಯ್ಯ ಅವರನ್ನು, ಅರಸು ಅವರಂಥ ಗಟ್ಟಿ ರಾಜಕಾರಣಿ ಸಹ ವಿಧಾನ ಪರಿಷತ್ತಿನಲ್ಲಿ ಎದುರಿಸಲಾಗದೆ ವಿಧಾನ ಪರಿಷತ್ತನ್ನೇ ರದ್ದು ಮಾಡಬೇಕೆಂದು ಬಯಸಿದ್ದರಂತೆ!

ಸುಬ್ಬಯ್ಯ ಉತ್ತಮ ವಾಗ್ಮಿಯಲ್ಲದೆ ಲೇಖಕರು ಸಹ. ಅವರ 'ಆರೆಸ್ಸೆಸ್ ಅಂತರಂಗ' ಕರ್ನಾಟಕದಲ್ಲಿ ಆರೆಸ್ಸೆಸ್ ನ್ನು ಬಯಲಿಗೆಳೆದ ಗಮನಾರ್ಹ ಕೃತಿ. ಈಗಲೂ ಆರೆಸ್ಸೆಸ್ ಗೆ ಇರುಸು ಮುರುಸು ತರುವ ಕೃತಿ. ಬಹುಶಃ ಇಂತಹ ಕೃತಿಗಳಲ್ಲಿ ಅತ್ಯುತ್ತಮ ಬೆಸ್ಟ್ ಸೆಲರ್. ಅವರ ಇತರ ಭಾಷಣಗಳ, ಬರಹಗಳ ಅನೇಕ ಕೃತಿಗಳು ಬಂದಿವೆ.

ಅವರು ಉತ್ತಮ ವಕೀಲರೂ, ಹೋರಾಟಗಾರರೂ ಆಗಿದ್ದರು. ತಮ್ಮ ರಾಜಕೀಯ ಜೀವನದ ಆರಂಭದಿಂದ ಕೊನೆಯ ವರೆಗೂ ಹಲವು ಹೋರಾಟಗಳಲ್ಲಿ ಭಾಗವಹಿಸಿದ್ದರು. ಜಾತ್ಯತೀತತೆಯ ರಕ್ಷಣೆಗೆ ಅವರ ಬದ್ಧತೆ ಕರ್ನಾಟಕದ ರಾಜಕಾರಣಿಗಳಲ್ಲಿ ಅಪರೂಪದ್ದು. ಬಾಬರಿ ಮಸೀದಿ ಕೆಡವಿದ ಸಂದರ್ಭದಲ್ಲಿ, ಬಾಬಾ ಬುಡನ್ ಗಿರಿ ವಿವಾದ ಎದ್ದಾಗ ಅವರು ಕೋಮುವಾದದ ವಿರುದ್ಧ ದೃಢವಾಗಿ ನಿಂತು ಸೌಹಾರ್ದತೆ ಬಹುತ್ವ ಎತ್ತಿ ಹಿಡಿಯಲು ರಾಜ್ಯಾದ್ಯಂತ ಪ್ರಚಾರ–ಪ್ರಕ್ಷೋಭೆಯಲ್ಲಿ ಪಾತ್ರ ವಹಿಸಿದ್ದನ್ನು ಎಂದೂ ಮರೆಯಲಾಗದು.

ಇಂದಿನ ರಾಜಕೀಯ ಪರಿಸ್ಥಿತಿಯಲ್ಲಿ ಇಂತಹ ಅಪರೂಪದ ರಾಜಕಾರಣಿಯ ಸಾವು ನಿಜವಾಗಿಯೂ ತುಂಬಲಾಗದ ನಷ್ಟ.

## ದೇವದಾಸಿಯರಿಗೆ ಪುನರ್ವಸತಿ ಪ್ರೋತ್ಸಾಹ ಧನ ಹೆಚ್ಚಿಸಲು ಹೋರಾಟ




3 ನೇ ದಿನದ ಪ್ರತಿಭಟನೆ 23 ಆಗಸ್ಟ್ 2019 ರಂದು ಕ.ರಾ. ದೇವದಾಸಿ ಮಹಿಳೆಯರ ವಿಮೋಚನಾ ಸಂಘ.ಹಾಗೂ ಕ.ರಾ.ದೇವದಾಸಿ ಮಹಿಳೆಯರ ಮಕ್ಕಳ ಹೋರಾಟ ಸಮಿತಿ. ಜಂಟಿಯಾಗಿ ದೇವದಾಸಿ ಮಹಿಳೆಯರಿಗೆ ತಿಂಗಳಿಗೆ 5 ಸಾವಿರ ರೂ ಪ್ರೋತ್ಸಾಹ ಧನ ನೀಡುವಂತೆ ಮತ್ತು ಅವರ ಕುಟುಂಬದ ಸದಸ್ಯರನ್ನು ಗಣತಿ ಮಾಡಿ ಪುನರ್ವಸತಿ ಕಲ್ಪಿಸುವಂತೆ ಒತ್ತಾಯಿಸಿ ಹಂಪಾ ಪಟ್ಟಣ ಪಂಚಾಯಿತಿ ಕಛೇರಿ ಎದುರು 3 ದಿನ ಪ್ರತಿಭಟನೆ ನಡೆಸಿ ಮಾನ್ಯ ಮುಖ್ಯಮಂತ್ರಿ ಗಳಿಗೆ ಪಿಡಿಓ ಮೂಲಕ ಮನವಿ ಪತ್ರ ಕೊಡಲಾಯಿತು. ಪ್ರತಿಭಟನೆಯ ನೇತೃತ್ವವನ್ನು. ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ. ಬಿ. ಮಾಳಮ್ಮ ತಾಲ್ಲೂಕು. ಕಾರ್ಯದರ್ಶಿ. ಪಿ.ಚಾಂದಬೀ. ನೀಲಮ್ಮ ವಹಿಸಿದ್ದರು. ಪ್ರಾಂತ ರೈತ ಸಂಘದ ಆನಂದ್ ಸಿ. ಹನುಮಂತಪ್ಪ. ಸಿಐಟಿಯು ಎಸ್. ಜಗನ್ನಾಥ. ದೊಡ್ಡ ಬಸವರಾಜ ಹೋರಾಟವನ್ನು ಬೆಂಬಲಿಸಿ ಮಾತನಾಡಿದರು.

➘ಕಾಣುವ ಅನಾಹುತಗಳನ್ನು ವೀಕ್ಷಿಸಿ ಬಳಿಕ ಧರ್ಮಸ್ಥಳಕ್ಕೆ ಹೋದುದು ಬೆಳ್ತಂಗಡಿ ತಾಲೂಕಿನ ಜನರ ಅತೃಪ್ತಿಗೆ ಕಾರಣವಾಗಿರುವುದು ಜನಗಳೊಟ್ಟಿಗೆ ಮಾತನಾಡಿದಾಗ ತಿಳಿದುಬಂತು.

ಕರ್ನಾಟಕ ಪ್ರಾಂತ ರೈತ ಸಂಘದ ದ.ಕ.ಜಿಲ್ಲಾ ಸಮಿತಿ ಅಧ್ಯಕ್ಷ ಕೃಷ್ಣಪ್ಪ ಸಾಲ್ಯಾನ್, ಕಾರ್ಯದರ್ಶಿ ಯಾದವ ಶೆಟ್ಟಿ, ಕೋಶಾಧಿಕಾರಿ ವಾಸುದೇವ ಉಚ್ಚಿಲ, ಸಿಪಿಐ(ಎಂ) ದ.ಕ.ಜಿಲ್ಲಾ ಸಮಿತಿ ಕಾರ್ಯದರ್ಶಿ ವಸಂತ ಆಚಾರಿ, ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿ ರಾಜ್ಯ ಸಹಸಂಚಾಲಕರಾದ ಡಾ.ಕೃಷ್ಣಪ್ಪ ಕೊಂಚಾಡಿ, ಬೆಳ್ತಂಗಡಿ ತಾಲೂಕು ಆದಿವಾಸಿ ಮುಖಂಡರಾದ ವಸಂತ ನಡ, ಶೇಖರ ಲಾಯಿಲ, ಜಯಾನಂದ ಪಿಲಿಕಲ, ಬೆಳ್ತಂಗಡಿ ತಾಲೂಕು ಪ್ರಾಂತ ರೈತ ಸಂಘದ ಎಸ್.ಎಂ.ಶಿವಕುಮಾರ್ ಪ್ರತ್ಯಕ್ಷದರ್ಶಿ ತಂಡದ ಭಾಗವಾಗಿದ್ದರು.

**ಬೆಳ್ತಂಗಡಿ ಪ್ರಕೃತಿ ವಿಕೋಪಕ್ಕೆ ಸಂಬಂಧಿಸಿ ಜಿಲ್ಲಾಡಳಿತದ ಮುಂದಿಟ್ಟ ಬೇಡಿಕೆಗಳು:**

1. ಬೆಳ್ತಂಗಡಿ ತಾಲೂಕಿನಲ್ಲಿ ರೂ.600 ಕೋಟಿಗೂ ಹೆಚ್ಚು ಬೆಳೆ, ಜಾನುವಾರು ಹಾಗೂ ಮನೆ ಸೊತ್ತುಗಳಿಗೆ ಹಾನಿಯಾಗಿದ್ದು, ಈ ತಾಲೂಕಿಗೇನೇ ರೂ.600 ಕೋಟಿ ಪರಿಹಾರ ಸರಕಾರ ಬಿಡುಗಡೆ ಮಾಡಬೇಕು.
2. ರೈತರ ಬೆಳೆಗೆ ಪರಿಹಾರವನ್ನು ರೈತರ ಅನುಭೋಗದಲ್ಲಿರುವ ಜಮೀನಿನಲ್ಲಿರುವ ಮರ, ಗಿಡಗಳನ್ನು ಲೆಕ್ಕ ಹಾಕಿ ಮಾಡಬೇಕೇ ಹೊರತು, ಕಂದಾಯ ಇಲಾಖೆ ದಾಖಲೆಗಳಲ್ಲಿ ಕಾಣುವ ಅವರ ಜಮೀನಿನ ಅಳತೆ ಮೇಲೆ ಮಾಡಬಾರದು. ಜನರಿಗೆ ಆಗಿರುವ ನಷ್ಟವನ್ನು ವೈಜ್ಞಾನಿಕವಾಗಿ ಗಣನೆ ಮಾಡಬೇಕು.
3. ಸಂತ್ರಸ್ತ ನಾಗರಿಕರನ್ನು, ರೈತರನ್ನು, ಆದಿವಾಸಿಗಳನ್ನು ಇನ್ನೂ ಸರಕಾರೀ ಅಧಿಕಾರಿಗಳು ಜನಪ್ರತಿನಿಧಿಗಳು ಸಂಪರ್ಕಿಸಿಲ್ಲವಾಗಿ ಅವರು ಭರವಸೆ ಕಳೆದುಕೊಂಡಿದ್ದಾರೆ. ಹಾಗಾಗಿ ಜನರಲ್ಲಿ ಭರವಸೆ ಹುಟ್ಟಿಸುವ ಕೆಲಸ ಜಿಲ್ಲಾಡಳಿತ ಮಾಡಬೇಕು.
4. ಮನೆ ಕಳಕೊಂಡವರಿಗೆ ತುರ್ತು ಪರಿಹಾರ ರೂ.3800– ಮಾತ್ರ ನೀಡಲಾಗಿದೆ. ಈ ತುರ್ತು ಪರಿಹಾರ ಕನಿಷ್ಟ ರೂ.10,000– ನೀಡಬೇಕು.
5. ಆದಿವಾಸಿ ಪ್ರದೇಶಗಳಿಗೆ ಸಂಪರ್ಕರಸ್ತೆ, ಸೇತುವೆ ಕಡಿದು ಹೋಗಿರುವಲ್ಲಿ ತುರ್ತಾಗಿ ಬದಲಿ ಸಂಪರ್ಕ ವ್ಯವಸ್ಥೆ ಮಾಡಬೇಕು ಹಾಗೂ ಆಹಾರ ವಸ್ತುಗಳನ್ನು ಒದಗಿಸಬೇಕು. ●

ಅತಿಥಿ ಅಂಕಣ



ಪ್ರೊ. ರಾಜೇಂದ್ರ ಚೆನ್ನಿ

# ಪ್ರೆಸ್ ಕೌನ್ಸಿಲ್ ಸರಕಾರದ ಮುಂದೆ ತೆವಳಿದಾಗ...

ಇಂದಿರಾಗಾಂಧಿಯವರು ದೇಶದ ಮೇಲೆ ಹೇರಿದ ತುರ್ತುಪರಿಸ್ಥಿತಿಯನ್ನು ಬೆಂಬಲಿಸಿದವರ ಬಗ್ಗೆ ಒಂದು ಪ್ರಸಿದ್ಧವಾದ ಮಾತಿದೆ. “When they were asked to bend, they chose to crawl” ಎಂದು. ಅಂದರೆ ಕೇವಲ ಬಗ್ಗಿ ನಡೆಯಿರಿ ಎಂದು ಆದೇಶ ಬಂದಾಗ ಇವರು ತೆವಳಲು ನಿರ್ಧರಿಸಿದರು”. ಸದ್ಯದ ಅಘೋಷಿತ ತುರ್ತುಪರಿಸ್ಥಿತಿಯಲ್ಲಿ ಈ ವಿವರಣೆಗೆ ಬಹಳ ಜನರು ಲಾಯಕ್ಕಾಗಲು ಪ್ರಯತ್ನಿಸುತ್ತಿದ್ದಾರೆ. ವಿಶೇಷವಾಗಿ ನಮ್ಮ ಮಧ್ಯಮವರ್ಗದ ಜನರು ತಮ್ಮ ರಾಷ್ಟ್ರ ಭಕ್ತಿಯನ್ನು ಪ್ರದರ್ಶಿಸಲು ಎಲ್ಲಾ ಮಾರ್ಗಗಳನ್ನು ಹುಡುಕುತ್ತಿದ್ದಾರೆ. ತಮ್ಮ ಮೊಬೈಲ್‌ಗಳ ಮೂಲಕ ಅಮೇರಿಕದ ಅಧ್ಯಕ್ಷ ಟಂಪ್‌ನಿಗೆ, ವಿಶ್ವಸಂಸ್ಥೆಗೆ ಉಪದೇಶ ನೀಡುತ್ತಿದ್ದಾರೆ. ಕಾಶ್ಮೀರದ ಜನರ ಮೂಲಭೂತ ಸ್ವಾತಂತ್ರ್ಯಗಳನ್ನು, ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಸೈನ್ಯವನ್ನು ಕಳಿಸಿ ಮುಟ್ಟುಗೋಲು ಹಾಕಿಕೊಂಡಿರುವುದು “ಆಂತರಿಕ ವ್ಯವಹಾರ”ವೆಂದು ಹೇಳಿ ಉಪದೇಶ ಮಾಡುತ್ತಿದ್ದಾರೆ. ಅಂಥ ಸ್ವಾತಂತ್ರ್ಯಗಳ ಪರವಾಗಿ ಮಾತನಾಡುವವರು ದೇಶದ್ರೋಹಿಗಳೆಂದು ಸಾಮಾಜಿಕ ಜಾಲತಾಣಗಳಲ್ಲಿ ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ. ಕಾಶ್ಮೀರದ ಜನರು ಕೇಳುತ್ತಿರುವುದು ಇದೆ ಮೊಬೈಲ್ ಹಾಗೂ ಇಂಟರ್ ನೆಟ್‌ಗಳನ್ನು ಬಳಸಲು ಎನ್ನುವುದು ಇವರಿಗೆ ಹೊಳೆಯುತ್ತಿಲ್ಲ. ಅಲ್ಲದೆ ಅತ್ಯಂತ ಅಶ್ಲೀಲವಾದ ಬೈಗುಳ ಬೆದರಿಕೆಗಳನ್ನು ಸಂದೇಶವನ್ನು ಕಳಿಸುವ ಅಭಿವ್ಯಕ್ತಿ ಸ್ವಾತಂತ್ರ್ಯವು ಇವರಿಗೆ ಇರುವುದರಿಂದ ಅದನ್ನು ಯಥೇಚ್ಚವಾಗಿ ಬಳಸುತ್ತಿದ್ದಾರೆ. ಇದರಲ್ಲಿ ಆಶ್ಚರ್ಯವೇನಿಲ್ಲ. ಏಕೆಂದರೆ ಹುಸಿ ರಾಷ್ಟ್ರಭಕ್ತಿಯ ಭ್ರಮೆಯಲ್ಲಿರುವವರಿಗೆ ಯಾವ ತರ್ಕವೂ, ವಿವೇಕವೂ ಅರ್ಥವಾಗುವುದಿಲ್ಲ.

ಆದರೆ ಅತ್ಯಂತ ಲಜ್ಜೆಗೆಟ್ಟ ನಡವಳಿಕೆಯೆಂದರೆ ಪ್ರಜಾಪ್ರಭುತ್ವದ ನಾಲ್ಕನೇಯ ಅಂಗವಾದ ಪತ್ರಿಕೋದ್ಯಮದ ಸ್ವಾತಂತ್ರ್ಯ ಹಾಗೂ ಆರೋಗ್ಯಗಳನ್ನು ಕಾಪಾಡಬೇಕಾದ Press Council of India ದ ನಡವಳಿಕೆಯಾಗಿದೆ. ಈ ಸಂಸ್ಥೆಯು ಇಲ್ಲಿಯವರೆಗೆ ಪತ್ರಿಕೋದ್ಯಮವು ತನ್ನ ಜವಾಬ್ದಾರಿಯನ್ನು ಮರೆತಾಗ ನಾವು ನಮ್ಮ ಆಕ್ಷೇಪಣೆಗಳನ್ನು ಸಲ್ಲಿಸಬಹುದಾದ ಸಂಸ್ಥೆಯಾಗಿತ್ತು. ಆದರೆ ಈಗ ಸಂಸ್ಥೆ ತನ್ನ ನಾಚಿಗೆಗೇಡಿ ನಡವಳಿಕೆಯಿಂದಾಗಿ ಶಾಶ್ವತವಾಗಿ ಕಳಂಕಿತವಾಗಿದೆ. ಕಾಶ್ಮೀರ್‌ನಲ್ಲಿ ಎಲ್ಲಾ ಸಂಪರ್ಕ ಸಂವಹನ ಮಾಧ್ಯಮಗಳನ್ನು ನಿಲ್ಲಿಸುವುದರ ಮೂಲಕ ಅಲ್ಲಿಯ ಪತ್ರಿಕೋದ್ಯಮ ಹಾಗೂ ಮಾಧ್ಯಮಗಳ ಸ್ವಾತಂತ್ರ್ಯವನ್ನು ಮೊಟಕು ಮಾಡಲಾಗುತ್ತಿದೆಯೆನ್ನುವ ಅಹವಾಲಿನೊಂದಿಗೆ ಕಾಶ್ಮೀರದ ಪತ್ರಕರ್ತೆಯಾದ ಅನುರಾಧಾ ಭಾಸಿನ್ ಅವರು ಸುಪ್ರೀಂ ಕೋರ್ಟಿಗೆ ಅರ್ಜಿ ಸಲ್ಲಿಸಿದ್ದಾರೆ. ಆಘಾತಕರವಾದ ಸಂಗತಿಯೆಂದರೆ ಭಾರತದ Press Council of India ದ ಅಧ್ಯಕ್ಷರು ಕೋರ್ಟಿಗೆ ಅರ್ಜಿ ಸಲ್ಲಿಸಿ ರಾಷ್ಟ್ರದ ಸುರಕ್ಷತೆಯು ಮುಖ್ಯವಾಗಿರುವುದರಿಂದ ಭಾಸಿನ್‌ರ ಅರ್ಜಿಯನ್ನು ವಜಾ ಮಾಡಬೇಕೆಂದು ಕೇಳಿಕೊಂಡಿದ್ದಾರೆ! ಹಾಗೂ ಈ ಮೂಲಕ ಸತ್ಯವನ್ನು ಹೇಳಲು ಹೆದರುವ ಹಾಗೂ ವ್ಯವಸ್ಥೆಯ ಜೊತೆಗೆ ಶಾಮೀಲಾಗಲು ಸದಾ ಸಿದ್ಧರಿರುವ ನಮ್ಮ ಪತ್ರಿಕೋದ್ಯಮ ಹಾಗು ಮಾಧ್ಯಮ ಮಿತ್ರರು ತಮ್ಮ ವೃತ್ತಿಯ ಗೌರವವನ್ನೇ ಹರಾಜಿಗೆ ಹಾಕಿದ್ದಾರೆ. ಈ ಸುದ್ದಿಯನ್ನು ಓದಿದ ಮೇಲೆ ಅದನ್ನು ನಂಬಲಾಗದೆ ನಾನು ಮತ್ತೆ ಮತ್ತೆ ಹುಡುಕಿ ನೋಡಿದೆ. ಯಾಕೆಂದರೆ ಇದೊಂದು ವಿಶ್ವದಾಖಲೆ! ಪತ್ರಿಕೋದ್ಯಮಿಗಳ ಅತ್ಯುನ್ನತ ಸಂಸ್ಥೆಯು ಪತ್ರಿಕೋದ್ಯಮಕ್ಕೆ ಸ್ವಾತಂತ್ರ್ಯಬೇಡವೆಂದು ಸುಪ್ರೀಂ ಕೋರ್ಟಿಗೆ ಅರ್ಜಿ ಸಲ್ಲಿಸಿದೆ! ನಾನು ಈ ಲೇಖನವನ್ನು ಬರೆಯುತ್ತಿರುವಾಗ (29 ಆಗಸ್ಟ್) ಎಲ್ಲರಿಂದ ಹೀನಾಮಾನವಾಗಿ ಉಗಿಸಿಕೊಂಡ ಮೇಲೆ PCI ತನ್ನ ನಿಲುವನ್ನು ಬದಲಾಯಿಸಿದೆ ಎಂದು ವರದಿಯಾಗಿದೆ.



ಈ ಗೋಸುಂಬೆತನವು ನಿರೀಕ್ಷಿತವೇ. ಇಲ್ಲಿ ಪ್ರಶ್ನೆ ಇರುವುದು “ರಾಷ್ಟ್ರ” ವೆನ್ನುವ ಹೆಸರಿನಲ್ಲಿ ಪ್ರಜಾಪ್ರಭುತ್ವದ ಎಲ್ಲಾ ಸಂಸ್ಥೆಗಳು ಹೀಗೆ ಅವನತಿಯನ್ನು ತಲುಪುತ್ತಿರುವುದು. ನಮ್ಮದು ನಾಗರೀಕ ದೇಶವಾಗಿದ್ದರೆ ಮತ್ತು ಅಂಬೇಡ್ಕರ್ ಬಯಸಿದ್ಧ ಪ್ರಜಾಪ್ರಭುತ್ವವಾದಿ ಸಂಸ್ಕೃತಿಯು ಇಲ್ಲಿ ನೆಲೆಯೂರಿದ್ದರೆ ಇಲ್ಲಿಯ ಎಲ್ಲಾ ಪ್ರಜೆಗಳು ಕಾಶ್ಮೀರದಲ್ಲಿ ನಡೆಯುತ್ತಿರುವ ಸಂಗತಿಗಳ ಬಗ್ಗೆ ತಮ್ಮ ಕಳವಳವನ್ನು ವ್ಯಕ್ತಪಡಿಸಬೇಕಿತ್ತು. ಆದರೆ ಸಾವಿರಾರು ವರ್ಷಗಳಿಂದ ವರ್ಣವ್ಯವಸ್ಥೆ, ಜಾತಿ ವ್ಯವಸ್ಥೆ ಹಾಗೂ ಅಸ್ಪೃಶ್ಯತೆಯನ್ನೇ ಆಚರಿಸಿಕೊಂಡು ಬಂದ ಈ ದೇಶದ ಪ್ರಮುಖ ಗುಣವೇ ಮಾನಸಿಕ ಗುಲಾಮಗಿರಿಯಾಗಿದೆ. ಹೀಗಾಗಿ ಸಮಾಜದ ಧೀಮಂತ ವರ್ಗವೆಂದು ಕರೆಸಿಕೊಳ್ಳುವ ಶಿಕ್ಷಿತ ಮಾಧ್ಯಮವರ್ಗವು ತನ್ನ ಕಪೋಲಕಲ್ಪಿತ ‘ರಾಷ್ಟ್ರದ’ ಸುರಕ್ಷತೆಯ ಬಗ್ಗೆ ನಿಷ್ಠೆಯನ್ನು ತೋರಿಸುತ್ತದೆ; ಸ್ವಾತಂತ್ರ್ಯದ ಬಗ್ಗೆ ಅಲ್ಲ. ವಸಾಹತುಶಾಹಿ ವಿರೋಧಿ ಸ್ವಾತಂತ್ರ್ಯ ಆಂದೋಲನದ ಪ್ರಭಾವದಲ್ಲಿ ಹಾಗೂ ನೆಹರು, ಪಟೇಲ್ ಮುಂತಾದ ನೈಜ ಪ್ರಜಾಪ್ರಭುತ್ವವಾದಿಗಳ ನಾಯಕತ್ವದಲ್ಲಿ ಅನೇಕ ಸಂಸ್ಥೆಗಳು, ಉನ್ನತ–ಸಂಶೋಧನಾ ಕೇಂದ್ರಗಳು ಹುಟ್ಟಿಕೊಂಡವು. ಇವುಗಳಲ್ಲಿ ಅನೇಕ ಸಂಸ್ಥೆಗಳು ತಮ್ಮ ವೈಚಾರಿಕ ಸಂಪ್ರದಾಯಗಳನ್ನು ಹಾಗೂ ಸ್ವಾತಂತ್ರ್ಯಪರ ಮೌಲ್ಯಗಳನ್ನು ಉಳಿಸಿಕೊಂಡವು. ಆದರೆ ಈಗ ಸ್ವಸಂತೋಷದಿಂದ ಕಅಖ ನಂಥ ಸಂಸ್ಥೆಗಳು ತಮ್ಮ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ತಾವೇ ನಿರಂಕುಶಪ್ರಭುತ್ವಕ್ಕೆ ಅರ್ಪಿಸುತ್ತಿವೆ.

ಇಂಥದ್ದೇ ಇನ್ನೊಂದು ನಾಚಿಕೆಗೇಡಿ ಉದಾಹರಣೆಯೆಂದರೆ Indian Psychiatric Society ಯ ನಡವಳಿಕೆ. ಜಗತ್ ಪ್ರಸಿದ್ಧ ವೈಜ್ಞಾನಿಕ ವಿದ್ವತ್ ಪತ್ರಿಕೆಯಾದ ‘LANCET’ ನ ಸಂಪಾದಕೀಯದಲ್ಲಿ ಕಾಶ್ಮೀರಿನಲ್ಲಿ 370 ನೇ ಕಲಮನ್ನು ತೆಗೆದು ಹಾಕಿದ್ದರಿಂದ ಅಲ್ಲಿಯ ಜನರಿಗೆ ಮಾನಸಿಕ ಬಾಧೆ, ಆಘಾತಗಳು ಆಗಿರಬಹುದು ಎಂದು ಬರೆಯಲಾಗಿತ್ತು. ತಕ್ಷಣವೇ IPA ಸಂಸ್ಥೆಯ ಪದಾಧಿಕಾರಿಗಳು, ಪ್ರಾಂತೀಯ ಘಟಕಗಳು ತಮ್ಮ ರಾಷ್ಟ್ರಭಕ್ತಿಯ ಪ್ರದರ್ಶನಕ್ಕೆ ಇಳಿದುಬಿಟ್ಟವು. “ನಮ್ಮ ಆಂತರಿಕ ವಿಷಯದ” ಬಗ್ಗೆ, ರಾಜಕೀಯ ಟಿಪ್ಪಣಿ ಮಾಡಿದ್ದನ್ನು ವಿರೋಧಿಸಿದರು. ಈ ಪ್ರತಿಭಟನೆಯ ಬಗ್ಗೆ ನನ್ನ ಹೆಚ್ಚಿನ ವಿರೋಧವಿಲ್ಲ. IPA ದೃಷ್ಟಿಯಲ್ಲಿ ‘LANCET’ ಬರೆದದ್ದು ರಾಜಕೀಯವೇ ಆಗಿರಬಹುದು. ಆದರೆ ಕಾಶ್ಮೀರದಲ್ಲಿ ಇಷ್ಟು ದಿನಗಳ ಕಾಲ ಯಾವ ಸಂಪರ್ಕವಿಲ್ಲದೆ ಸಾಮಾನ್ಯ ಜನ ಭೀತಿಯಲ್ಲಿದ್ದಾರೆ ಮತ್ತು ತಂದೆತಾಯಿಗಳಿಂದ ಬೇರ್ಪಟ್ಟು ಖಾಯಿಲೆಯಾಗಿರುವವರಿಗೆ ಸಾಂತ್ವನವನ್ನು ಹೇಳದ ಸ್ಥಿತಿಯಲ್ಲಿದ್ದಾರೆ. ಅನೀರಿಕ್ಷಿತವಾದ ರಾಜಕೀಯ ಘಟನೆಗಳು ನಡೆದಾಗ ಅದು ಮನುಷ್ಯ ವ್ಯಕ್ತಿಗಳಿಗೆ ‘Trauma’ (ಆಘಾತ) ವುಂಟುಮಾಡುತ್ತದೆ ಎನ್ನುವುದು ಮನೋವೈದ್ಯಕೀಯದ ವಿದ್ಯಾರ್ಥಿಗಳಿಗೆ ಗೊತ್ತು. ಇಂಥ ಸನ್ನಿವೇಷದಲ್ಲಿ ‘IPA’ ನ ಸದಸ್ಯರಾದ ಮನೋವೈದ್ಯರು ಕಾಶ್ಮೀರಿಗೆ ಹೋಗಿ ಆಪ್ತಸಲಹೆ ನೀಡಿ ಅಲ್ಲಿಯ ಜನರಿಗೆ ಆಸರೆ ನೀಡಬೇಕಿತ್ತು. ಹಾಗೆ ಮಾಡಲಿಲ್ಲ. ಏಕೆಂದರೆ ಈ ವೈದ್ಯ ಮಹಾಶಯರಿಗೆ ಅಲ್ಲಿಯ ಬಹುಸಂಖ್ಯಾತ ಮುಸ್ಲಿಮ್‌ರನ್ನು ಸೇನೆಯು “ನೋಡಿಕೊಳ್ಳುತ್ತದೆ” ಎನ್ನುವ ನಂಬಿಕೆಯಿದೆ. ಅಥವಾ ಇವರುಗಳ ಸುಪ್ತಪ್ರಜ್ಞೆಯಲ್ಲಿ ಜನಾಂಗೀಯ ದ್ವೇಷವೇ ಅಡಗಿ ಕುಳಿತಿರಬಹುದು. ಮನೋವೈದ್ಯಕೀಯವನ್ನು “The Healing Profession” ಎಂದೂ, ‘The Noblest Profession” ಎಂದು ಕರೆಯುತ್ತಾರೆ. ವೈದ್ಯನು ಸಾಕ್ಷಾತ್ ನಾರಾಯಣ, ಹರಿಯೆನ್ನುವ ಮಾತು ಎಲ್ಲರಿಗಿಂತ ಮನೋವೈದ್ಯರಿಗೆ ಅನ್ವಯಿಸುತ್ತದೆ. ಮನುಷ್ಯರ ದುಃಖಗಳನ್ನು ನಿವಾರಿಸುವ ಪುಣ್ಯವಂತರು ಈ ಮನೋವೈದ್ಯರು. ರಾಷ್ಟ್ರ, ರಾಜಕೀಯ ಇವುಗಳನ್ನು ಆಚೆಗಿಡಿ. ಭೀತಿ, ಹೆದರಿಕೆ ಕುಟುಂಬದವರೊಂದಿಗೆ, ಸಮುದಾಯದೊಂದಿಗೆ ಮಾತನಾಡಲಾಗದೇ ಆತಂಕದಲ್ಲಿರುವವರಿಗೆ ಹೋಗಿ ಸಮಾಧಾನ ಹೇಳಿ. ವೈದ್ಯಕೀಯಕ್ಕೆ ರಾಷ್ಟ್ರದ ಗಡಿಗಳಿಲ್ಲ; ರಾಜ್ಯದ ಗಡಿಗಳೂ ಇಲ್ಲ. ಸಾಮಾನ್ಯ ಜನರು ನಿಮ್ಮನ್ನು ದೇವರೆಂದೇ ತಿಳಿದಿದ್ದಾರೆ.

## ಪ್ರೆಸ್ ಕೌನ್ಸಿಲ್ ಆಫ್ ಇಂಡಿಯಾ




ಭಾರತೀಯ ಸಂಸತ್ತಿನಿಂದ 1966ರಲ್ಲಿ ಸ್ಥಾಪಿತವಾದ ಸಂಸ್ಥೆ. ಇದರ ಅಧ್ಯಕ್ಷರು ನಿವೃತ್ತ ಸುಪ್ರೀಂ ಕೋರ್ಟ್ ನ್ಯಾಯಾಧೀಶರು ಆಗಿರುತ್ತಾರೆ. ಅಲ್ಲದೆ ಮಾಧ್ಯಮಗಳ 20 ಸದಸ್ಯರು ಮತ್ತು ಸಂಸತ್ತಿನ 8 ಜನ ಸದಸ್ಯರಿರುತ್ತಾರೆ. ಈ ಹಿಂದೆ ಮಾರ್ಕಂಡೆಯ ಕಟ್ಜು ಅವರು ಅಧ್ಯಕ್ಷರಾಗಿದ್ದರು. ಈಗ ಗೌರವಾನ್ವಿತ ನ್ಯಾಯಮೂರ್ತಿ ಚಂದ್ರಮೌಳಿ ಕುಮಾರ್ ಪ್ರಸಾದ್ ಅವರು ಅಧ್ಯಕ್ಷರಾಗಿದ್ದಾರೆ. PCI ಭಾರತದ ಮಾಧ್ಯಮಗಳಿಗಾಗಿ ನೈತಿಕ ಸಂಹಿತೆಯನ್ನು (Code of ethics) ರೂಪಿಸಿಕೊಟ್ಟಿದೆ. ಈ ಮಧ್ಯೆ Editors Guild ಹೇಳಿಕೆಯನ್ನು ನೀಡಿ ಮಾಧ್ಯಮಗಳ ಕಾವಲುಗಾರನಾಗಿರಬೇಕಾಗಿದ್ದ PCI ಪತ್ರಿಕಾ ಸ್ವಾತಂತ್ರ್ಯದ ಹರಣದ ಪರವಾಗಿ ವಿಕೃತ ವಾದವನ್ನು ಮಂಡಿಸಿದ್ದರ ಬಗ್ಗೆ ತೀವ್ರವಾಗಿ ಖಂಡಿಸಿದೆ.

ಆತಂಕದ ವಿಷಯವೆಂದರೆ Editors Guild ಹೇಳಿಕೆಯ ಪ್ರಕಾರ PCI ಅಧ್ಯಕ್ಷರು ಇತರ ಸದಸ್ಯರ ಜೊತೆ ಚರ್ಚಿಸದೇ ನಿರ್ಧಾರ ತೆಗೆದುಕೊಂಡಿದ್ದಾರೆ ಎನ್ನುವುದು.

ಇದು ಸಾಲದು ಎನ್ನುವಂತೆ Bar Council of India ದ ಅಧ್ಯಕ್ಷರಾದ ಮನನ್‌ಕುಮಾರ್ ಮಿಶ್ರಾ ಅವರು ಹೇಳಿಕೆಯನ್ನು ನೀಡಿ PCI ಸುಪ್ರೀಂ ಕೋರ್ಟಿಗೆ ಸಲ್ಲಿಸಿದ Plea (ಅರ್ಜಿ)ಯನ್ನು ಸಮರ್ಥಿಸಿದ್ದಾರೆ. ಅವರ ಪ್ರಕಾರ ಪಾಕಿಸ್ತಾನ ಹಾಗೂ ಇತರ ದೇಶಗಳ ಮಾಧ್ಯಮಗಳು ಸುಳ್ಳುಸುದ್ದಿಗಳನ್ನು ಹಬ್ಬಿಸಿರುವುದರಿಂದ, ನಮ್ಮ ಮಾಧ್ಯಮದವರು ರಾಷ್ಟ್ರವನ್ನು “ಗಟ್ಟಿಗೊಳಿಸುವ” (Strengthen) ಕೆಲಸ ಮಾಡಬೇಕಿದೆ.

ಅಂದ ಹಾಗೆ PCI ಸಲ್ಲಿಸಿದ Plea ನಲ್ಲಿ ಕಾಶ್ಮೀರದ Kashmi Times Executive editor ಅನುರಾಧಾ ಭಾಸಿನ್ ಅವರು ಮಾಧ್ಯಮಗಳ ಮೇಲೆ ಹೇರಿರುವ ನಿಯಂತ್ರಣವನ್ನು ಸಡಿಲಿಸಬೇಕೆಂದು ಕೋರಿದ್ದರ ವಿರುದ್ಧ ಕೋರ್ಟಿನಲ್ಲಿ ವಾದ ಮಾಡಲು ತನಗೂ ಅನುಮತಿಯನ್ನು ಕೊಡಬೇಕೆಂದು ಕೋರಿದೆ. ಈ ಮೂಲಕ ಸುಪ್ರೀಂ ಕೋರ್ಟಿಗೆ “ಸಹಾಯ ಮಾಡಲು” ಅನುಮತಿ ಕೋರಿದೆ!!?







# ಉತ್ಸಾಹಶೂನ್ಯ ಆರ್ಥಿಕ ರಂಗ ದಾರಿಗಾಣದ ಮೋದಿ ಸರಕಾರ

**ಪ್ರಕಾಶ ಕಾರಟ್**

ದೇಶದ ಆರ್ಥಿಕವನ್ನು ಕುರಿತಂತೆ ಕೆಟ್ಟ ಸುದ್ದಿಗಳು ಹರಿದು ಬರುತ್ತಲೇ ಇವೆ. ಉದ್ಯೋಗ ಪರಿಸ್ಥಿತಿ ಹದಗೆಡುತ್ತಲೇ ಇದ್ದು ಆತಂಕಕಾರಿಯಾಗುತ್ತಿದೆ. ವಾಹನ ಉದ್ದಿಮೆಯಲ್ಲಿ ಸುಮಾರು 3.5 ಲಕ್ಷ ಕೆಲಸಗಳು ನಷ್ಟಗೊಂಡಿವೆ, ಇನ್ನಷ್ಟು ಉದ್ಯೋಗಗಳನ್ನು ಕಳೆದುಕೊಳ್ಳುವ ಭೀತಿ ಕಾಡುತ್ತಿದೆ. ಬಳಕೆ ಸರಕುಗಳ ವಿಭಾಗದಲ್ಲಿ, ಅತಿ ದೊಡ್ಡ 'ಬಿಸ್ಕಿಟ್ ತಯಾರಕ ಕಂಪನಿ ಪಾರ್ಲೆ 10 ಸಾವಿರ ಉದ್ಯೋಗಗಳನ್ನು ಕಡಿತ ಮಾಡಬೇಕಾದೀತು ಎಂದು ಪ್ರಕಟಿಸಿದೆ. ಕಾರ್ಪೊರೇಟ್‌ಗಳು ಆರ್ಥಿಕ ಹಿಂಜರಿತವನ್ನು ಉದ್ಯೋಗಗಳ ಕಡಿತಕ್ಕೆ ಮತ್ತು ತಮ್ಮ ಲಾಭಗಳನ್ನು ರಕ್ಷಿಸಿಕೊಳ್ಳಲು ಬಳಸಿಕೊಳ್ಳುತ್ತಿವೆ. ರಾಷ್ಟ್ರೀಯ ಸ್ಯಾಂಪಲ್ ಸರ್ವೆ ಮಾಹಿತಿ 2017–18ರಲ್ಲಿ ನಿರುದ್ಯೋಗ ದರ 6.1% ಆಗಿದ್ದು, ಇದು ಕಳೆದ 45 ವರ್ಷಗಳಲ್ಲಿ ಅತಿ ಹೆಚ್ಚಿನ ದರ ಎಂದು ತೋರಿಸಿರುವ ಹಿನ್ನೆಲೆಯಲ್ಲಿ ವಿವಿಧ ವಲಯಗಳಿಂದ ಉದ್ಯೋಗ ನಷ್ಟದ ಸುದ್ದಿಗಳು ನಿರಂತರವಾಗಿ ಹರಿದು ಬರುತ್ತಿವೆ. ನಿರುದ್ಯೋಗ ನಿರಂತರವಾಗಿ ಏರುತ್ತಿರುವುದು ಆರ್ಥಿಕ ಹಿಂಜರಿತ ಆರಂಭವಾಗಲು ಒಂದು ಪ್ರಮುಖ ಕಾರಣ.

ಈ ಪರಿಸ್ಥಿತಿಯನ್ನು ಹೇಗೆ ಎದುರಿಸಬೇಕು ಎಂಬುದರ ಜಾಡು ಕೂಡ ಮೋದಿ ಸರಕಾರಕ್ಕೆ ಸಿಕ್ಕಿಲ್ಲ. ಅದು ಏನೇ ಹೇಳಿಕೊಂಡರೂ, ಖಾಸಗಿ ಹೂಡಿಕೆಗಳು ಬರುತ್ತಿಲ್ಲ. ನಿಜ ಸಂಗತಿಯೆಂದರೆ, ಹೊಸ ಆದಾಯ ತೆರಿಗೆ ಕಾನೂನಿನ ಕರಡನ್ನು ರೂಪಿಸಲು ನೇಮಿಸಿರುವ ಕಾರ್ಯಪಡೆಯ 2018ರ ವರದಿ ಹೂಡಿಕೆಗಳು 2016–17ರಲ್ಲಿ 60ಶೇ.ದಷ್ಟು ಕುಸಿದವು ಎಂದು ಅಂದಾಜು ಮಾಡಿದೆ. ಅದರ ಹಿಂದಿನ ವರ್ಷ 10,330 ಕೋಟಿ ರೂ.ಗಳಿಂದ 4250 ಕೋಟಿ ರೂ.ಗಳಿಗೆ ತೀವ್ರವಾಗಿ ಇಳಿದಿದೆ.

ಆರ್ಥಿಕ ವ್ಯವಸ್ಥೆಯಲ್ಲಿನ ಪ್ರಮುಖ ಸಮಸ್ಯೆಯೆಂದರೆ ಬೇಡಿಕೆ ಕುಗ್ಗುತ್ತಿರುವುದು. ಹೆಚ್ಚುತ್ತಿರುವ ನಿರುದ್ಯೋಗ ಮತ್ತು ಕಡಿಮೆ ಸಂಬಳದ ಉದ್ಯೋಗಗಳಿಂದಾಗಿ ಜನಗಳಲ್ಲಿ ಖರೀದಿ ಶಕ್ತಿ ಇಲ್ಲದಂತಾಗಿದೆ. ಇದರಿಂದಾಗಿ ಬಳಕೆ ವಸ್ತುಗಳಿಗೆ ಮತ್ತು ದ್ವಿಚಕ್ರ ವಾಹನಗಳು ಮುಂತಾದ ಇತರ ಸರಕುಗಳಿಗೆ ಬೇಡಿಕೆಯ ಕೊರತೆ ಉಂಟಾಗಿದೆ. ಗ್ರಾಮೀಣ ನಿಜಕೂಲಿಗಳಲ್ಲಿ ಸ್ಥಗಿತತೆ ಗ್ರಾಮೀಣ ಬೇಡಿಕೆಗಳು ತೀವ್ರವಾಗಿ ಇಳಿಯುವಂತೆ ಮಾಡಿದೆ.

ಇಂತಹ ಒಂದು ಸನ್ನಿವೇಶದಲ್ಲಿ ಕೇಂದ್ರ ಹಣಕಾಸು ಮಂತ್ರಿ ನಿರ್ಮಲಾ ಸೀತಾರಾಮನ್ ಹಲವು ಕ್ರಮಗಳನ್ನು ಪ್ರಕಟಿಸಿದ್ದಾರೆ. ವಿದೇಶಿ ಸಾಂಸ್ಥಿಕ ಹೂಡಿಕೆದಾರರರ ಆದಾಯ ತೆರಿಗೆಯ ಮೇಲೆ ವಿಧಿಸಿದ ಹೆಚ್ಚುವರಿ ಅಧಿಭಾರವನ್ನು(ಸರ್ಚಾರ್ಜನ್ನು) ಹಿಂಪಡೆಯುವುದು, ನವೋದ್ಯಮಗಳ ಮೇಲಿನ 'ಏಂಜೆಲ್ ಟ್ಯಾಕ್ಸ್(ಅವರು ಪಡೆಯುವ ಅಧಿಕ ಹೂಡಿಕೆಯ ಮೇಲಿನ ತೆರಿಗೆ) ಯನ್ನು ತೆಗೆಯುವುದು, ಬ್ಯಾಂಕುಗಳಲ್ಲಿ 70 ಸಾವಿರ ಕೋಟಿ ರೂ. ತುಂಬಿಸುವುದು ಮತ್ತು ವಸತಿ ಹಣಕಾಸು ಕಂಪನಿಗಳಿಗೆ 20 ಸಾವಿರ ಕೋಟಿ ರೂ. ಕೊಡುವುದು– ಈ ಕ್ರಮಗಳೇನೂ ಆರ್ಥಿಕ ಬೆಳವಣಿಗೆಯನ್ನು ಪುನರುಜ್ಜೀವನಗೊಳಿಸುವುದಿಲ್ಲ ಅಥವ ಬೇಡಿಕೆಯ ಕೊರತೆ ಮತ್ತು ವ್ಯಾಪಕವಾಗಿರುವ ನಿರುದ್ಯೋಗದ ಸಮಸ್ಯೆಯನ್ನು ಎದುರಿಸಲಾರದು.

ವಿದೇಶಿ ಸಾಂಸ್ಥಿಕ ಹರಿವುಗಳ ಮೇಲೆ ಬಜೆಟಿನಲ್ಲಿ ಸರ್ಚಾರ್ಜ್ ಹಾಕುವ ಪ್ರಸ್ತಾವದ ನಂತರ ವಿದೇಶಿ ಸಾಂಸ್ಥಿಕ ಹೂಡಿಕೆದಾರರು 300ಕೋಟಿ ಡಾಲರುಗಳಷ್ಟು ಹೂಡಿಕೆಗಳನ್ನು ಮಾರುಕಟ್ಟೆಯಿಂದ ಹೊರಗೆಳೆದುಕೊಂಡರು. ಇದರಿಂದ ಸರಕಾರ ಬಗ್ಗಲೇ ಬೇಕಾಯಿತು. ಈ ಕ್ರಮಗಳಿಂದ ವಿದೇಶಿ 'ಬಿಸಿಹಣ'ದ ಹೂಡಿಕೆದಾರರು ಮತ್ತು ಬ್ಯಾಂಕುಗಳಿಗೆ ಸಂತೋಷವಾಗುತ್ತದೆ, ಆದರೆ ಇದರಿಂದ ಉತ್ಪಾದಕ ಸಾಮರ್ಥ್ಯವೇನೂ ಹೆಚ್ಚುವುದಿಲ್ಲ, ಅಂದರೆ ' ಉದ್ಯೋಗಗಳೇನೂ ಉಂಟಾಗುವುದಿಲ್ಲ. ಬಡ್ಡಿದರಗಳನ್ನು ಇಳಿಸುವುದರಿಂದ ಮತ್ತು ಸಾಲ ನೀಡಿಕೆಯ ಮೇಲಿನ ಹತೋಟಿಗಳನ್ನು ಸಡಿಲಿಸುವುದರಿಮದ ಸಾಲಗ್ರಸ್ತ ವ್ಯಾಪಾರೀ ಮನೆತನಗಳ ಹಳೆಯ ಹೆಚ್ಚು ವೆಚ್ಚದ ಸಾಲಗಳನ್ನು ಹಿಂದಿರುಗಿಸಲು ಅಥವ ಅನೀತಿಯುತ ಸಾಲಗಾರರು ಹಣವನ್ನು ದುರುಪಯೋಗ ಪಡಿಸಿಕೊಳ್ಳಲು ನೆರವಾಗಬಹುದಷ್ಟೇ.

ಸರಕಾರ ಈಗ ಹಿಂದೆಂದೂ ಕಾಣದಷ್ಟು ಬೃಹತ್ ಮೊತ್ತವನ್ನು, 1.76ಲಕ್ಷ'ಕೋಟಿ ರೂ.ಗಳನ್ನು ಭಾರತೀಯ ರಿಝರ್ವ್ ಬ್ಯಾಂಕಿನ ಮೀಸಲು ನಿಧಿಗಳು ಮತ್ತು ಮಿಗುತೆ ನಿಧಿಗಳಿಂದ ಸ್ವಾಧೀನ ಪಡಿಸಿಕೊಂಡಿದೆ. ಹಣಕಾಸು ಕೊರತೆಯನ್ನು ಕಡಿಮೆ ಮಾಡಲು ಮತ್ತು ಜಿಎಸ್‌ಟಿ ಜಾರಿಯ ಮೂಲಕ ಹಾಗೂ ದೊಡ್ಡ ವ್ಯಾಪಾರೀ ಗುಂಪುಗಳಿಗೆ, ವಿದೇಶಿ ಹಣಕಾಸು ಬಂಡವಾಳಕ್ಕೆ ಕೊಟ್ಟಿರುವ ತೆರಿಗೆ ರಿಯಾಯ್ತಿಗಳಿಂದಾಗಿ ಆಗಿರುವ ಆದಾಯ ನಷ್ಟವನ್ನು ಭರಿಸಿಕೊಳ್ಳಲಿಕ್ಕಾಗಿ ಈ ಹತಾಶ ಕ್ರಮ. ಸರಕಾರ ಈ ಹಣವನ್ನು ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಗೆ, ಮೂಲರಚನೆಗಳು ಮತ್ತು ಬೇಡಿಕೆಯನ್ನು ಉಂಟುಮಾಡುವ ಇತರ ಕ್ರಮಗಳಿಗೆ ಖರ್ಚುಮಾಡದಿದ್ದರೆ, ಇದು ಆರ್ಥಿಕಕ್ಕೆ ಮತ್ತು ದುಡಿಯುವ ಜನಗಳ ಜೀವನಾಧಾರಗಳಿಗೆ ಹಾನಿಯುಂಟು ಮಾಡುತ್ತದೆ.




ವ್ಯಂಗ್ಯಚಿತ್ರ ಕೃಪೆ: ಪಿ.ಮಹಮ್ಮದ್

ಸದ್ಯಕ್ಕೆ, ಸರಕಾರ ಇಂತಹ ಖರ್ಚುಗಳ ಸೂಚನೆಗಳೇನನ್ನೂ ಕೊಟ್ಟಿಲ್ಲ.


ಸಾರ್ವಜನಿಕ ವೆಚ್ಚವನ್ನು ಹೆಚ್ಚಿಸುವ ಮೂಲಕ ಮಾತ್ರವೇ ಆರ್ಥಿಕವನ್ನು ಪುನರುಜ್ಜೀವನಗೊಳಿಸುವುದು ಸಾಧ್ಯ.ವಾಗುತ್ತದೆ. ಸರಕಾರ ಮೂಲರಚನೆಗಳಲ್ಲಿ, ಕೃಷಿ, ಶಿಕ್ಷಣ ಮತ್ತು ಆರೋಗ್ಯ ವಲಯಗಳಲ್ಲಿ ಸಾರ್ವಜನಿಕ ಹೂಡಿಕೆಗಳನ್ನು ಹೆಚ್ಚಿಸಲೇಬೇಕು. ಇದರಿಂದ ಉದ್ಯೋಗಗಳು ನಿರ್ಮಾಣವಾಗುತ್ತವೆ, ಆದಾಯಗಳೂ ನಿರ್ಮಾಣಗೊಳ್ಳುತ್ತವೆ. ಸರಕಾರ ಹಣಕಾಸು ಕ್ರೋಡೀಕರಣದ ನವ–ಉದಾರವಾದಿ ಗೊಡ್ಡು ತತ್ವಗಳಿಂದ ಹೊರಬಂದು ಸರಕಾರದ ವೆಚ್ಚಗಳನ್ನು ಹೆಚ್ಚಿಸದಿದ್ದರೆ ಆರ್ಥಿಕ ಬಿಕ್ಕಟ್ಟನ್ನು ನಿವಾರಿಸಿಕೊಳ್ಳಲು ಸಾಧ್ಯವಿಲ್ಲ.

ವಿಶೇಷವಾಗಿ ಜಾಗತಿಕ ಅರ್ಥಿಕ ಪರಿಸ್ಥಿತಿ ಹಿಂಜರಿತದತ್ತ ಸಾಗುತ್ತಿರುವಾಗ, ಮತ್ತು ಭಾರತದಿಂದ ರಫ್ತುಗಳು ಮತ್ತಷ್ಟು ಇಳಿಯುವುದು ಖಂಡಿತವಾದ್ದರಿಂದ ಇದು ಇನ್ನಷ್ಟು ನಿಜ. ಸಾರ್ವಜನಿಕ ಹೂಡಿಕೆಯ ಮೇಲೆ ಗಮನ ಕೇಂದ್ರೀಕರಿಸುವದು, ಬೇಡಿಕೆಯನ್ನು ನಿರ್ಮಿಸುವುದು, ಆಮೂಲಕ ಉದ್ಯೋಗಗಳನ್ನು ನಿರ್ಮಿಸುವುದು–ಇದೇ ಮುನ್ನಡೆಯ ಏಕೈಕ ದಾರಿ. ಸರಕಾರ ಸಾರ್ವಜನಿಕ ವಲಯದಲ್ಲಿ ಖಾಸಗೀಕರಣದ ಧಾವಂತವನ್ನು ಕೈಬಿಡಬೇಕು, ಏಕೆಂದರೆ ಅಂತಹ ಧಾವಂತ ಸಾರ್ವಜನಿಕ ಆಸ್ತಿಗಳನ್ನು ಕಳಚಿ ಹಾಕಿ ಉದ್ಯೋಗಹೀನತೆಯನ್ನು ಮತ್ತಷ್ಟು ಹೆಚ್ಚಿಸುತ್ತದೆ.

ಮೋದಿ ಸರಕಾರದ ಖಾಸಗೀಕರಣದ ಧಾವಂತದ ವಿರುದ್ಧ ಕಾಮಿಕ ವರ್ಗ ಆಗಲೇ ಹೋರಾಟದ ದಾರಿ ಹಿಡಿದಿದೆ. ರಕ್ಷಣಾ ಉತ್ಪಾದನಾ ವಲಯದ 82 ಸಾವಿರ ನೌಕರರು ಮತ್ತು 40 ಸಾವಿರ ಗುತ್ತಿಗೆ ಕಾರ್ಮಿಕರು ಶಸ್ತ್ರ ಕಾರ್ಖಾನೆಗಳ ಮಂಡಳಿಯ ಕಾರ್ಪೊರೇಟೀಕರಣದ ವಿರುದ್ಧ ಹೋರಾಟದ ಮೊದಲ ಘಟ್ಟದ ಭಾಗವಾಗಿ ಐದು ದಿನಗಳ ಚಾರಿತ್ರಿಕ ಮುಷ್ಕರವನ್ನು ನಡೆಸಿದ್ದಾರೆ. ದುಡಿಯುವ ಜನಗಳ ಹೆಚ್ಚೆಚ್ಚು ವಿಭಾಗಗಳು ತಮ್ಮ ಉದ್ಯೋಗಗಳನ್ನು ಮತ್ತು ಜೀವನಾಧಾರಗಳನ್ನು ರಕ್ಷಿಸಿಕೊಳ್ಳಲು ಐಕ್ಯ ಹೋರಾಟಗಳನ್ನು ನಡೆಸಬೇಕಾಗಿ ಬರುತ್ತದೆ. ಉದ್ಯೋಗಾವಕಾಶ ಮತ್ತು ಬೆಳವಣಿಗೆಯನ್ನು ಬಲಿಗೊಟ್ಟು ದೊಡ್ಡ ಬಂಡವಳಿಗರು ಮತ್ತು ವಿದೇಶಿ ಹಣಕಾಸು ಹಿತಗಳಿಗೆ ಅನುಕೂಲ ಮಾಡಿಕೊಡುವ ಧೋರಣೆಗಳನ್ನು ಪ್ರತಿರೋಧಿಸಬೇಕು, ಹಿಂದಕ್ಕೆ ತಿರುಗಿಸಬೇಕು.

**ವಿವಿಧ ವಲಯಗಳಿಂದ ಉದ್ಯೋಗ ನಷ್ಟದ ಸುದ್ದಿಗಳು ನಿರಂತರವಾಗಿ ಹರಿದು ಬರುತ್ತಿವೆ. ನಿರುದ್ಯೋಗ ನಿರಂತರವಾಗಿ ಏರುತ್ತಿದೆ, ಆರ್ಥಿಕ ಹಿಂಜರಿತ ಆರಂಭವಾಗಿದೆ. ಈ ಪರಿಸ್ಥಿತಿಯನ್ನು ಹೇಗೆ ಎದುರಿಸಬೇಕು ಎಂಬ ಜಾಡು ಕೂಡ ಮೋದಿ ಸರಕಾರಕ್ಕೆ ಸಿಕ್ಕಿಲ್ಲ. ಅದು ಏನೇ ಹೇಳಿಕೊಂಡರೂ, ಖಾಸಗಿ ಹೂಡಿಕೆಗಳು ಬರುತ್ತಿಲ್ಲ, ಬದಲಿಗೆ ತೀವ್ರವಾಗಿ ಇಳಿದಿದೆ. ಸರಕಾರ ರಿಝರ್ವ್ ಬ್ಯಾಂಕಿನ ಮೀಸಲು, ಮಿಗುತೆ ನಿಧಿಗಳಿಂದ ಭಾರೀ ದಾಖಲೆ ಮೊತ್ತವನ್ನು ಸ್ವಾಧೀನ ಪಡಿಸಿಕೊಂಡರೂ ಆರ್ಥಿಕವನ್ನು ಪುನರುಜ್ಜೀವನಗೊಳಿಸುವುದು ಸಾಧ್ಯವಿಲ್ಲ. ಸಾರ್ವಜನಿಕ ವೆಚ್ಚವನ್ನು ಹೆಚ್ಚಿಸುವುದೇ ಮುನ್ನಡೆಯ ಏಕೈಕ ದಾರಿ. ಉದ್ಯೋಗಾವಕಾಶ ಮತ್ತು ಬೆಳವಣಿಗೆಯನ್ನು ಬಲಿಗೊಟ್ಟು ದೊಡ್ಡ ಬಂಡವಳಿಗರು ಮತ್ತು ವಿದೇಶಿ ಹಣಕಾಸು ಹಿತಗಳಿಗೆ ಅನುಕೂಲ ಮಾಡಿಕೊಡುವ ಧೋರಣೆಗಳನ್ನು ಪ್ರತಿರೋಧಿಸಬೇಕು, ಹಿಮ್ಮೆಟ್ಟಿಸಬೇಕು.**







ವ್ಯಂಗ್ಯಚಿತ್ರ ಕೃಪೆ: ಅಲೋಕ್ ನಿರಂತರ

**ಆಗಸ್ಟ್ 5, 2019ರಂದು ಮೋದಿ ಸರಕಾರ ಸಂವಿಧಾನ, ಪ್ರಜಾಪ್ರಭುತ್ವ, ಒಕ್ಕೂಟ ತತ್ವ ಮತ್ತು ಜಾತ್ಯತೀತತೆಯ ನೀತಿಗಳ ವಿರುದ್ಧ ಒಂದು ಮಿಂಚಿನ ಪ್ರಹಾರ ನಡೆಸಿ ರಾಜ್ಯವಾಗಿರುವ ಜಮ್ಮು ಮತ್ತು ಕಾಶ್ಮೀರದ ಹಕ್ಕನ್ನು ಕಸಿದುಕೊಂಡಿತು. ಅದನ್ನು ಎರಡು ಕೇಂದ್ರಾಡಳಿತ ಪ್ರದೇಶಗಳಾಗಿ ವಿಭಜಿಸಿತು. ಇವು ಅಸಂವಿಧಾನಿಕ, ಕಾನೂನುಬಾಹಿರ ಮತ್ತು ಸರ್ವಾಧಿಕಾರಶಾಹಿ ಕ್ರಮಗಳು ಎಂದು ಸಿಪಿಐ(ಎಂ) ಈ ಕ್ರಮಗಳನ್ನು ಬಲವಾಗಿ ಖಂಡಿಸಿದೆ.. ಅವು ವಿವಿಧತೆಯಲ್ಲಿ ಏಕತೆಯ ನೀತಿಯ ಮೇಲೆ ಮಾಡಿರುವ ದಾಳಿ. ಇದು 370ನೇ ವಿಧಿಯ ಅಡಿಯಲ್ಲಿ ವಿಶೇಷ ಸ್ಥಾನಮಾನದ ರದ್ದತಿಯಷ್ಟೇ ಅಲ್ಲ, ಪ್ರಜಾಪ್ರಭುತ್ವವನ್ನೇ ರದ್ದುಗೊಳಿಸಿದಂತಾಗಿದೆ ಎಂದು ಹೇಳಿದೆ.**

**ಪ್ರಧಾನ ಮಂತ್ರಿಗಳು ಮತ್ತು ಗೃಹಮಂತ್ರಿಗಳೂ ಸೇರಿದಂತೆ ಬಿಜೆಪಿ ಮುಖಂಡರುಗಳು ಮತ್ತು ಅದರ ವಿವಿಧ "ಮಿತ್ರರು" ಕೆಲವು ಟೆಲಿವಿಶನ್ ವಾಹಿನಿಗಳವರೂ ಸೇರಿದಂತೆ, ಕಾಶ್ಮೀರದ ಇತಿಹಾಸ, ರಾಷ್ಟ್ರೀಯ ಆಂದೋಲನದ ನೇತಾರರು, ಕಾಶ್ಮೀರದ ಜನತೆಯ ಬಗ್ಗೆ ಬೃಹತ್ ಪ್ರಮಾಣದಲ್ಲಿ ಸುಳ್ಳು ಮಾಹಿತಿಗಳ, ಇತಿಹಾಸವನ್ನೇ ಹುಸಿಗೊಳಿಸುವ ಪ್ರಚಾರ ಆರಂಭಿಸಿದ್ದಾರೆ. ಟ್ರೋಲ್ ಪಡೆಗಳು ವಾಟ್ಸ್ಆಪ್ ಮತ್ತು ಇತರ ಸಾಮಾಜಿಕ ಮಾಧ್ಯಮಗಳ ವೇದಿಕೆಗಳಲ್ಲಿ, ಈ ಕರಾಳ ಕ್ರಮಗಳನ್ನು ವಿರೋಧಿಸುವ ಎಲ್ಲರ ಮೇಲೂ ವಿಷಕಾರುತ್ತಿವೆ.**

**ಇವೆಲ್ಲದಕ್ಕೆ ಉತ್ತರವಾಗಿ ಸಿಪಿಐ(ಎಂ) ಕೇಂದ್ರಸಮಿತಿ, ಈಗಾಗಲೇ ಕಳೆದ ಸಂಚಿಕೆಯಲ್ಲಿ ಹೇಳಿರುವಂತೆ, ಜಮ್ಮು ಮತ್ತು ಕಾಶ್ಮೀರವು 'ಭಾರತ ಒಕ್ಕೂಟ'ಕ್ಕೆ ಸೇರ್ಪಡೆಯಾಗಲು, ವಿಶೇಷ ಸ್ಥಾನಮಾನಕ್ಕೆ ಅರ್ಹವಾಗಲು ಕಾರಣವಾದ ಚಾರಿತ್ರಿಕ ಸಂಗತಿಗಳನ್ನು, ಮತ್ತು 370ನೇ ವಿಧಿ ರೂಪಿಸಲು ಕಾರಣವಾದ ರಾಜಕೀಯ ಸಂದರ್ಭವನ್ನು ನಿರೂಪಿಸುವ "ಫ್ರಾಡ್ ಆನ್ ಕನ್‌ಸ್ಟಿಟ್ಯೂಶನ್–ಕಾಶ್ಮೀರ್ ಬಿಟ್ರೇಯ್ಡ್' ಎಂಬ ಒಂದು ಕಿರುಪುಸ್ತಕವನ್ನು ಪ್ರಕಟಿಸಿದೆ. ಸಿಪಿಐ(ಎಂ) ಕರ್ನಾಟಕ ರಾಜ್ಯಸಮಿತಿ ಅದರ ಕನ್ನಡ ಅನುವಾದವನ್ನು ಈಗ ಪ್ರಕಟಿಸಿದೆ. ನಮ್ಮ ಓದುಗರಿಗಾಗಿ ಅದು ಉತ್ತರಿಸಿರುವ ಎಂಟು ಪ್ರಶ್ನೆಗಳಲ್ಲಿ ಒಂದನ್ನು ಇಲ್ಲಿ ಪ್ರಕಟಿಸುತ್ತಿದ್ದೇವೆ.**




**ಈ ಕಿರುಪುಸ್ತಕದಲ್ಲಿ ಉತ್ತರಿಸಿರುವ ಇತರ ಪ್ರಶ್ನೆಗಳು**

- ♦ಮಹಾರಾಜನಿಗೆ ಬೆಂಬಲ ಕೊಟ್ಟಿದ್ದ ಶಕ್ತಿಗಳು ಯಾವವು?
- ♦ವಿಧಿ 370 ಮತ್ತು 35ಎ ರಲ್ಲಿ ಏನಿದೆ, ಅದು ಬಂದದ್ದು ಯಾವಾಗ?
- ♦ವಿಶೇಷ ಅಂಶಗಳು ಜಮ್ಮು ಮತ್ತು ಕಾಶ್ಮೀರ ರಾಜ್ಯಕ್ಕೆ ಮಾತ್ರವೇ ಇವೆಯೇ?
- ♦ಜಮ್ಮು ಮತ್ತು ಕಾಶ್ಮೀರದಲ್ಲಿ "ವಿಶೇಷ ಸ್ಥಾನಮಾನ"ವನ್ನು ಜಾರಿಗೊಳಿಸಿದ್ದು ಹೇಗೆ?
- ♦370ನೇ ವಿಧಿ ಭಾರತದೊಂದಿಗೆ ಜಮ್ಮು ಮತು ಕಾಶ್ಮೀರದ ಸಮಗ್ರೀಕರಣವನ್ನು ತಡೆದಿದೆಯೇ?
- ♦ಭಯೋತ್ಪಾದನೆಗೆ ಮತ್ತು ಕಾಶ್ಮೀರಿ ಪಂಡಿತ ಸಮುದಾಯ'ದ ಸಂಕಟಗಳಿಗೆ ವಿಧಿ 370 ಕಾರಣವೇ?
- ♦ವಿಧಿ 370 ಕಾಶ್ಮೀರದ ಅಭಿವೃದ್ಧಿಯನ್ನು ತಡೆದಿದೆಯೇ?

# ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ಕೊಟ್ಟಿದ್ದೇಕೆ?

ಸ್ವಾತಂತ್ರ್ಯದ ವೇಳೆಯಲ್ಲಿ ಭಾರತದ ವಿಭಜನೆಯಾಗುತ್ತಿದ್ದಾಗ ಜಮ್ಮು ಮತ್ತು ಕಾಶ್ಮೀರ ಡೋಗ್ರಾ ಮಹಾರಾಜ ಹರಿ ಸಿಂಗ್ ಆಳ್ವಿಕೆಯಲ್ಲಿದ್ದ ಸಂಸ್ಥಾನವಾಗಿತ್ತು, ಅದರಲ್ಲಿ ಮೂರು ಜಿಲ್ಲಾ ಪ್ರದೇಶಗಳಿದ್ದವು, ಜಮ್ಮು, ಕಾಶ್ಮೀರ ಮತ್ತು ಲಡಾಖ್. ಧಾರ್ಮಿಕ ನಂಬಿಕೆಯ ದೃಷ್ಟಿಯಿಂದ, ಬಹುಪಾಲು ಜನರು ಮುಸ್ಲಿಮರಾಗಿದ್ದರು. ಆ ವೇಳೆಯಲ್ಲಿ ಹೆಚ್ಚಿನ ರಾಜರುಗಳ ಸಂಸ್ಥಾನಗಳು ಭಾರತಕ್ಕೆ ಸೇರ್ಪಡೆಗೊಂಡು, ಸೇರ್ಪಡೆಯ ದಸ್ತಾವೇಜಿಗೆ ಸಹಿ ಹಾಕಿ ಭಾರತೀಯ ಒಕ್ಕೂಟವನ್ನು ಸೇರಿದವು.

ಕಾಶ್ಮೀರದಲ್ಲಿನ ಪರಿಸ್ಥಿತಿ ಭಿನ್ನವಾಗಿತ್ತು.

ಇಲ್ಲಿ ಕಾಶ್ಮೀರದ ಮಹಾರಾಜ ಹರಿ ಸಿಂಗ್ ಭಾರತಕ್ಕೆ ಸೇರಲು ನಿರಾಕರಿಸಿದರು. ಆತ ಅಕ್ಟೋಬರ್ 1947ರಲ್ಲಿ, ಅಂದರೆ ಭಾರತ ಸ್ವತಂತ್ರವಾದ ಎರಡು ತಿಂಗಳ ನಂತರ ಆಗ ಭಾರತದ ಬ್ರಿಟಿಶ್ ಗವರ್ನರ್–ಜನರಲ್ ಆಗಿದ್ದ ಮೌಂಟ್‌ಬ್ಯಾಟನ್‌ಗೆ ಒಂದು ಪತ್ರ ಬರೆದರು. ಅದರಲ್ಲಿ ಹೀಗೆ ಬರೆಯಲಾಗಿತ್ತು:

> "ಮಹಾಮಹಿಮರಾದ ತಮಗೆ ತಿಳಿದಿರುವಂತೆ, ಜಮ್ಮು ಮತ್ತು ಕಾಶ್ಮೀರದ ಸಂಸ್ಥಾನ ಭಾರತ ದೇಶಕ್ಕಾಗಲೀ, ಪಾಕಿಸ್ತಾನಕ್ಕಾಗಲೀ ಸೇರ್ಪಡೆಯಾಗಿಲ್ಲ. ಭೌಗೋಳಿಕವಾಗಿ ನನ್ನ ಸಂಸ್ಥಾನ ಎರಡೂ ದೇಶಗಳಿಗೆ ಹೊಂದಿಕೊಂಡಿದೆ. ಎರಡರರೊಂದಿಗೂ ಮಹತ್ವದ ಆರ್ಥಿಕ ಮತ್ತು ಸಾಂಸ್ಕೃತಿಕ ಕೊಂಡಿಗಳನ್ನು ಹೊಂದಿದೆ. ಇದಲ್ಲದೆ ನನ್ನ ಸಂಸ್ಥಾನ ಸೋವಿಯೆತ್ ಗಣರಾಜ್ಯ ಮತ್ತು ಚೀನಾದೊಂದಿಗೆ ಒಂದು ಸಾಮಾನ್ಯ ಗಡಿ ಹೊಂದಿದೆ. ಭಾರತ ಮತ್ತು ಪಾಕಿಸ್ತಾನ ದೇಶಗಳು ತಮ್ಮ ವಿದೇಶಾಂಗ ಸಂಬಂಧಗಳಲ್ಲಿ ಇದನ್ನು ಉಪೇಕ್ಷಿಸಲು ಸಾಧ್ಯವಿಲ್ಲ.
>
> ನಾನು ಯಾವ ದೇಶಕ್ಕೆ ಸೇರ್ಪಡೆಯಾಗಬೇಕು, ಎರಡೂ ದೇಶಗಳು ಮತ್ತು ನನ್ನ ಸಂಸ್ಥಾನದ ಹಿತದೃಷ್ಟಿಯಿಂದ, ಈ ಎರಡೂ ದೇಶಗಳೊಂದಿಗೆ ಮಿತ್ರತ್ವಪೂರ್ಣ ಸಂಬಂಧ'ಗಳೊಂದಿಗೆ, ಸ್ವತಂತ್ರವಾಗಿರುವುದು ಅತ್ಯುತ್ತಮವಲ್ಲವೇ ಎಂದು ನಿರ್ಧರಿಸಲು ನನಗೆ ಸಮಯ ಬೇಕಾಗಿತ್ತು."

ಬ್ರಿಟಿಶರು ಅವರ ಆಯಕಟ್ಟಿನ ಕಾರಣಗಳಿಗಾಗಿ, ಕಾಶ್ಮೀರದ ರಾಜಪ್ರಭುತ್ವವನ್ನು ಉಳಿಸಿಕೊಂಡು ಅದನ್ನು ಸ್ವತಂತ್ರವಾಗಿ ಇಡುವುದರಲ್ಲಿ ಆಸಕ್ತರಾಗಿದ್ದರು. ಆದರೆ ಕಾಶ್ಮೀರದ ಜನತೆಗೆ ಮಹಾರಾಜನ ಪಾಳೆಯಗಾರೀ ವ್ಯವಸ್ಥೆಯ ಕ್ರೌರ್ಯದ ಅನುಭವ ಅದಾಗಲೇ ಆಗಿತ್ತು. ಕಾಶ್ಮೀರದಲ್ಲಿ, ಇತರ ಹೆಚ್ಚಿನ ರಾಜರುಗಳ ಸಂಸ್ಥಾನಗಳಲ್ಲಿ ಇದ್ದಂತೆ, ಸ್ವಾತಂತ್ರ್ಯ ಆಂದೋಲನ ಬ್ರಿಟಿಶರ ವಿರುದ್ಧ ಮಾತ್ರವಲ್ಲ, ಆಯಾಯ ಸಂಸ್ಥಾನಗಳ ಆಳರಸರ ವಿರುದ್ಧವೂ ಗುರಿಯಿಟ್ಟಿತ್ತು. ಅವರ ಪಾಳೆಯಗಾರೀ ಆಳ್ವಿಕೆಗಳಲ್ಲಿ ಬಹುಪಾಲು ಭೂಮಿ ಕೆಲವೇ ಕೈಗಳಲ್ಲಿ ಅಪಾರ ಪ್ರಮಾಣದಲ್ಲಿ ಕೇಂದ್ರೀಕೃತವಾಗಿದ್ದು, ರೈತರ ವಿಪರೀತ ಶೋಷಣೆಯ ಮೇಲೆ ಆಧರಿಸಿದ್ದವು.

ಮಹಾರಾಜ ಹರಿ ಸಿಂಗ್ ಸಂಸ್ಥಾನದ ಆದಾಯದ ಮೂರನೇ ಒಂದು ಭಾಗವನ್ನು ತನ್ನ "ವೈಯಕ್ತಿಕ" ವೆಚ್ಚಗಳಿಗೆ ಸ್ವಾಧೀನ ಪಡಿಸಿಕೊಳ್ಳುತ್ತಿದ್ದರು. ಅದೇ ರೀತಿಯಲ್ಲಿ, ಬಹುಪಾಲು ಭೂಮಿ ದೊಡ್ಡ ಭೂಮಾಲಕರ ಒಡೆತನದಲ್ಲಿತ್ತು. ಇದು ರೈತಾಪಿ ಜನಗಳ ಬಡತನಕ್ಕೆ ಕಾರಣವಾಗಿತ್ತು. ನ್ಯಾಶನಲ್ ಕಾನ್ಫರೆನ್ಸ್ ಮತ್ತು ಅದರ ನೇತಾರ ಶೇಖ್ ಅಬ್ದುಲ್ಲಾ ನೇತೃತ್ವದಲ್ಲಿ ಒಂದು ಬೃಹತ್ ಆಂದೋಲನ ನಡೆದಿತ್ತು. ಇದು ರಾಜಪ್ರಭುತ್ವ ಕಾಶ್ಮೀರದಿಂದ ತೊಲಗಬೇಕು ಎಂಬ ಘೋಷಣೆಯ ವರೆಗೂ ತಲುಪಿತ್ತು. ಈ ಆಂದೋಲನ ಸಂಪೂರ್ಣವಾಗಿ ಜಾತ್ಯತೀತ ನೆಲೆಯ ಮೇಲೆ, ಸೂಫಿ ಮತ್ತು ಸ್ಥಳೀಯ ಆಚರಣೆಗಳು ಹಾಗೂ ಪರಂಪರೆಗಳ ಸಂಗಮವಾಗಿದ್ದ 'ಕಶ್ಮೀರಿಯತ್'ನ ಸಂಸ್ಕೃತಿಯ ಮೇಲೆ ನಿಂತಿತ್ತು.

ಆದ್ದರಿಂದ ಬ್ರಿಟಿಶರ ಕೃಪಾಪೋಷಣೆಯಲ್ಲಿ ಸ್ವತಂತ್ರವಾಗಿ ಉಳಿಯುವ ಹರಿ ಸಿಂಗ್ ರವರ ಯೋಜನೆಯನ್ನು ಕಾಶ್ಮೀರದ ಜನತೆ ಬಲವಾಗಿ ವಿರೋಧಿಸಿದರು. ಅವರು, ಇಸ್ಲಾಮಿನ ಹೆಸರಲ್ಲಿ ಪಾಕಿಸ್ತಾನವನ್ನು ಸೇರಬೇಕೆಂಬ ಜಿನ್ನಾ ಕರೆಯನ್ನೂ ತಿರಸ್ಕರಿಸಿದರು. "ಆಲ್ ಜಮ್ಮು ಅಂಡ್ ಕಾಶ್ಮೀರ ಮುಸ್ಲಿಂ ಕಾನ್ಫರೆನ್ಸ್" ನೇತೃತ್ವದಲ್ಲಿದ್ದ ಕೆಲವು ಮಂದಿಗಳು ಮಾತ್ರವೇ ಪಾಕಿಸ್ತಾನವನ್ನು ಸೇರ ಬಯಸುತ್ತಿದ್ದರು. ನಿಜ ಸಂಗತಿಯೆಂದರೆ, ಕಾಶ್ಮೀರದಲ್ಲಿನ ಪಾಳೆಯಗಾರೀ–ವಿರೋಧಿ ಆಂದೋಲನದ ಮುಖಂಡರು ಪಾಕಿಸ್ತಾನವನ್ನು ಒಂದು ಬಹುಸಂಖ್ಯಾಕವಾದೀ ಇಸ್ಲಾಮಿಕ್ ಪ್ರಭುತ್ವವಷ್ಟೇ ಅಲ್ಲ, ಅದು ಪಾಳೆಯಗಾರಿ ಹಿತಗಳು ಪ್ರಾಬಲ್ಯ ಹೊಂದಿರುವ ಒಂದು ಪ್ರಭುತ್ವ ಎಂದೂ ಕಾಣುತ್ತಿದ್ದರು. ಪಾಳೆಯಗಾರೀ ಭೂಹಿಡುವಳಿಗಳ ನಿರ್ಮೂಲನೆ ನ್ಯಾಶನಲ್ ಕಾನ್ಫರೆನ್ಸ್ ಆಂದೋಲನದ ಪ್ರಥಮ ಗುರಿಯಾಗಿತ್ತು, ಆದರೆ ಪಾಕಿಸ್ತಾನಿ ಪ್ರಭುತ್ವ ಇದನ್ನು ಬೆಂಬಲಿಸುವುದಿಲ್ಲ ಎಂದು ಅವರಿಗೆ ಗೊತ್ತಿತ್ತು.

ಪಾಕಿಸ್ತಾನ ಕಾಶ್ಮೀರದೊಳಕ್ಕೆ ಅತಿಕ್ರಮಣ ನಡೆಸಲು ಬ್ರಿಟಿಶರ ನೆರವಿನಿಂದ ವಾಯವ್ಯ ಗಡಿ ಪ್ರಾಂತ್ಯದಿಂದ ಸಶಸ್ತ್ರ ಗುಂಪುಗಳನ್ನು ಸಂಘಟಿಸಿತು. ಈ ದಾಳಿಕೋರರು ಒಂದಾದ ಮೇಲೊಂದರಂತೆ ನುಗ್ಗಿ ಬಂದ ಪ್ರದೇಶಗಳಲ್ಲಿ ಹಿಂದೂ ಮತ್ತು ಮುಸ್ಲಿಂ ಈ ಎರಡೂ ಸಮುದಾಯಗಳ ಜನಗಳ ಮೇಲೆ ಅತ್ಯಾಚಾರಗಳನ್ನು ನಡೆಸುತ್ತ, ಲೂಟಿ ಮಾಡುತ್ತ ಶ್ರೀನಗರದ ಹೊರವಲಯದ ವರೆಗೂ ತಲುಪಿದರು. ಈ ಹಂತದಲ್ಲೇ ನ್ಯಾಶನಲ್ ಕಾನ್ಫರೆನ್ಸ್ ನ ಧೀರ ಮುಖಂಡರ ನೇತೃತ್ವದ ಜನತಾ ಸೈನಿಕ ಪಡೆಗಳನ್ನು ದಾಳಿಕೋರರನ್ನು ಎದುರಿಸಿ ಹಿಮ್ಮೆಟ್ಟಿಸಲು ಅಣಿನೆರೆಸಲಾಯಿತು. ಅವರು ಅಪಾರ ಬಲಿದಾನಗಳ ಮೂಲಕ ಶ್ರೀನಗರವನ್ನು ರಕ್ಷಿಸಿಕೊಂಡರು, ಇದರಲ್ಲಿ ನೂರಾರು ಕಾಶ್ಮೀರಿಗಳು ಪ್ರಾಣ ಕಳಕೊಂಡರು.

ಹರಿ ಸಿಂಗ್, ಆತನ ಸಂಬಂಧಿಗಳು ಮತ್ತು ಆಸ್ಥಾನಿಗರು ಜಮ್ಮುವಿಗೆ ಪರಾರಿಯಾದರು. ಆಗಲೇ ಆತ ಮೌಂಟ್‌ಬ್ಯಾಟನ್‌ಗೆ ಭಾರತೀಯ ಸೇನೆಯ ನೆರವು ಕೋರಿ ಪತ್ರ ಬರೆದದ್ದು. ಆದರೆ ಇದು ಆತ ಭಾರತಕ್ಕೆ ಸೇರ್ಪಡೆಯಾದರೆ ಮಾತ್ರವೇ ಸಾಧ್ಯವಿತ್ತು. ಇಂತಹ ಸನ್ನಿವೇಶಗಳಲ್ಲೇ, ಜನತಾ ಪ್ರತಿರೋಧದ ಒತ್ತಡಕ್ಕೆ ಒಳಗಾಗಿ ಆತ ಸೇರ್ಪಡೆಯ ದಸ್ತಾವೇಜಿಗೆ ಅಕ್ಟೋಬರ್ 26, 1947ರಂದು ಸಹಿ ಹಾಕಿದರು. ಭಾರತೀಯ ಸೇನೆ ಶ್ರೀನಗರದಲ್ಲಿ ಬಂದಿಳಿಯಿತು, ಕಣಿವೆಯ ಜನಗಳ ಬೆಂಬಲದಿಂದ ಮತ್ತು ನೆರವಿನಿಂದ ದಾಳಿಕೋರರನ್ನು ಹೊಡೆದೋಡಿಸಿತು. ಓಡುತ್ತ ಹೋದ ಅವರು ನಿಂತದ್ದು ಉರಿ ಗಡಿಯಲ್ಲಷ್ಟೇ, ಅದೂ ಕೂಡ, ಇನ್ನೂ ಭಾರತೀಯ ಸೇನೆಯೊಳಗೆ ಒಂದು ಪಾತ್ರವನ್ನು ಹೊಂದಿದ್ದ ಬ್ರಿಟಿಶರ ಒತ್ತಡದ ಅಡಿಯಲ್ಲಿ.

ವಿಶ್ವಸಂಸ್ಥೆ ಇದರಲ್ಲಿ ತೊಡಗಿಕೊಂಡಿತು. ರಾಜ್ಯದ ಮೂರನೇ ಒಂದು ಭಾಗದ ಮೇಲೆ ಪಾಕಿಸ್ತಾನದ ಅತಿಕ್ರಮಣ ಹಾಗೆಯೇ ಉಳಿಯಿತು. .ಜನಮತಸಂಗ್ರಹದ ವಿಚಾರವನ್ನು ಸ್ವೀಕರಿಸಲಾಯಿತು. ಮತ್ತು ಕಾಶ್ಮೀರ "ವಿವಾದ" ಜನ್ಮ ತಳೆಯಿತು.

ಜನಮತಸಂಗ್ರಹ ನಡೆಯಲಿಲ್ಲ. ಏಕೆಂದರೆ, ಪಾಕಿಸ್ತಾನ ಆಕ್ರಮಿತ ಪ್ರದೇಶದಿಂದ ತನ್ನ ಸೇನೆಯನ್ನು ಹಿಂದಕ್ಕೆ ಕರೆಸಿಕೊಳ್ಳಲು ನಿರಾಕರಿಸಿತು. ಆದರೆ, ಕಾಶ್ಮೀರ ಕಣಿವೆ 'ಕಶ್ಮೀರಿಯತ್' ಎನ್ನಿಸಿಕೊಂಡಿರುವುದನ್ನು ಪ್ರತಿನಿಧಿಸುವ ತಮ್ಮ ಸಂಸ್ಕೃತಿಗಳನ್ನು, ತಮ್ಮ ಜೀವನಶೈಲಿಯನ್ನು, ತಮ್ಮ ಸ್ವಾಯತ್ತತೆಯನ್ನು ಭಾರತ ರಕ್ಷಿಸುತ್ತದೆ ಎಂಬ ನಂಬಿಕೆಯಿಂದ ದೃಢವಾಗಿ ನಿಂತರು.

ಕಾಶ್ಮೀರಕ್ಕೇ ವಿಶಿಷ್ಟವಾದ ಸನ್ನಿವೇಶಗಳಿವು. ಇದರಿಂದಾಗಿಯೇ ಕಾಶ್ಮೀರ ರಾಜ್ಯಕ್ಕೆ ವಿಶೇಷ ಸ್ಥಾನಮಾನ ಕೊಡುವ ವಿಚಾರ ಮೂಡಿದ್ದು. ವಿಶ್ವಸಂಸ್ಥೆಯ ಮೂಲಕ ಅಂತರ್‍ರಾಷ್ಟ್ರೀಯ ಮಧ್ಯಪ್ರವೇಶ ನಡೆಯದಂತೆ ತಡೆಗಟ್ಟಿದ್ದು ಇಂತಹ ಒಂದು ಏರ್ಪಾಟು. ಇದರಿಂದಾಗಿಯೇ ಕಾಶ್ಮೀರವು ಭಾರತೀಯ ಒಕ್ಕೂಟದೊಳಗೆ ತನ್ನ ಸ್ವಾಯತ್ತತೆಯನ್ನು ಉಳಿಸಿಕೊಳ್ಳುತ್ತಲೇ ಭಾರತದ ಒಂದು ಭಾಗವಾಗಿ ಉಳಿಯುವುದು ಸಾಧ್ಯವಾಯಿತು.


**ಮಹಾರಾಜ ಹರಿಸಿಂಗ್, ಶೇಖ್ ಅಬ್ದುಲ್ಲ ಮತ್ತು ನೆಹರು–1947ರಲ್ಲಿ**



**ಸೇರ್ಪಡೆಯ ದಸ್ತಾವೇಜಿಗೆ ಮಹಾರಾಜ ಸಹಿ ಮಾಡಿದ ಮೇಲೆ ಶ್ರೀನಗರ ವಿಮಾನ ನಿಲ್ದಾಣದಲ್ಲಿ ಬಂದಿಳಿಯುತ್ತಿರುವ ಭಾರತೀಯ ಸೈನಿಕರು**



**ಪಾಕಿಸ್ತಾನ–ಬೆಂಬಲಿತ ದಾಳಿಕೋರರನ್ನು, ಬಂದೂಕುಗಳನ್ನು ಹಿಡಿದು ಎದುರಿಸಿದ ನ್ಯಾಶನಲ್ ಕಾನ್ಫರೆನ್ಸ್ ಪಕ್ಷದ ನೇತೃತ್ವದ ನಾಗರಿಕರ ಪಡೆಗಳು, ಶ್ರೀನಗರವನ್ನು ರಕ್ಷಿಸಿ ನಂತರ ದಾಳಿಕೋರರನ್ನು ಹೊಡೆದೋಡಿಸುವಲ್ಲಿ ಭಾರತೀಯ ಸೈನ್ಯಕ್ಕೆ ನೆರವಾದರು, ಅಂತಹ ಒಂದು ಮಹಿಳಾ ಪಡೆಯ ಚಿತ್ರ**



# ಕರ್ನಾಟಕದಲ್ಲಿ ಯುವ ನಿರುದ್ಯೋಗ

ವಸಂತರಾಜ ಎನ್.ಕೆ.

ಕೃಪೆ: ಪಿ. ಮಹಮ್ಮದ್, ವಾ.ಭಾರತಿ




**2017–18 ರ ಸಾಲಿನ ಪಿ.ಎಲ್.ಎಫ್.ಎಸ್. (ಪೀರಿಯಾಡಿಕ್ ಲೇಬರ್ ಫೋರ್ಸ್ ಸರ್ವೆ – ನಿಗದಿತ ಅವಧಿಯ ಕಾರ್ಮಿಕರ ಸಮೀಕ್ಷಾ ವರದಿ) ಸಹ ಪ್ರಕಟವಾಗಿದೆ. ಇದರಲ್ಲಿ ಕೊಡಲಾದ ದೇಶದ ಅಂಕೆಸಂಖ್ಯೆಗಳು ಪತ್ರಿಕೆಗಳಲ್ಲಿ, ನಿರುದ್ಯೋಗ ಕಳೆದ 45 ವರ್ಷಗಳಲ್ಲೇ ಅತಿ ಹೆಚ್ಚು ಎಂಬಿತ್ಯಾದಿಯಾಗಿ ವರದಿಯಾಗಿವೆ. ಆದರೆ ರಾಜ್ಯವಾರು ಅಂಕೆಸಂಖ್ಯೆಗಳು, ಅದರಲ್ಲೂ ಕರ್ನಾಟಕದ ಯುವಜನರ ನಿರುದ್ಯೋಗದ ಅಂಕೆಸಂಖ್ಯೆಗಳು ವ್ಯಾಪಕವಾಗಿ ವರದಿಯಾಗಿಲ್ಲ. ಈ ಬರಹ ಅದನ್ನು ಪ್ರಸ್ತುತ ಪಡಿಸುವ ಪ್ರಯತ್ನ ಮಾಡುತ್ತದೆ.**

2017–18ರ ಉದ್ಯೋಗದ ಬಗೆಗಿನ ಸಮೀಕ್ಷೆ ವರದಿಯನ್ನು, ಮೋದಿ ಸರಕಾರ 'ಅಚ್ಛೇ ನ್ಯೂಸ್' ಅಲ್ಲವೆಂದು ಲೋಕಸಭಾ ಚುನಾವಣೆಯ ಮೊದಲು ತಡೆ ಹಿಡಿದಿದ್ದರೂ, ಲೀಕ್ ಆಗಿ ಚರ್ಚೆಗೆ ಬಂದಿತ್ತು. ಆದರೆ ಆ ಮೇಲಿನ ಪುಲವಾಮಾ ದಾಳಿಯ ಬಗೆಗಿನ ಸಮೂಹ ಸನ್ನಿಯಲ್ಲಿ ಮರೆಯಾಗಿತ್ತು. ಮೋದಿ 2.0 ರ ಅಮಲು ಇಳಿಯತೊಡಗಿದ ಮೇಲೆ ಮತ್ತೆ ಚರ್ಚೆಗೆ ಬಂದಿದೆ. ಮಾಧ್ಯಮಗಳು ಉದ್ಯೋಗ ನಷ್ಟದ ಬಗೆಗಿನ 'ಬ್ಯಾಡ್ ನ್ಯೂಸ್' ಸೆನ್ಸಾರ್ ಮಾಡಿಕೊಂಡಿದ್ದರು, ಉದ್ಯಮಿಗಳೇ ಉದ್ಯಮದ ಬಿಕ್ಕಟ್ಟು ಉದ್ಯೋಗ ನಷ್ಟದ ಬಗ್ಗೆ ಮಾತನಾಡಲಾರಂಭಿಸಿದ ಮೇಲೆ ಸುದ್ದಿಯಾಗಲಾರಂಭಿಸಿದೆ. ವಾಹನಗಳ ಉದ್ಯಮದಲ್ಲಿ ಎಪ್ರಿಲ್ ನಿಂದಲೇ 3.5 ಲಕ್ಷ ಉದ್ಯೋಗ ನಷ್ಟವಾಗಿದೆ. ಇನ್ನೂ ಲಕ್ಷಗಟ್ಟಲೆ ಉದ್ಯೋಗ ನಷ್ಟ ಆಗುತ್ತದೆ ಎಂದು ಆ ಕ್ಷೇತ್ರದ ಉದ್ಯಮಿಗಳು ಎಚ್ಚರಿಕೆ ಕೊಟ್ಟರು. ಬಿಸ್ಕತ್ತು ಮಾರಾಟ ಕುಸಿಯುತ್ತಿದ್ದು ಪಾರ್ಲೆ–ಜಿ 10 ಸಾವಿರ ಉದ್ಯೋಗ ನಷ್ಟದ ಘೋಷಣೆ ಮಾಡಿದೆ. ಬಿಸ್ಕತ್ತಿನಂತಹ ಬಳಕೆ ವಸ್ತುಗಳನ್ನು ಕೊಂಡುಕೊಳ್ಳಲು ದುಡ್ಡು ಇಲ್ಲದೆ ಮಾರಾಟ ಕುಸಿಯುತ್ತಿದೆ. ಇವೆಲ್ಲ ವರದಿಗಳಿಂದ ಆಗಲಿರುವ ಉದ್ಯೋಗ ನಷ್ಟ ಮಾತ್ರವಲ್ಲ, ಈಗಾಗಲೇ ನಿರುದ್ಯೋಗ ಮತ್ತು ಬಡತನದ ನಿಜ ಪರಿಸ್ಥಿತಿಯನ್ನು ಯಾವ 'ಗಿಮಿಕ್'ಗಳಿಂದಲೂ ಮುಚ್ಚಿಕೊಳ್ಳಲಾರದ ಸ್ಥಿತಿ ಉಂಟಾಗಿದೆ.

ಬಜೆಟಿನ ನಂತರ ಏರಿದ್ದ ಶೇರು ಮಾರುಕಟ್ಟೆ ಸಹ ಇಳಿಯುತ್ತಿದೆ. ಈ ಹಿನ್ನೆಲೆಯಲ್ಲೂ ಹೆಚ್ಚಿನ ಮಾಧ್ಯಮಗಳು ಜಾಣ ಕಿವುಡು, ಜಾಣ ಕುರುಡು ಪ್ರದರ್ಶಿಸುತ್ತಿದ್ದರೂ, ಕೆಲವಾದರೂ ಉದ್ಯೋಗ ನಷ್ಟ ಮತ್ತು ನಿರುದ್ಯೋಗದ ಪರಿಸ್ಥಿತಿ ಬಗ್ಗೆ ವರದಿ ಮಾಡಲಾರಂಭಿಸಿವೆ. ಕನ್ನಡದ ಪ್ರಮುಖ ದಿನಪತ್ರಿಕೆ ಕ್ಷೇತ್ರವಾರು ಉದ್ಯೋಗ ನಷ್ಟದ ಬಗ್ಗೆ ಸರಣಿ ವರದಿಗಳನ್ನು ಪ್ರಕಟಿಸಲಾರಂಭಿಸಿರುವುದು ಈ ಹಿನ್ನೆಲೆಯಲ್ಲಿ. ಈ ನಡುವೆ ತಡೆ ಹಿಡಿಯಲಾಗಿದ್ದ 'ಬ್ಯಾಡ್ ನ್ಯೂಸ್', 2017–18 ರ ಸಾಲಿನ ಪಿ.ಎಲ್.ಎಫ್.ಎಸ್. (ಪೀರಿಯಾಡಿಕ್ ಲೇಬರ್ ಫೋರ್ಸ್ ಸರ್ವೆ – ನಿಗದಿತ ಅವಧಿಯ ಕಾರ್ಮಿಕರ ಸಮೀಕ್ಷಾ ವರದಿ) ಸಹ ಪ್ರಕಟವಾಗಿದೆ. ಇದರಲ್ಲಿ ಕೊಡಲಾದ ದೇಶದ ಅಂಕೆಸಂಖ್ಯೆಗಳು ಪತ್ರಿಕೆಗಳಲ್ಲಿ, ನಿರುದ್ಯೋಗ ಕಳೆದ 45 ವರ್ಷಗಳಲ್ಲೇ ಅತಿ ಹೆಚ್ಚು ಎಂಬಿತ್ಯಾದಿಯಾಗಿ ವರದಿಯಾಗಿವೆ. (ವಿವರಗಳಿಗೆ ಕೋಷ್ಟಕ 1 ನೋಡಿ) ಆದರೆ ರಾಜ್ಯವಾರು ಅಂಕೆಸಂಖ್ಯೆಗಳು, ಅದರಲ್ಲೂ ಕರ್ನಾಟಕದ ಯುವಜನರ ನಿರುದ್ಯೋಗದ ಅಂಕೆಸಂಖ್ಯೆಗಳು ವ್ಯಾಪಕವಾಗಿ ವರದಿಯಾಗಿಲ್ಲ. ಈ ಬರಹ ಅದನ್ನು ಪ್ರಸ್ತುತ ಪಡಿಸುವ ಪ್ರಯತ್ನ ಮಾಡುತ್ತದೆ.

**ಕೋಷ್ಟಕ–1 ಭಾರತದ ನಿರುದ್ಯೋಗ ಪ್ರಮಾಣ (ಶೇಕಡಾದಲ್ಲಿ)***

| ವರ್ಷ | ಗ್ರಾಮೀಣ | | ನಗರ | |
|---|---|---|---|---|
| | ಪುರುಷ | ಮಹಿಳೆ | ಪುರುಷ | ಮಹಿಳೆ |
| 1972–73 | 1.2 | 0.5 | 4.8 | 6.0 |
| 1983 | 1.4 | 0.7 | 5.1 | 4.9 |
| 1993–94 | 1.4 | 0.7 | 5.1 | 4.9 |
| 2004–05 | 1.6 | 1.8 | 3.8 | 6.9 |
| 2011–12 | 1.7 | 1.7 | 3.0 | 5.2 |
| 2017–18 | 5.8 | 3.8 | 7.1 | 10.8 |

* **ಮೂಲ : ಪಿ.ಎಲ್.ಎಫ್.ಎಸ್. ವರದಿ 2017–18**

ದೇಶದ ನಿರುದ್ಯೋಗ ಪರಿಸ್ಥಿತಿಗಿಂತ ಕರ್ನಾಟಕದ ಪರಿಸ್ಥಿತಿ ಬಹಳ ಭಿನ್ನವಾಗೇನೂ ಇಲ್ಲ. 15–59 ವಯಸ್ಸಿನವರಲ್ಲಿ ನಿರುದ್ಯೋಗದ ಪ್ರಮಾಣ 2011–12ರಲ್ಲಿ ದೇಶದಲ್ಲೂ ಕರ್ನಾಟಕದಲ್ಲೂ ಶೇ.2 ಇದ್ದು, 2017–18ರಲ್ಲಿ ದೇಶದಲ್ಲಿ ಶೇ. 6ಕ್ಕೆ ಮತ್ತು ಕರ್ನಾಟಕದಲ್ಲಿ ಶೇ. 5ಕ್ಕೇರಿದೆ. ನಮ್ಮ ಸುತ್ತಲೂ ಕಾಣುವ ನಿರುದ್ಯೋಗಕ್ಕಿಂತ ಇದು ಬಹಳ ಕಡಿಮೆಯೆನಿಸುವದಿಲ್ಲವೇ? ನಿಜ. ಈ ವರದಿ ನಿರುದ್ಯೋಗದ ಪ್ರಮಾಣವನ್ನು ನಿರ್ವಚಿಸಿರುವ ವಿಧಾನದಿಂದ ಹೀಗೆ ಕಾಣುತ್ತದೆ. ವಿಧಾನ ಯಾವುದೇ ಇದ್ದರೂ ಕಳೆದ ಐದು ವರ್ಷಗಳಲ್ಲಿ ನಿರುದ್ಯೋಗದ ಪ್ರಮಾಣ ಮೂರು ಪಟ್ಟು ಏರಿಕೆಯಾಗಿದೆ. ಕಳೆದ 45 ವರ್ಷಗಳಲ್ಲೇ ಇದು ಅತಿ ಹೆಚ್ಚು ನಿರುದ್ಯೋಗದ ಪ್ರಮಾಣ ಎನ್ನುವ ಬಗ್ಗೆ ಯಾವುದೇ ಸಂಶಯವಿಲ್ಲ. ಚುನಾವಣೆಯ ಮೊದಲು ಲೀಕ್ ಆದ ಈ ವರದಿಯ ಬಗ್ಗೆ ಚರ್ಚೆ ನಡೆದಾಗ ಈ ಬಾರಿಯ ವರದಿಯಲ್ಲಿ ವಿಧಾನಗಳನ್ನು ಬದಲಾಯಿಸಲಾಗಿದೆ. ಆದ್ದರಿಂದ ಹಿಂದಿನ ವರದಿಗಳನ್ನು ಹೋಲಿಸಲಿಕ್ಕೆ ಆಗುವುದಿಲ್ಲ ಎಂದೆಲ್ಲಾ ಸರಕಾರಿ ಸಮಜಾಯಿಷಿ ಕೊಡಲಾಯಿತು. ಇದು ನಿಜವಲ್ಲ. ವೈಜ್ಞಾನಿಕ ಸ್ಯಾಂಪಲ್ ನಿರ್ಧಾರ ಮತ್ತು ವ್ಯಾಪಕ ಸಮೀಕ್ಷೆ ನಂತರ ತಯಾರಿಸಲಾಗುವ ವರದಿಯಿದು. ಈ ವರದಿಗಾಗಿ ಜುಲೈ 2017ರಿಂದ ಜೂನ್ 2018ವರೆಗೆ 224 ಹಳ್ಳಿಗಳು ಮತ್ತು 295 ನಗರ ಬ್ಲಾಕುಗಳಲ್ಲಿ 4152 ಕುಟುಂಬಗಳ ಉದ್ಯೋಗ–ನಿರುದ್ಯೋಗದ ವಿವರವಾದ ಸಮೀಕ್ಷೆ ಮಾಡಲಾಯಿತು.

ವರದಿ ಎರಡು ರೀತಿಯ ನಿರುದ್ಯೋಗದ ಪ್ರಮಾಣಗಳನ್ನು ಕೊಡುತ್ತದೆ. ಒಂದು ನಿರುದ್ಯೋಗ ಪ್ರಮಾಣದ 'ಸಾಮಾನ್ಯ ಸ್ಥಿತಿ' ಮತ್ತು ಇನ್ನೊಂದು 'ಸದ್ಯದ ಸ್ಥಿತಿ'. 'ಸದ್ಯದ ಸ್ಥಿತಿ' ನಿರುದ್ಯೋಗದ ಪ್ರಮಾಣ 'ಸಾಮಾನ್ಯ ಸ್ಥಿತಿ' ಯದಕ್ಕಿಂತಲೂ ಹೆಚ್ಚಿರುತ್ತದೆ. ಸ್ಥೂಲವಾಗಿ ಹೇಳುವುದಾದರೆ 'ಸಾಮಾನ್ಯ ಸ್ಥಿತಿ' ಸಮೀಕ್ಷೆಯ ಹಿಂದಿನ ಒಂದು ವರ್ಷದ ಸರಾಸರಿ ಸ್ಥಿತಿ ಬಿಂಬಿಸಿದರೆ, 'ಸದ್ಯದ ಸ್ಥಿತಿ' ಹಿಂದಿನ ಒಂದು ವಾರದ ಸ್ಥಿತಿಯನ್ನು ಬಿಂಬಿಸುತ್ತದೆ. ವರದಿ ಎರಡನ್ನೂ ಕೊಟ್ಟರೂ, ಹೆಚ್ಚಾಗಿ 'ಸಾಮಾನ್ಯ ಸ್ಥಿತಿ'ಯ ಅಂಕೆಸಂಖ್ಯೆಗಳನ್ನು ಬಳಸಲಾಗುತ್ತದೆ. ಮೇಲೆ ಹೇಳಿದ ಮತ್ತು ಮುಂದೆ ಈ ಲೇಖನದಲ್ಲಿ ಹೇಳಲಿರುವ ಅಂಕೆಸಂಖ್ಯೆಗಳೆಲ್ಲ 'ಸಾಮಾನ್ಯ ಸ್ಥಿತಿ'ಯ ನಿರುದ್ಯೋಗ ಪ್ರಮಾಣ. ಆದರೆ ಇದು ಸಾಮಾನ್ಯವಾಗಿ ನಿರೀಕ್ಷಿಸಬಹುದಾದಂತೆ, ಉದ್ಯೋಗಸ್ಥರ (ಅಂದರೆ ಇಡೀ ವರ್ಷ ಉದ್ಯೋಗ ಹೊಂದಿದ್ದವರ) ಸಂಖ್ಯೆ ಮತ್ತು (ಕೆಲಸ ಮಾಡಬಹುದಾದ ವಯೋಮಾನದ) ಒಟ್ಟು ಜನಸಂಖ್ಯೆಯ ಪ್ರಮಾಣವಲ್ಲ. ಬದಲಾಗಿ ಒಟ್ಟು ಕೆಲಸ ಹುಡುಕುವವರಲ್ಲಿ, ಕೆಲಸ ಸಿಗದೆ ಹೋದವರ ಪ್ರಮಾಣ. ಕೆಲಸ ಮಾಡುವವರಲ್ಲಿ ಕಳೆದ ಒಂದು ವರ್ಷದ ಅವಧಿಯಲ್ಲಿ 6 ತಿಂಗಳುಗಳಿಗಿಂತ (180 ದಿನಗಳು) ಹೆಚ್ಚು (ಅದು ನಿರಂತರವಾಗಿ ಇರಬೇಕು ಎಂದೂ ಇಲ್ಲ) ಕೆಲಸ ಮಾಡಿರುವ ಕಾರ್ಮಿಕರು ಪ್ರಮುಖವಾಗಿ ಸೇರುತ್ತಾರೆ. ಜತೆಗೆ ಕನಿಷ್ಟ 30 ದಿನದ (ಅಂದರೆ 30ರಿಂದ 180 ದಿನ) ಕೆಲಸ ಮಾಡಿರುವ ಅರೆ–ಉದ್ಯೋಗಿಗಳೂ ಸೇರುತ್ತಾರೆ. ಅಂದರೆ ಈ ವಿಧಾನದ ಪ್ರಕಾರ ಕೆಲಸ ಸಿಗದ ನಿರುದ್ಯೋಗಿಗಳೆಂದರೆ ವರ್ಷದಲ್ಲಿ 30 ದಿನಕ್ಕಿಂತ ಕಡಿಮೆ ಕೆಲಸ ಮಾಡಿದವರು ಮಾತ್ರ. ಒಟ್ಟು ಕೆಲಸ ಹುಡುಕುವವರ ಸಂಖ್ಯೆಯಲ್ಲಿ 6 ತಿಂಗಳುಗಳಿಗಿಂತ (180 ದಿನಗಳು) ಹೆಚ್ಚು ಕೆಲಸ ಹುಡುಕುತ್ತಿರುವವರು ಆದರೆ ಸಿಕ್ಕದಿರುವ ಕಾರ್ಮಿಕರು ಮತ್ತು 6 ತಿಂಗಳುಗಳಿಗಿಂತ (180 ದಿನಗಳು) ಹೆಚ್ಚು ಕೆಲಸ ಮಾಡುತ್ತಿರುವವರು ಸೇರುತ್ತಾರೆ. ಸಕ್ರಿಯವಾಗಿ (ಕೌಶಲ್ಯ ಇಲ್ಲದೆ ಅಥವಾ ಕೌಶಲ್ಯಕ್ಕೆ ತಕ್ಕ ಕೆಲಸ ಸಿಗದೆ ಅಥವಾ ಕೆಲಸ ಸಿಗದೆ ಹತಾಶರಾಗಿ ಕೈ ಚೆಲ್ಲಿದವರು ಅಥವಾ ಯಾವುದೇ ಇತರ ಕಾರಣಕ್ಕಾಗಿ) ಕೆಲಸ ಹುಡುಕದೆ ಇರುವವರು ಒಟ್ಟು 'ಕಾರ್ಮಿಕರ ಸಂಖ್ಯೆ'ಯಲ್ಲಿ ಸೇರುವುದಿಲ್ಲ.

ಆದ್ದರಿಂದಲೇ ಪಿ.ಎಲ್.ಎಫ್.ಎಸ್ 2017–18 ವರದಿಯ ಪ್ರಕಾರ ಕಾರ್ಮಿಕ–ಜನಸಂಖ್ಯೆ ಪ್ರಮಾಣ (ಅಂದರೆ ಒಟ್ಟು 'ಕಾರ್ಮಿಕರು' ಮತ್ತು ಒಟ್ಟು 'ಜನಸಂಖ್ಯೆ' ನಡುವಿನ ಪ್ರಮಾಣ) ಶೇ. 100 ಇರುವುದಿಲ್ಲ. ಕಡಿಮೆ ಇರುತ್ತದೆ. ಕರ್ನಾಟಕದಲ್ಲಿ ಶೇ 55.8, ಅಂದರೆ ಕೆಲಸ ಮಾಡುವ ವಯೋಮಾನದ ಜನರ ಇಬ್ಬರಲ್ಲಿ ಒಬ್ಬರು ಮಾತ್ರ ಕೆಲಸ ಹುಡುಕುತ್ತಿದ್ದಾರೆ ಅಥವಾ ಮಾಡುತ್ತಿದ್ದಾರೆ ಮತ್ತು 'ಕಾರ್ಮಿಕ ಸಂಖ್ಯೆ'ಗೆ ಸೇರುತ್ತಾರೆ. ಈ ಪ್ರಮಾಣ ಗ್ರಾಮೀಣ–ನಗರ ಪುರುಷ–ಮಹಿಳೆಯರ ಸಂದರ್ಭದಲ್ಲಿ ಬಹಳ ಭಿನ್ನವಾಗಿದೆ. ವರದಿಯ ಪ್ರಕಾರ ಕಾರ್ಮಿಕ–ಜನಸಂಖ್ಯೆ ಪ್ರಮಾಣ ಕರ್ನಾಟಕದ ಗ್ರಾಮೀಣ ಪುರುಷರಲ್ಲಿ ಶೇ. 84.2, ಗ್ರಾಮೀಣ ಮಹಿಳೆಯರಲ್ಲಿ ಶೇ. 32.0, ನಗರದ ಪುರುಷರಲ್ಲಿ ಶೇ. 79.9, ನಗರದ ಮಹಿಳೆಯರಲ್ಲಿ ಶೇ. 25.2 ಇದೆ. (ಈ ಸಂಖ್ಯೆಯಲ್ಲಿ ಅಖಿಲ ಭಾರತ ಮಟ್ಟಕ್ಕಿಂತ ಸಾಕಷ್ಟು ಹೆಚ್ಚಿದೆ) ವರದಿಯ ವಿಧಾನದ ಪ್ರಕಾರ ಒಂದು ವರ್ಷದಲ್ಲಿ ಕನಿಷ್ಟ 30 ದಿನದ ಕೆಲಸ ಸಹ ಸಿಗದವರು ಮಾತ್ರ 'ನಿರುದ್ಯೋಗಿ'ಗಳು. ಉಳಿದ ಖಾಯಂ ಆಗಿರುವ ಕೆಲಸ ಇರುವ ಪೂರ್ಣ ಉದ್ಯೋಗಿಗಳು, ವರ್ಷದಲ್ಲಿ 30 ದಿನಗಳಿಗಿಂತ ಹೆಚ್ಚು ದಿನ ಕೆಲಸ ಮಾಡಿದ ಎಲ್ಲ ಅರೆ–ಕಾಲಿಕ ಕೆಲಸ ಮಾಡಿದವರು 'ಉದ್ಯೋಗಿ'ಗಳು. ಈ ವಿಧಾನವೇ ನಿರುದ್ಯೋಗದ (ಅದರಲ್ಲೂ ಅರೆ–ನಿರುದ್ಯೋಗ ಮತ್ತು ಋತುಮಾನದ (ಸೀಸನಲ್) ನಿರುದ್ಯೋಗದ ಪ್ರಮಾಣವನ್ನು ದೊಡ್ಡ ರೀತಿಯಲ್ಲಿ ಮರೆ ಮಾಚುತ್ತದೆಯೆಂಬುದು ಸ್ಪಷ್ಟ.

ಇವನ್ನೆಲ್ಲ ಗಮನದಲ್ಲಿಟ್ಟುಕೊಂಡು **ಕರ್ನಾಟಕ ಯುವಜನರ 'ನಿರುದ್ಯೋಗ ಪ್ರಮಾಣ'ದ** ಈ ಕೆಳಗಿನ ಅಂಕೆಸಂಖ್ಯೆಗಳನ್ನು ಗಮನಿಸಬೇಕು.

* **ಯುವ (18ರಿಂದ 40 ವರ್ಷ) ನಿರುದ್ಯೋಗ ಪ್ರಮಾಣ** ಕರ್ನಾಟಕದಲ್ಲಿ **ಶೇ.7** ಇದ್ದು, ಸಾಮಾನ್ಯ ನಿರುದ್ಯೋಗ ಪ್ರಮಾಣಕ್ಕಿಂತ ಹೆಚ್ಚಿದೆ. 40ಕ್ಕಿಂತ ಹೆಚ್ಚಿನ ವಯಸ್ಸಿನ ಕಾರ್ಮಿಕರಲ್ಲಿ ನಿರುದ್ಯೋಗ ಪ್ರಮಾಣ ಕೇವಲ 0.5.
* **ನಗರದ ಯುವ ನಿರುದ್ಯೋಗ** ಪ್ರಮಾಣವು **(ಶೇ. 9)** ಗಾಮೀಣ ಯುವ ನಿರುದ್ಯೋಗ ಪ್ರಮಾಣಕ್ಕಿಂತ **(ಶೇ.6)** ಹೆಚ್ಚು.
* ಗ್ರಾಮೀಣ ಕರ್ನಾಟಕದಲ್ಲಿ **ನಿಯಮಿತ ವೇತನ ಇರುವ** ಯುವ ಉದ್ಯೋಗಿಗಳ ಪ್ರಮಾಣ ಕೇವಲ **ಶೇ. 18.** ನಗರದಲ್ಲಿ **ಶೇ. 53**
* ನಿಯಮಿತ ವೇತನ ಇರುವ ಯುವ ಉದ್ಯೋಗಿಗಳಲ್ಲಿ, **ಗ್ರಾಮೀಣ ಕರ್ನಾಟಕದಲ್ಲಿ ಶೇ. 97 ಮತ್ತು ನಗರ ಪ್ರದೇಶದಲ್ಲಿ ಶೇ. 96** ಕಾರ್ಮಿಕರ ಬಳಿ ಯಾವುದೇ ರೀತಿಯ ಲಿಖಿತ ಕೆಲಸದ ಕಾಂಟ್ರಾಕ್ಟ್ ಒಪ್ಪಂದ ಇಲ್ಲ. ಅಂದರೆ ಇವು **ತಾತ್ಕಾಲಿಕ (ಖಾಯಮೇತರ) ಉದ್ಯೋಗಗಳು.**
* ಶಿಕ್ಷಿತ (ಡಿಪ್ಲೊಮಾ, ಡಿಗ್ರಿ ಅಥವಾ ಹೆಚ್ಚಿನ ಡಿಗ್ರಿ ಇರುವ) ಯುವಜನರಲ್ಲಿ ನಿರುದ್ಯೋಗ ಪ್ರಮಾಣ ವಿಪರೀತ ಹೆಚ್ಚು. **ಗ್ರಾಮೀಣ ಯುವಜನರಲ್ಲಿ ಡಿಪ್ಲೊಮಾ ಪಡೆದವರಲ್ಲಿ ಶೇ. 38 ಮತ್ತು ಡಿಗ್ರಿ ಪಡೆದವರಲ್ಲಿ ಶೇ. 26 ನಿರುದ್ಯೋಗ** ಪ್ರಮಾಣವಿದೆ. **ನಗರದ ಯುವಜನರಲ್ಲಿ ಡಿಪ್ಲೊಮಾ ಪಡೆದವರಲ್ಲಿ ಶೇ. 18 ಮತ್ತು ಡಿಗ್ರಿ ಪಡೆದವರಲ್ಲಿ ಶೇ. 14 ನಿರುದ್ಯೋಗ** ಪ್ರಮಾಣವಿದೆ.



# ಕೃಷಿ ಕೂಲಿಕಾರರ ಸಂಘದ ಗ್ರಾಮ ಘಟಕಗಳ ಉದ್ಘಾಟನೆ

ಯಾದಗೀರ್ ಜಿಲ್ಲೆ, ಶಹಾಪುರ ತಾಲೂಕಿನ ಬಾಣತಿಹಾಳ ಗ್ರಾಮದ ಅಭಿಮನ್ಯು ಇವರ ಅಧ್ಯಕ್ಷತೆಯಲ್ಲಿ ನಡೆದ ಬಹಿರಂಗ ಸಭೆಯಲ್ಲಿ ಗ್ರಾಮ ಘಟಕಗಳ ಉದ್ಘಾಟನೆ ಮಾಡಲಾಯಿತು. ರಾಜ್ಯ ಸಮಿತಿಯ ಜಂಟಿ ಕಾರ್ಯದರ್ಶಿ ಮಲ್ಲಮ್ಮ ಕೊಡ್ಲಿ ಮಾತನಾಡಿ  ಕೃಷಿ ಕೂಲಿಕಾರರ ವಲಸೆ ಹೆಚ್ಚಾಗಿದೆ. ಮಹಿಳಾ ಕೂಲಿಕಾರರ ಮೇಲೆ ದಬ್ಬಾಳಿಕೆ ದೌರ್ಜನ್ಯ ಅತ್ಯಾಚಾರಗಳು ಹೆಚ್ಚಾಗಿವೆ.  ಇಂತಹ ಕೆಟ್ಟ ಪರಿಸ್ಥಿತಿಯ ವಿರುದ್ಧ ಹೋರಾಟಕ್ಕೆ ಅವರು ಕರೆ ನೀಡಿದರು.

ರಾಜ್ಯ ಕಾರ್ಯದರ್ಶಿ ಚಂದ್ರಪ್ಪ ಹೊಸ್ಕೇರಾ ಮಾತನಾಡಿ ಉದ್ಯೋಗ ಖಾತ್ರಿ ಸಮರ್ಪಕ ಜಾರಿ ಮಾಡದೆ ಕೇಂದ್ರ ಸರ್ಕಾರ ಅನುದಾನ ಕಡಿತ ಮಾಡಿ ಉದ್ಯೋಗ ಖಾತ್ರಿ ಯೋಜನೆಯನ್ನು ದುರ್ಬಲಗೊಳಿಸಲು ಹೊರಟಿದೆ ಎಂದು ಆರೋಪಿಸಿದರು.

ಜಿಲ್ಲಾ ಸಮಿತಿ ಅಧ್ಯಕ್ಷರಾದ ದಾವಲಸಾಬ ನದಾಫ್ ಮಾತನಾಡಿ ಮನೆ, ನಿವೇಶನ ಇಲ್ಲದ ಕೂಲಿಕಾರರಿಗೆ ನಿವೇಶನ ನೀಡಲು ಜಾಗ ಖರೀದಿಸಿ ಕೊಡಬೇಕೆಂದು ಒತ್ತಾಯಿಸಿದರಲ್ಲದೆ, ಬಲಿಷ್ಟ ಸಂಘಟನೆ ಮತ್ತು ಹೋರಾಟವೇ ನಮಗೆ ದಾರಿದೀಪವಾಗುತ್ತದೆ ಎಂದು ಹೇಳಿದರು. ಈ ಸಂದರ್ಭದಲ್ಲಿ ಭೀಮಣ್ಣ ನಾಯ್ಕಡಿ, ಅಂಬ್ಬಯ್ಯ ಬೇವಿನಕಟ್ಟೆ, ಹುಸೇನಿ ಮೊದಲಾದ ಮುಖಂಡರು ಹಾಜರಿದ್ದರು.

ನಂತರ ಘಟಕ ಸಮ್ಮೇಳನದ ಕಲಾಪಗಳನ್ನು ಪ್ರಾರಂಭಿಸಿ, ಬಾಣತಿಹಾಳ, ನಾಗರಾಳ ಅಲ್ದಾಳ ಮತ್ತು ನಾಗನಟಗಿ ಘಟಕಗಳ ಸಮಿತಿಗಳನ್ನು ಆಯ್ಕೆ ಮಾಡಲಾಯಿತು.

ಕೇರಳ ಮಾದರಿಯಲ್ಲಿ 60 ವರ್ಷ ದಾಟಿದ ಕೂಲಿಕಾರರಿಗೆ ಪಿಂಚಣಿ ವ್ಯವಸ್ಥೆಯ ಸಮಗ್ರ ಶಾಸಬ ಜಾರಿಗೆ ತರಬೇಕೆಂಭ ನಿರ್ಣಯವನ್ನು ಅಂಗೀಕರಿಸಲಾಯಿತು.

**ನಾಗರಾಳ ಗ್ರಾಮ ಘಟಕ**

**ಕಾರ್ಯದರ್ಶಿ :** ಖಾಜಾಸಾಬ ಎಂ. ಬೋನಾಳ, 15 ಜನರ ಸಮಿತಿ ರಚನೆ ಮಾಡಲಾಯಿತು.

**ಅಲ್ದಾಳ ಗ್ರಾಮ ಘಟಕ**

**ಅಧ್ಯಕ್ಷರು :** ಲಕ್ಷ್ಮಿಬಾಯಿ,

**ಉಪಾಧ್ಯಕ್ಷರು :** ಹುಸೇನಬಿ, ಮಹಾದೇವಿ,

**ಕಾರ್ಯದರ್ಶಿ :** ಶರಣಬಸವ **ಸಹ ಕಾರ್ಯದರ್ಶಿ:** ಶರಣಬಸವ ಆದಪ್ಪ ಜಂಬಲದಿನ್ನಿ, ಮಲಕಪ್ಪ.






## ಪ್ರೀತಿಯ ಜೋಳಿಗೆ

ಕವನ

ಜೋಳಿಗೆ ಹಿಡಿದಿರು ಅನ್ನಕ್ಕಾಗಿಯಲ್ಲ ಪ್ರೀತಿಗಾಗಿ
ಕೊಡುವಿರಾ ತುಸು ಪ್ರೀತಿಯನ್ನು ?

ಹಿಂದು, ಮುಸ್ಲೀ, ಕ್ರೈಸ್ತ ಎಂಬ ಧರ್ಮದ ಪ್ರೀತಿಬೇಡ ನಮಗೆ
ಎಲ್ಲಾ ಧರ್ಮವನ್ನು ಸಮನಾಗಿ ಕಾಣುವ ಪ್ರೀತಿಬೇಕು
ಕೂಡುವಿರಾ ತುಸು ಪ್ರೀತಿಯನ್ನು?

ಗಂಡು ಹೆಣ್ಣು ಎಂಬ ಲಿಂಗ ಭೇದದ ಪ್ರೀತಿ ಬೇಡ ನಮಗೆ
ಸಮತೆಯ ಸಮಾಜ ನಿರ್ಮಿಸಲು ಎರಡು ಲಿಂಗಗಳ ಅವಶ್ಯ
ಇರುವಾಗ,
ಸಮಾನತೆಯ ಸಾರುವ ಪ್ರೀತಿ ಬೇಕು
ಕೂಡುವಿರಾ ತುಸು ಪ್ರೀತಿಯನ್ನು?

ಮೇಲ್ಜಾತಿ, ಕೇಳಜಾತಿ ಎಂಬ ಜಾತಕದ ಪ್ರೀತಿ ಬೇಡ ನಮಗೆ
ಜೀವಿಗಳ ದೇಹದಲ್ಲಿ ಹರಿವ ರಕ್ತ ಒಂದಾಗಿರುವಾಗ,
ಹಂಗಿಲ್ಲದೆ ಜೊತೆ ನಡೆಯುವ ಪ್ರೀತಿಬೇಕು
ಕೂಡುವಿರಾ ತುಸು ಪ್ರೀತಿಯನ್ನು?

ಬಡವ ಶ್ರೀಮಂತನೆಂಬ ಅಂತರದ ಪ್ರೀತಿ ಬೇಡ ನಮಗೆ
ಉಣ್ಣುವ ಅನ್ನ ಒಂದೆಯಾಗಿರುವಾಗ, ಅಂತರದ ಪ್ರೀತಿಬೇಡ ನನಗೆ
ಬೆವರಿಗೆ ಬೆಲೆ ನೀಡುವ ಪ್ರೀತಿ ಬೇಕು, ಕೂಡುವಿರಾ ತುಸು
ಪ್ರೀತಿಯನ್ನು?

ದೇವರಿಗೆ ಕಳಶ, ಕಿರೀಟ ಕೊಡುವ ಹಣವಂತರ ಪ್ರೀತಿ ಬೇಡ
ನಮಗೆ
ಅದೇ ಗುಡಿಯ ಮುಂದೆ ಬೇಡುವ ಕೈಗಳಿಗೆ ಕೆಲಸ ಕೊಡುವ
ಗುಣವಂತರ ಪ್ರೀತಿಬೇಕು ಕೂಡಿವಿರಾ ತುಸು ಪ್ರಿತಿಯನ್ನು ?

ಧರ್ಮ ಧರ್ಮ ಎಂದು ಎದೆ ಉಬ್ಬಿಸಿ
ಪ್ರಾಣ ಕೊಡಲು ಸಿದ್ದರಿರುವವರ ಪ್ರೀತಿಬೇಡ ನಮಗೆ
ಎಲ್ಲರಿಗೂ ಈ ನೆಲೆದಲ್ಲಿ ಬದುಕಲು ಅವಕಾಶವಿದೆ ಎಂದು ಅರಿತ
ಮನಗಳ ಪ್ರೀತಿ ಬೇಕು, ಕೊಡುವಿರಾ ತುಸು ಪ್ರೀತಿಯನ್ನು ?

ಸಾವನ್ನು ಸಂಭ್ರಮಿಸುವ ವಿಕೃತಿ ಮನಸ್ಸುಗಳ ಪ್ರೀತಿ ಬೇಡ ನಮಗೆ
ಸಾವು ನಾಳೆ ನಮ್ಮನ್ನೂ ಹಿಂಬಾಲಿಸುವುದು ಎಂದು ಮೌನ
ತಾಳುವ
ಮನಸ್ಸುಗಳ ಪ್ರೀತಿ ಬೇಕು ನನಗೆ
ಜೋಳಿಗೆ ಹಿಡಿದಿರುವೆ  ಕೊಡುವಿರಾ ತುಸು ಪ್ರೀತಿಯನ್ನು?

**ಲಕ್ಷ್ಮೀದೇವಿ ಹಿಟ್ನಾಳ**

# ದಲಿತರ ಮೇಲೆ ದೌರ್ಜನ್ಯ ಹೆಚ್ಚಳಕ್ಕೆ ಖಂಡನೆ

ದಲಿತ ವಿದ್ಯಾರ್ಥಿಗಳ ಶೈಕ್ಷಣಿಕ ಹಕ್ಕುಗಳ ರಕ್ಷಣೆಗೆ ಒತ್ತಾಯಿಸಿ ಹಗರಿಬೊಮ್ಮನಹಳ್ಳಿ ತಹಶೀಲ್ದಾರ್ ಕಚೇರಿ ಎದುರು ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್ಎಫ್ಐ) ಮತ್ತು ದಲಿತ ಹಕ್ಕುಗಳ ಸಮಿತಿ ಪದಾಧಿಕಾರಿಗಳು ಧರಣಿ ನಡೆಸಿದರು.

ಡಿಎಚ್ಎಸ್ ಸಂಚಾಲಕಿ ಬಿ.ಮಾಳಮ್ಮ ಮಾತನಾಡಿ, ರಾಜ್ಯದಲ್ಲಿ ದಲಿತರ ಮೇಲಿನ ದೌರ್ಜನ್ಯಗಳು ಹೆಚ್ಚುತ್ತಲೇ ಇವೆ. ಸರ್ಕಾರದಿಂದ ಸಿಗಬೇಕಾದ ಕನಿಷ್ಠ ಸೌಲಭ್ಯಗಳನ್ನು ನೀಡಲು ಸರ್ಕಾರ ನಿರಾಕರಿಸುತ್ತಿದೆ. ಎಲ್ಲವನ್ನೂ ಬೀದಿಗಿಳಿದು ಪ್ರತಿಭಟನೆ ಮಾಡಿದ ನಂತರವೇ ಪಡೆಯಬೇಕಾದ ಪರಿಸ್ಥಿತಿ ಬಂದೊದಗಿದೆ. ಭಾರತದ ಸಂವಿಧಾನದ ಆಶಯಗಳೇ ಇದುವರೆಗೂ ಈಡೇರಿಲ್ಲ ಎಂದು ಕಳವಳ ವ್ಯಕ್ತಪಡಿಸಿದರು.

ಶೈಕ್ಷಣಿಕ ಕ್ಷೇತ್ರದಲ್ಲಿ ದಲಿತರ ಮೇಲೆ ನಡೆಯುತ್ತಿರುವ ಯೋಜನಾಬದ್ಧ ದಾಳಿ ಇದಾಗಿದೆ. ದಲಿತರ ಮೂಲ ಹಕ್ಕುಗಳನ್ನು ಮೊಟಕುಗೊಳಿಸಿ ಸಂವಿಧಾನಕೆ ಅಪಚಾರ ಮಾಡಲಾಗುತ್ತಿದೆ ಎಂದರು.

ವಿದ್ಯಾರ್ಥಿ ಫೆಡರೇಷನ್ ಸಂಚಾಲಕ ದೊಡ್ಡ ಬಸವರಾಜ ಮಾತನಾಡಿ, ಎಸ್ಸಿ, ಎಸ್ಟಿ ಮತ್ತು ಬಿಸಿಎಂ ಸರ್ಕಾರಿ ಹಾಸ್ಟೆಲ್‌ಗಳಿಗೆ ಪ್ರವೇಶ ಪಡೆಯಲು ಅರ್ಜಿ ಸಲ್ಲಿಸಿದ ಎಲ್ಲ ವಿದ್ಯಾರ್ಥಿಗಳಿಗೆ ಹಾಸ್ಟೆಲ್ ಸೌಲಭ್ಯ ನೀಡಬೇಕು. ಸಿಬಿಎಸ್ಇ ಪರೀಕ್ಷೆ ಶುಲ್ಕ ಎಸ್ಸಿ, ಎಸ್ಟಿ ವಿದ್ಯಾರ್ಥಿಗಳಿಗೆ ರೂ. 50 ರಿಂದ 1200ಗಳಿಗೆ ಮತ್ತು ಇತರೆ ವಿದ್ಯಾರ್ಥಿಗಳಿಗೆ ರೂ. 1500ಕ್ಕೆ ಏರಿಸಿರುವುದನ್ನು ಕೇಂದ್ರ ಸರ್ಕಾರ ಹಿಂಪಡೆಯಬೇಕು ಎಂದರು.



ಹಾಸ್ಟೆಲ್ ವಿದ್ಯಾರ್ಥಿಗಳ ಆಹಾರ ಭತ್ಯೆಯನ್ನು ರೂ. 3 ಸಾವಿರಕ್ಕೆ ಹೆಚ್ಚಿಸಬೇಕು. ಕನ್ನಡ ವಿಶ್ವವಿದ್ಯಾಲಯದ ಪರಿಶಿಷ್ಟ ಸಂಶೋಧನಾ ವಿದ್ಯಾರ್ಥಿಗಳಿಗೆ ಫೆಲೋಷಿಪ್ ಹಣವನ್ನು ತಕ್ಷಣ ಪಾವತಿ ಮಾಡಬೇಕು. ಎಲ್ಲ ವಿದ್ಯಾರ್ಥಿಗಳಿಗೆ ವಸತಿ ನಿಲಯ ಕಟ್ಟಡ ನಿರ್ಮಿಸಬೇಕು. ತಹಶೀಲ್ದಾರ್ ಅಧ್ಯಕ್ಷತೆಯಲ್ಲಿ ಪ್ರತಿ ತಿಂಗಳು ವಿದ್ಯಾರ್ಥಿಗಳೊಂದಿಗೆ ಸಮಾಲೋಚನಾ ಸಭೆ ನಡೆಸಬೇಕು ಎಂದು ಆಗ್ರಹಿಸಿದರು. ಸಂಘಟನೆಗಳ ಮುಖಂಡರಾದ ಬಿ.ಚಾಜ್ಯಾನಾಯ್ಕ, ಪುಷ್ಪಾ, ಪರಶುರಾಂ, ಚಾರೇಶ್, ಕಾರ್ತಿಕ್, ಸಂತೋಷ್, ಬೋಜ್ಯಾನಾಯ್ಕ 1750ರಿಂದ ಉಪಸ್ಥಿತರಿದ್ದರು.

# ಅವೈಜ್ಞಾನಿಕ ದುಬಾರಿ ದಂಡ, ಕೇಂದ್ರ ಮೇಟಾರ್ ವಾಹನ ಮಸೂದೆ 2019 ತಿದ್ದುಪಡಿ ವಾಪಾಸಾತಿಗಾಗಿ ಆಟೋ ಚಾಲಕರ ಒತ್ತಾಯ



ಆಟೋ ಚಾಲಕರು ಕಳೆದ 69 ವರ್ಷದಿಂದ ಸಾರ್ವಜನಿಕ ಸೇವೆಯಲ್ಲಿ ಸಾರಿಗೆ ವ್ಯವಸ್ಥೆಯಲ್ಲಿ ಎರಡನೇ ಸ್ಥಾನದಲ್ಲಿ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಆದರೆ ಇವರಿಗೆ ಸರ್ಕಾರದಿಂದ ಯಾವುದೇ ರೀತಿಯಾದಂತಹ ಸೌಲಭ್ಯಗಳನ್ನು ನೀಡಿದೆ. ವಂಚಿಸುತ್ತಾ ಬರುತ್ತಿದ್ದಾರೆ. ಆದರೆ ಇವರಿಂದ ಸರ್ಕಾರಗಳು ತೆರಿಗೆ ರೂಪದಲ್ಲಿ ಕೋಟ್ಯಾಂತರ ರೂಗಳ ತೆರಿಗೆಯನ್ನು ಸಗ್ರಹಿಸುತ್ತಿದ್ದಾರೆ. ಆಟೋ ಚಾಲಕರಿಗೆ ವಾಸಿಸಲು ಮನೆ, ಉತ್ತಮ ವೈದಕೀಯ ಸೌಲಭ್ಯ ವೃದ್ದಾಪ್ಯ ಸಮಯದಲ್ಲಿ ಪಿಂಚಿಣಿ ಸೌಲಭ್ಯ, ಮಕ್ಕಳ ವಿದ್ಯಾಭ್ಯಾಸಕ್ಕೆ ವಿದ್ಯಾರ್ಥಿ ವೇತನಗಳನ್ನು ನೀಡಿದೆ. ಯೋಜನೆಗಳನ್ನು ರೂಪಿಸದೇ ಆಟೋ ಚಾಲಕನ್ನು ವಂಚಿಸುತ್ತಾ ಬಂದಿದೆ. ಈಗಲಾದರು ಸಹ ಸರ್ಕಾರವು ಆಟೋ ಚಾಲಕರ ಬೇಡಿಕೆಗಳ ಬಗ್ಗೆ ಯೋಜನೆ ರೂಪಿಸಲು ಸಂಘವು ಮನವಿ ಮಾಡುತ್ತದೆ.

**1. ಅವೈಜ್ಞಾನಿಕ ದುಬಾರಿ ದಂಡ ಹಾಗೂ ಕೇಂದ್ರ ಮೋಟಾರ್ ವಾಹನ ಕಾಯ್ದೆ – 2019 ವಾಪಸಾತಿಗಾಗಿ:**

ಈಗಾಗಲೇ ಬೆಂಗಳೂರು ನಗರದಲ್ಲಿ 82 ಲಕ್ಷ ವಾಹನಗಳು ನೊಂದಾಣೆಯಾಗಿದ್ದು, ಈ ವಾಹನಗಳು ಸಂಚಾರ ಮಾಡಲು ರಸ್ತೆಗಳು ವಿಸ್ತಾರವಾಗಿಲ್ಲ. ಪಾರ್ಕಿಂಗ್ ವ್ಯವಸ್ಥೆ ಇಲ್ಲ. ಅವೈಜ್ಞಾನಿಕವಾಗಿ ಸಂಚಾರ ವ್ಯವಸ್ಥೆ ಮಾಡಲಾಗಿದೆ. ಸಂಚಾರ ದಟ್ಟಣೆಯಿಂದ, ವಿವಿಧ ಕಾಮಗಾರಿಗಳಿಂದಾಗಿ ವಾಹನಗಳ ವೇಗದ ಗತಿ ಗಂಟೆಗೆ 15 ರಿಂದ 20 ಕಿ.ಮೀ. ವೇಗದ ಗತಿ ಕುಸಿದಿದೆ. ಇದರಿಂದ ಚಾಲಕರು ಹೈರಾಣಾಗಿದ್ದಾರೆ. ಕೂಡಲೇ ವಾಹನಗಳ ನೊಂದಾಣೆಯನ್ನು ನಿಲ್ಲಿಸಬೇಕು. ಪೋಲೀಸ್ ಅಕ್ರಮ ಮತ್ತು ಲಂಚಕೋರ ನೀತಿಯಿಂದಾಗಿ ವಾಹನಗಳನ್ನು ಮುಖ್ಯರಸ್ತೆಗಳಲ್ಲಿ ಎರಡು ಬದಿ ಪಾರ್ಕಿಂಗ್ ಮಾಡುತ್ತಿದ್ದಾರೆ. ಇದಲ್ಲದೆ ಕೆಲವು ಮಾಲ್‌ಗಳು, ಹೋಟೇಲ್‌ಗಳ ಬಳಿ ವ್ಯಾಪಾರಗಾರರಿಗೆ ಅನುಕೂಲ ಮಾಡಿಕೊಡಲು ಅಕ್ರಮವಾಗಿ ವ್ಯವಸ್ಥೆ ಮಾಡಿಕೊಟ್ಟಿದ್ದಾರೆ.

ಇದಲ್ಲದೆ ಪ್ರಮಾಣಿಕವಾಗಿ ನಡೆಸುವ ಚಾಲಕರಿಗೆ ಕೇಸು ದಾಖಲಿಸುತ್ತಾರೆ. ಈ ಪರಿಸ್ಥಿತಿ ಇರುವಾಗ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಈ ಬಡ ವಾಹನ ಚಾಲಕರ ಮೇಲೆ, ಅಮಾನವೀಯ ದಂಡ ಹೆಚ್ಚಳ ಮಾಡಿ ಆದೇಶಿಸಿದರೆ, ಈಗಾಗಲೇ ಸಂಪಾದನೆ ಇಲ್ಲದ ಚಾಲಕರು, ಕೇಂದ್ರ ಸರ್ಕಾರಕ್ಕೆ ಮತ ಹಾಕಿ ತಪ್ಪು ಮಾಡಿದ್ದೇವೆ ಎಂಬ ಭಾವನೆ ವಾಹನ ಚಾಲಕರಲ್ಲಿ ಬಂದಿದೆ. ಹಾಗಾಗಿ ಕೂಡಲೇ ಖಬಗಿ ಕಾಯ್ದೆ ವಾಪಸ್ಸಾಗಬೇಕೆಂದು ಸಂಘವು ಒತ್ತಾಯಿಸುತ್ತದೆ. ಹಾಗೂ ಜಾರಿ ಮಾಡಿರುವ ಉದ್ದೇಶ ಆಟೋ ಇಂಡಸ್ಟ್ರಿಯಲ್ ಮಾಲೀಕರ ಲಾಭಿಗೆ ಮಣಿದು ಅವರಿಗೆ. ಲಾಭ ಮಾಡಿಕೊಡುವದುರುದ್ದೇಶಸರ್ಕಾರದಿಂದಾಗಿದೆ.

ಇದರಿಂದ ಆಟೋ ಚಾಲಕರ ಆದಾಯವನ್ನು ಕಿತ್ತುಕೊಳ್ಳುವ ನೀತಿಯಾಗಿದ್ದು ಸಣ್ಣ ತಪ್ಪಿಗೂ ಸಹ. ಹತ್ತುಪಟ್ಟು ದಂಡ ಹೆಚ್ಚಳ ಮಾಡಿರುವುದು ಖಂಡನೀಯವಾಗಿದೆ. ಈ ಅವೈಜ್ಞಾನಿಕ ದುಬಾರಿ ದಂಡ ಹಾಗೂ ಕೇಂದ್ರ ಮೋಟಾರ್ ವಾಹನ ಕಾಯ್ದೆ 2019 ಅನ್ನು ವಾಪಾಸಾತಿ ಮಾಡಬೇಕೆಂದು ಸಂಘವು ಒತ್ತಾಯಿಸುತ್ತದೆ.

**2. 15 ವರ್ಷದ ಹಳೇಯ ಆಟೋಗಳನ್ನು ರದ್ದು ಪಡಿಸುತ್ತಿದ್ದು ಆ ಹಳೇಯ ಆಟೋಗಳಿಗೆ ಕಂಪನಿಗಳಿಗೆ, ಕಂಪನಿಗಳಿಂದ ದರ ನಿಗಧಿ ಪಡಿಸಬೇಕು. ಸರ್ಕಾರ ಪ್ರೋತ್ಸಾಹ ಧನ 50,000 ರೂಗಳನ್ನು ನೀಡಬೇಕು. ಹಾಗೂ ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ ಸಾಲ ಸೌಲಭ್ಯ ನೀಡಬೇಕು:**

ಈಗಾಗಲೇ ಸರ್ಕಾರವು 15 ವರ್ಷಗಳ ವಾಹನಗಳಿಗೆ ಯೋಗ್ಯತಾ ಪ್ರಮಾಣವನ್ನು ನೀಡುವುದನ್ನು ನಿಲ್ಲಿಸಿದೆ. ಇದನ್ನೇ ನಂಬಿಕೊಂಡಿರುವ ಆಟೋ ಚಾಲಕರ ಜೀವನವನ್ನು ಬೀದಿಪಾಲು ಮಾಡಲು ಹೊರಟಿದೆ. 15 ವರ್ಷಗಳ ಆಟೋಗಳನ್ನು ನಿಷೇಧಿಸಲು ಹೊರಟಿರುವ ಸರ್ಕಾರ ಪ್ರತಿವರ್ಷ ಯಾಕೆ ಯೋಗತ್ಯಾ ಪ್ರಮಾಣವನ್ನು ನವೀಕರಿಸಲು ಆದೇಶಿಸಿದೆ. ಇದನ್ನು ತೆಗೆಯಬೇಕು. 15 ವರ್ಷಗಳ ಆಟೋಗಳನ್ನು ನಿಷೇಧಿಸುವುದಾದರೆ ಹಳೆಯ ಆಟೋಗಳಿಗೆ ನಿಗಧಿತ ಬೆಲೆಯನ್ನು ನೀಡಬೇಕು ಮತ್ತು ರಾಷ್ಟ್ರೀಕೃತ ಬ್ಯಾಂಕ್‌ಗಳು / ನಿಗಮಗಳಿಂದ ಸಾಲ ಸೌಲಭ್ಯದ ನೆರವನ್ನು ನೀಡಬೇಕೆಂದು ಸಂಘವು ಒತ್ತಾಯಿಸುತ್ತದೆ.

**3. ಆಟೋ ಚಾಲಕರಿಗೆ ಮನೆ / ಕಾಲೋನಿ ನಿರ್ಮಿಸಿಕೊಡಲು:**

ಇಡೀ ರಾಜ್ಯದಲ್ಲಿ ಮನೆ ಬಾಡಿಗೆಗಳು ನಿಯಂತ್ರಣವಿಲ್ಲದೆ ದುಬಾರಿಯಾಗಿದೆ. ಇದನ್ನು ಕಟ್ಟಲು ಸಾಧ್ಯವಾಗದೆ ಚಾಲಕರುಗಳು ನಾನಾ ರೀತಿಯ ಕಷ್ಟಗಳನ್ನು ಅನುಭವಿಸುತ್ತಿದ್ದಾರೆ. ಇತ್ತೀಚೆಗೆ ದುಬಾರಿ ಖಿಖಿಙ ಶುಲ್ಕಗಳು, ದುಬಾರಿ ವಾಹನ ವಿಮಾ ಪಾಲಿಸಿ ಹೆಚ್ಚಳ ಹಾಗು ದುಬಾರಿ ದಂಡಗಳನ್ನು ಭರಿಸಲಾಗದೆ ಚಾಲಕರು ಕಂಗಲಾಗಿದ್ದಾರೆ.

ಈ ಹಿಂದೆ ಎ.ಟಿ. ರಾಮಸ್ವಾಮಿ ಆಯೋಗವು ಒತ್ತುವರಿಯಾದ 41 ಸಾವಿರ ಎಕರೆ ಭೂಮಿಯನ್ನು ವಶಪಡಿಸಿಕೊಂಡಂತಹ ಜಾಗದಲ್ಲಿ ಆಗಿನ ಮುಖ್ಯಮಂತ್ರಿಗಳು ಆಟೋ ಚಾಲಕರಿಗೆ ಆಟೋ ಕಾಲೋನಿಗಳನ್ನು ನಿರ್ಮಿಸಿಕೊಡುತ್ತೇವೆ ಎಂದು ಹೇಳಿದರು. ಹಾಗಾಗಿ ಬಡ ಆಟೋ ಚಾಲಕರಿಗೆ ಮನೆ ಇಲ್ಲದವರಿಗೆ ಮನೆಗಳನ್ನು ಕಟ್ಟಿಸಿಕೊಡಬೇಕೆಂದು ಮನವಿ ಮಾಡುತ್ತೇವೆ.

**4. ಆಟೋರಿಕ್ಷಾ ಚಾಲನ ಪತ್ರ ನೀಡುವಾಗ ವಿದ್ಯಾಹರ್ತೆ ಕಡ್ಡಾಯ ವಾಪಾಸಾತಿಗಾಗಿ:**

ಆಟೋರಿಕ್ಷಾ ಚಾಲಕರು ಸುಮಾರು ಜನ ಅವಿದ್ಯಾವಂತರಾಗಿದ್ದು ಇವರಿಗೆ ಚಾಲನ ಪತ್ರ ಪಡೆಯಲು ಸಾಧ್ಯವಾಗದೆ ತೀವ್ರ ತೊಂದರೆಯನ್ನು ಅನುಭವಿಸುತ್ತಿದ್ದಾರೆ. ಆಟೋ ಚಾಲನ ಪತ್ರ ಪಡೆಯಲು ವಿದ್ಯಾಹರ್ತೆ ಕಡ್ಡಾಯ ಎನ್ನುವುದು ಸರಿಯಾದ ಕ್ರಮವಲ್ಲ ಇದನ್ನೇ ನಂಬಿಕೊಂಡಿರುವ ಚಾಲಕರ ಸಾವಿರಾರು ಕುಟುಂಬಗಳು ಬೀದಿಪಾಲಾಗುವುದನ್ನು ತಪ್ಪಿಸಲು ತಾವುಗಳು ವಿದ್ಯಾರ್ಹತೆ ಕಡ್ಡಾಯ ಎನ್ನುವುದು ಸರಿಯಾದ ಕ್ರಮವಲ್ಲ ಇದನ್ನೇ ನಂಬಿಕೊಂಡಿರುವ ಚಾಲಕರ ಸಾವಿರಾರು ಕುಟುಂಬಗಳು ಬೀದಿಪಾಲಾಗುವುದನ್ನು ತಪ್ಪಿಸಲು ತಾವುಗಳು ವಿದ್ಯಾರ್ಹತೆ ಕಡ್ಡಾಯವನ್ನು ವಾಪಾಸಾತಿ ಮಾಡಲು ಮುಂದಾಗಬೇಕೆಂದು ವಿನಂತಿಸುತ್ತೇವೆ.

**5. ವಾಹನಗಳ ವಿಮಾ ಪ್ರಿಮೀಯಂ ದರ ಹೆಚ್ಚಳವನ್ನು ನಿಯಂತ್ರಿಸಲು ಹಾಗು ಕಡಿಮೆ ಮಾಡಲು:**

ಪ್ರತಿ ವರ್ಷ ಆಟೋಗಳ ವಿಮಾ ಪ್ರಿಮಿಯಂ ದರಗಳನ್ನು ಶೇ.100 ರಿಂದ 200 ರ ವರೆಗು ಏರಿಕೆ ಮಾಡುತ ಬರುತ್ತಿದೆ. ಅದಕ್ಕೆ ನೀಡುವ ಕಾರಣ ಕ್ಲೈಂಗಳು ಜಾಸ್ತಿಯಾಗಿದೆ ಎಂದು ಹೇಳುತ್ತಿದ್ದಾರೆ. ಆದರೆ ಆಟೋಗಳಿಂದ ಕ್ಲೈಂಗಳು ಇಲ್ಲವೇ ಇಲ್ಲ. ಆದ್ದರಿಂದ ಆಟೋಗಳ ಪ್ರೀಮಿಯಂಗಳನ್ನು ಪ್ರತ್ಯೇಕವಾಗಿ ಮಾಡಬೇಕು ಹಾಗು ಆಟೋ ಪ್ರಿಮಿಯಂ ದರಗಳನ್ನು ಕಡಿಮೆ ಮಾಡಲು ಸಂಘವು ಒತ್ತಾಯಿಸುತ್ತದೆ.



**6. ಅಸಂಘಟಿತ ಕಾರ್ಮಿಕರಾದ ಆಟೋ ಚಾಲಕರಿಗೆ ಪಶ್ಚಿಮ ಬಂಗಾಳ ಮಾದರಿಯಲ್ಲಿ ಭವಿಷ್ಯ ನಿಧಿ ಜಾರಿ ಹಾಗೂ ಪಿಂಚಣಿ ಯೋಜನೆ ಜಾರಿಗೊಳಿಸಲು:**

ಅಸಂಘಟಿತ ಕಾರ್ಮಿಕರಾದ ಆಟೋ ಚಾಲಕರು 69 ವರ್ಷಗಳಿಂದ ಸಾರ್ವಜನಿಕ ಸೇವೆಯನ್ನು ಸಾರಿಗೆ ವ್ಯವಸ್ಥೆಯಲ್ಲಿ ಎರಡನೇ ಸ್ಥಾನದಲ್ಲಿ ಸಲ್ಲಿಸುತ್ತಿದ್ದಾರೆ. ಆದರೆ ಇವರಿಗೆ ಸರ್ಕಾರದಿಂದ ಯಾವುದೇ ಸೌಲಭ್ಯವು ಸಿಗದೆ ವಂಚಿತರಾಗುತ್ತಿದ್ದಾರೆ. ಇವರ ವೃದ್ಧಾಪ್ಯಯ ಕಾಲದಲ್ಲಿ ತ್ರೀವ್ರತರವಾದ ಕಷ್ಟಗಳಿಗೆ ಗುರಿಯಾಗುತ್ತಿದ್ದಾರೆ. ಇವರಿಂದ ಸರ್ಕಾರವು ಸಾವಿರಾರು ಕೋಟಿ ತೆರಿಗೆ ರೂಪದದಲ್ಲಿ ಹಣ ಸಂಗ್ರಹಿಸುತ್ತಿದ್ದರೂ ಸಹ ಸರ್ಕಾರ ಯಾವುದೇ ಸೌಲಭ್ಯವನ್ನು ನೀಡುತ್ತಿಲ್ಲ. ಪಶ್ಚಿಮ ಬಂಗಾಳ ಹಾಗು ಕೇರಳದಲ್ಲಿ ಸಾರಿಗೆ ಕಾರ್ಮಿಕರಿಗೆ ಭವಿಷ್ಯ ನಿಧಿ ಹಾಗೂ ಪಿಂಚಣಿ ಯೋಜನೆಯನ್ನು ಜಾರಿ ಮಾಡಿದ್ದು ಅದೇ ರೀತಿ ನಮ್ಮ ರಾಜ್ಯದಲ್ಲಿಯು ಜಾರಿ ಮಾಡಲು ಮನವಿ. ಈಗಾಗಹಲೇ ನಮ್ಮ ರಾಜ್ಯದಿಂದ ಕಾರ್ಮಿಕ ಇಲಾಖೆಯವತಿಯಿಂದ ಒಂದು ನಿಯೋಗವು ಪಶ್ಚಿಮ ಬಂಗಾಳಕ್ಕೆ ಹೋಗಿ ವರದಿಯನ್ನು ತಯಾರಿಸಿ ರಾಜ್ಯ ಸರ್ಕಾರಕ್ಕೆ ಶಿಫಾರಸ್ಸನ್ನು ಮಾಡಿತ್ತು. ಆದರೆ ಕಳೆದ ಬಡ್ಜೆಟ್‌ನಲ್ಲಿ ಸಲ್ಲಿಸಿದ್ದರೂ ಸಹ ಇಲ್ಲಿಯವರೆಗೂ ಜಾರಿ ಮಾಡಿಲ್ಲ. ಅದನ್ನು ಜಾರಿ ಮಾಡಿಸಲು ತಾವುಗಳು ಮುಖ್ಯ ಪಾತ್ರವನ್ನು ವಹಿಸಬೇಕು.

**7. ಅಸಂಘಟಿತ ಕಾರ್ಮಿಕರ ಕಲ್ಯಾಣ ಭದ್ರತಾ ಮಂಡಳಿ ರಚನೆ ಹಾಗು ಕಲ್ಯಾಣ ಯೋಜನೆಗಳನ್ನು ಜಾರಿಗೊಳಿಸಿ:**


ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯು 2009 ರಲ್ಲಿ ರಾಜ್ಯದಲ್ಲಿ ರಚನೆಯಾಗಿದೆ. ಆದರೆ ಇದಕ್ಕೆ ಕಳೆದ 2 ಬಾರಿ ಬಡ್ಜೆಟ್‌ಗಳಲ್ಲಿ 20 ಕೋಟಿಯಂತೆ ಒಟ್ಟು 40 ಕೋಟಿಯನ್ನು ನೀಡಲಾಗಿದೆ. ಆದರೆ ಇಲ್ಲಿಯವರೆಗು ಖಾಸಗಿ ವಾಣಿಜ್ಯ ವಾಹನ ಚಾಲಕರಿಗೆ ಅಪಘಾತ ವಿಮಾ ಪಾಲಿಸಿಗಳನ್ನು ಜಾರಿ ಮಾಡಲಾಗಿದೆ ಹೊರತು ಇನ್ನು ಯಾವುದೇ ರೀತಿಯ ಕಲ್ಯಾಣ ಯೋಜನೆಗಳನ್ನು ಜಾರಿ ಮಾಡಲು ಮುಂದಾಗಿಲ್ಲ. ಆದರೆ ಈ ಮಂಡಳಿಯಲ್ಲಿ ಸ್ಮಾರ್ಟ್ ಕಾರ್ಡ್ ನೀಡುತ್ತೇವೆಂದು ಹೇಳುತ್ತಿದ್ದರು ಸಹ ಇಲ್ಲಿಯವರೆಗು ಜಾರಿ ಮಾಡಿರುವುದಿಲ್ಲ. ಕೂಡಲೇ ತಾವು ಜಾರಿ ಮಾಡಿಸಬೇಕಾಗಿ ಮನವಿ ಹಾಗು ತಾವು ಬಡ್ಜೆಟ್‌ನಲ್ಲಿ ಹೆಚ್ಚು ಹಣವನ್ನು ನೀಡಿ ಆಟೋ ಚಾಲಕರಿಗೆ ಕಲ್ಯಾಣ ಯೋಜನೆಗಳನ್ನು ಕಟ್ಟಡ ಕಾರ್ಮಿಕರಿಗೆ ನೀಡುತ್ತಿರುವಂತಹ ಸೌಲಭ್ಯಗಳ ಮಾದರಿಯಲ್ಲಿ ಜಾರಿ ಮಾಡಲು ತಾವುಗಳು ಮುಂದಾಗಬೇಕೆಂದು ವಿನಂತಿ.

**8. ಆಟೋ ಚಾಲಕರ ಕುಟುಂಬಕ್ಕೆ ಇ.ಎಸ್.ಐ. ಸೌಲಭ್ಯ ಜಾರಿಗಾಗಿ:**

ಆಟೋ ಚಾಲಕರು ದೊಡ್ಡ ಮಟ್ಟದಲ್ಲಿ 69 ವರ್ಷಗಳಿಂದ ಸೇವೆಯನ್ನು ಸಾರಿಗೆ ವ್ಯವಸ್ಥೆಯಲ್ಲಿ ಸಲ್ಲಿಸುತ್ತಿದ್ದಾರೆ. ಇವರು ದಿನ ನಿತ್ಯವು ರಸ್ತೆಯಲ್ಲಿ ಓಡಾಡುತ್ತಿದ್ದು ಪರಿಸರ ಮಾಲಿನ್ಯದಿಂದ ಧೂಳನ್ನು ಕುಡಿಯುತ್ತಿದ್ದಾರೆ. ಇದರಿಂದ ನಾನಾ ರೀತಿಯ ಕಾಯಿಲೆಯಿಂದ ಬಳಲುತ್ತಿದ್ದಾರೆ. ಸರಿಯಾದ ಸಮಯಕ್ಕೆ ಚಿಕಿತ್ಸೆಗಳು ದೊರೆಯದೆ ಅಕಾಲಿಕ ಮರಣಕ್ಕೆ ತುತ್ತಾಗುತ್ತಿದ್ದಾರೆ. ಕೇಂದ್ರ ಸರ್ಕಾರವು ಆಟೋ ಚಾಲಕರಿಗೆ ಇಎಸ್‌ಐ ಸೌಲಭ್ಯವನ್ನು ನೀಡಲು ತೀರ್ಮಾನಿಸಿದ್ದು ಅದನ್ನು ಜಾರಿ ಮಾಡಲು ಸರ್ಕಾರವು ಗಮನ ಹರಿಸಬೇಕೆಂದು ವಿನಂತಿ.

**–ಸಿ.ಎನ್. ಶ್ರೀನಿವಾಸ್**

# "ನಯಾಭಾರತ್' ಮತ್ತು "ಸಂಪತ್ತಿನ ಸೃಷ್ಟಿಕರ್ತರಿಗೆ ಗೌರವ"



ವ್ಯಂಗ್ಯಚಿತ್ರ: ಸುರೇಂದ್ರನ್

ಈ ಬಾರಿಯ ಕೆಂಪುಕೋಟೆಯ ಭಾಷಣದಲ್ಲಿ ಪ್ರಧಾನ ಮಂತ್ರಿಗಳ ಭಾಷಣದ ಗಮನಾರ್ಹ ವಿಷಯಗಳೆಂದರೆ ಜನಸಂಖ್ಯೆಯ ಹತೋಟಿ, ಪ್ಲಾಸ್ಟಿಕ್ ಬಳಕೆಯನ್ನು ನಿಲ್ಲಿಸುವುದು ಮತ್ತು 'ಸಂಪತ್ತಿನ ಸೃಷ್ಟಿಕರ್ತ'ರನ್ನು ಗೌರವಿಸುವುದು ಎಂಬುದೀಗ ಜನಜನಿತವಾಗುತ್ತಿದೆ.

'ಸಂಪತ್ತಿನ ಸೃಷ್ಟಿಕರ್ತರು' ಎನ್ನುವಾಗ ಮಾನ್ಯ ಪ್ರಧಾನಿಗಳು ಯಾರ ಬಗ್ಗೆ ಹೇಳುತ್ತಿರಬಹುದು ಎಂಬ ಜಿಜ್ಞಾಸೆ ಹಲವರಲ್ಲಿ ಉಂಟಾಗಿತ್ತು. ಕಾರ್ಮಿಕ ಕಾನೂನುಗಳನ್ನೆಲ್ಲ 'ಕಾರ್ಮಿಕ ಸಂಹಿತೆ'ಗಳ ಹೆಸರಲ್ಲಿ ಕೈಬಿಡುತ್ತಿರುವಾಗ ಈ ಜಿಜ್ಞಾಸೆ ಪ್ರಶ್ನಾರ್ಹವಾಗಿದೆ ನಿಜ. ಆದರೆ ಈಗ ಈ ವಾರ ಹಣಕಾಸು ಇಲಾಖೆಯಿಂದ ಹೊಮ್ಮಿ ಬಂದಿರುವ ಪ್ರಕಟಣೆಗಳು ಆ ಜಿಜ್ಞಾಸೆಗೂ ಪೂರ್ಣವಿರಾಮ ಹಾಕಿವೆ. 'ನಯಾಭಾರತ್'ನ ಹಣಕಾಸು ಮಂತ್ರಿಗಳು ಈ ಅರ್ಥದಲ್ಲಿ ಪ್ರಧಾನಿಗಳ ಈ ವಿಚಾರವನ್ನು ಶಿರಸಾವಹಿಸಿದಂತೆ ಕಾಣುತ್ತದೆ.

ಮೊದಲನೆಯದಾಗಿ, ತಮ್ಮದೇ ಹಿಂದಿನ ಬಜೆಟಿನಲ್ಲಿನ ಕೆಲವು ತೆರಿಗೆ ಪ್ರಸ್ತಾವಗಳನ್ನು ಹಿಂತೆಗೆದುಕೊಳ್ಳುವ ಪ್ರಕಟಣೆ. ಕೆಲವು ವಿಶ್ಲೇಷಕರು ಇದೊಂದು ಪರಿಷ್ಕರಿಸಿದ ಬಜೆಟ್ ಎಂದೂ ಟಿಪ್ಪಣಿ ಮಾಡಿದ್ದಾರೆ. ಕೋಟ್ಯಾಧಿಪತಿಗಳ ನೇರ ತೆರಿಗೆ ಮೇಲೆ ಹಾಕಿದ್ದ ಸರ್‌ಚಾರ್ಜನ್ನು 'ಏಂಜೆಲ್ ಟ್ಯಾಕ್ಸ್' ಮುಂತಾದವನ್ನು ಹಿಂತೆಗೆದುಕೊಳ್ಳುವುದು, ಬ್ಯಾಂಕುಗಳಿಂದ ಸಾಲನೀಡಿಕೆಗಳನ್ನು ಉದಾರಗೊಳಿಸುವುದು, ಅಗ್ಗಗೊಳಿಸುವುದು ಇತ್ಯಾದಿ ವ್ಯಾಪಾರೀ ವಿಭಾಗಕ್ಕೆ ಮುದ ಕೊಡುವ ರಿಯಾಯ್ತಿಗಳು (ಈ ಸಂಚಿಕೆಯಲ್ಲಿ ಪ್ರಕಟವಾಗಿರುವ ಪ್ರಕಾಶ ಕಾರಟ್ ಅವರ ಲೇಖನವನ್ನು ನೋಡಿ). ಅವರ ಹಿಂದಿನ ಬಜೆಟ್ ಲೆಕ್ಕಾಚಾರಗಳ ಬಗ್ಗೆಯೇ ಹಲವಾರು ಪ್ರಶ್ನೆಗಳು ಎದ್ದಿದ್ದವು. ಈಗ ಈ ರಿಯಾಯ್ತಿಗಳಿಂದ ಗಮನಾರ್ಹ ಪ್ರಮಾಣದಲ್ಲಿ ಆದಾಯ ಕಳೆದುಕೊಂಡ ಮೇಲೆ ಅವರ ಹಿಂದಿನ ಬಜೆಟಿನ ಲೆಕ್ಕಾಚಾರಗಳ, ಮುಖ್ಯವಾಗಿ ವೆಚ್ಚಗಳ ಯೋಜನೆಗಳ ಗತಿಯೇನು ಎಂದು ಪ್ರಶ್ನೆಗಳು ಎದ್ದಿವೆ. ಈ ರಿಯಾಯ್ತಿಗಳು ಸಂಪತ್ತು ಸೃಷ್ಟಿಸಲಾರದು, ಅದರಿಂದಾಗಿ ಉದ್ಯೋಗಗಳನ್ನೂ ಸೃಷ್ಟಿಸಲಾರದು ಎಂಬುದರ ಪರಿವೆಯೇ ಇಲ್ಲದೆ ತಮ್ಮ ಪರಿಕಲ್ಪನೆಯ 'ಸಂಪತ್ತು ಸೃಷ್ಟಿಕರ್ತ'ರಿಗೆ ಮತ್ತಷ್ಟು ರಿಯಾಯ್ತಿಗಳ ಆಶ್ವಾಸನೆ ನೀಡಿದರು.

ಇದರ ಬೆನ್ನ ಹಿಂದೆಯೇ ಬಂತು ರಿಝರ್ವ್ ಬ್ಯಾಂಕಿನ ಮೀಸಲು ನಿಧಿಗಳಿಂದ ಮತ್ತು ಮಿಗುತಾಯ ನಿಧಿಗಳಿಂದ ಸರಕಾರಕ್ಕೆ 1.76ಲಕ್ಷ ಕೋಟಿ ರೂ.ಗಳ ಬೃಹತ್ ಪ್ರಮಾಣದ ಅಭೂತಪೂರ್ವ ವರ್ಗಾವಣೆ. 2013–14ರಿಂದ ರಿಝರ್ವ್ ಬ್ಯಾಂಕಿನ ಮೀಸಲು ನಿಧಿಗಳಿಗೆ ವರ್ಗಾವಣೆ ಸೊನ್ನೆಗೆ ಇಳಿದಿದೆ, ಇನ್ನೊಂದೆಡೆಯಲ್ಲಿ ಸರಕಾರಕ್ಕೆ ವರ್ಗಾವಣೆಗಳು ಏರುತ್ತಲೇ ಬಂದಿವೆ. ಇದು ಜಾಗತಿಕ 'ಉದಾರ' ವ್ಯವಸ್ಥೆಯಲ್ಲಿ ನಮ್ಮ ದೇಶದ ಈ ಕೇಂದ್ರೀಯ ಬ್ಯಾಂಕಿನ ಸ್ಥಿರತೆಗೆ, ಆ ಮೂಲಕ ನಮ್ಮ ಸಾರ್ವಭೌಮತೆಗೆ ಸಂಚಕಾರ ತರಬಹುದು ಎಂದು ಬ್ಯಾಂಕ್ ನೌಕರರ ಒಕ್ಕೂಟ(ಬಿಇಎಫ್‌ಐ) ಎಚ್ಚರಿಸಿದೆ. ಪ್ರಸಿದ್ಧ ಅರ್ಥಿಕ ತಜ್ಞೆ ಡಾ. ಜಯತಿ ಘೋಷ್ ಈ ಬಗ್ಗೆ ಹೇಳುತ್ತ, ಸರಕಾರ ಈ ಭಾರೀ ಮೊತ್ತವನ್ನು ಸಾರ್ವಜನಿಕ ಹೂಡಿಕೆಗಳಿಗೆ ಬಳಸಿಕೊಳ್ಳುವ ಮೂಲಕ ಈಗಿರುವ ಆರ್ಥಿಕ ಬಿಕ್ಕಟ್ಟನ್ನು ಒಂದು ಸಕಾರಾತ್ಮಕ ಬದಲಾವಣೆಗೆ ಅವಕಾಶವಾಗಿ ಬಳಸಿಕೊಳ್ಳಬಹುದು, ಆದರೆ ಅಂತಹ ಸಾಧ್ಯತೆಗಳೇನೂ ಕಾಣಿಸುತ್ತಿಲ್ಲ ಎಂದಿದ್ದಾರೆ.

ಇದಾದ ನಂತರ ಚಿಲ್ಲರೆ ವ್ಯಾಪಾರ ಮತ್ತು ಕಲ್ಲಿದ್ದಲು ಗಣಿಗಾರಿಕೆಯಲ್ಲಿ 100% ಎಫ್‌ಡಿಐ ಮತ್ತು ನಿಯಮಗಳನ್ನು 'ಉದಾರ'ಗೊಳಿಸುವ ಪ್ರಕಟಣೆ ಬಂದಿದೆ. ಈ ಹಿಂದೆ ಚಿಲ್ಲರೆ ವ್ಯಾಪಾರದಲ್ಲಿ ಎಫ್‌ಡಿಐನ್ನು ಕಟುವಾಗಿ ವಿರೋಧಿಸುತ್ತಿದ್ದರೂ ಅಧಿಕಾರಕ್ಕೆ ಬಂದ ಮೇಲೆ ಈ ಹಿಂದಿನ ಮೋದಿ ಸರಕಾರ ಅದನ್ನು ಜಾರಿಗೆ ತಂದಿತು. ಅದರೆ ಆಗ ತಾವು ಮಾರುವ ಉತ್ಪನ್ನಗಳಲ್ಲಿ ಕನಿಷ್ಟ 30% ವನ್ನು ಸ್ಥಳೀಯ ಉತ್ಪಾದಕರಿಂದಲೇ ಖರೀದಿಸಬೇಕು ಎಂದು ಶರತ್ತು ಹಾಕಿರುವುದರಿಂದ ಸ್ಥಳೀಯ ಉತ್ಪಾದಕರಿಗೆ ಇದರಿಂದ ಬಹಳ ಲಾಭವಾಗುತ್ತದೆ ಎಂದು ದೊಡ್ಡದಾಗಿ ಪ್ರಚಾರ ಮಾಡಿತು. ಈಗ ಈ ಶರತ್ತನ್ನು 'ಉದಾರ'ಗೊಳಿಸಲಾಗಿದೆ, ಐದು ವರ್ಷಗಳ ಅವಧಿಯಲ್ಲಿ ಒಟ್ಟಾಗಿ ಈ ಶರತ್ತನ್ನು ಪಾಲಿಸಿದರೆ ಸಾಕು ಎಂದಿದೆ. ಇದು ವಿದೇಶಿ ವ್ಯಾಪಾರಿ ಏಜೆಂಸಿಗಳಿಗೆ ಈ ಶರತ್ತನ್ನೇ ಹುಸಿಗೊಳಿಸಲು ಅವಕಾಶ ಮಾಡಿಕೊಡುತ್ತದೆ ಎಂದು ಸಿಐಟಿಯು ಈ ಕ್ರಮವನ್ನು ಖಂಡಿಸುತ್ತ ಹೇಳಿದೆ. ಹೇಗೆಂದರೆ, ಮೊದಲ 3–4 ವರ್ಷಗಳಲ್ಲಿ ಈ ಶರತ್ತಿನ ಪಾಲನೆಯ ಗೊಡವೆಗೇ ಹೋಗುವುದಿಲ್ಲ, ನಂತರ ತಮ್ಮ ಕಂಪನಿಯ ಬೋರ್ಡ್ ಬದಲಾಯಿಸಿಕೊಂಡರಾಯಿತು, ಇದು ಈಗಾಗಲೇ ಬೇರೆ ವಲಯಗಳಲ್ಲಿ , ವಿಶೇಷವಾಗಿ 'ವಿಶೇಷ ಆರ್ಥಿಕ ವಲಯ'ಗಳಲ್ಲಿ ಕಾಣುತ್ತಿರುವ ಕೈಚಳಕ ಎಂಬ ಸಂಗತಿಯತ್ತ ಅದು ಗಮನ ಸೆಳೆದಿದೆ. ಸರಕಾರಕ್ಕೆ ಇದು ತಿಳಿಯದ ವಿಷಯವೇನಲ್ಲ.

ಕಲ್ಲಿದ್ದಲು ಗಣಗಾರಿಕೆಯ 100% ಎಫ್‌ಡಿಐ ಯನ್ನು 'ಉದಾರ" ಗೊಳಿಸುವುದು ಇದೇ ಪ್ರಕಟಣೆಯ ಇನ್ನೊಂದು ಅಂಶ. ಈ ಹಿಂದೆ ಸ್ವಂತ ಬಳಕೆಯ ಗಣಿಗಾರಿಕೆಗೆ ಮಾತ್ರ ಎಫ್‌ಡಿಐಗೆ ಅವಕಾಶ ನೀಡಲಾಗಿತ್ತು. ಈಗ ಅದನ್ನೂ 'ಉದಾರ'ಗೊಳಿಸಿ ವಾಣಿಜ್ಯ ಉದ್ದೇಶಗಳಿಗೆ ಮಾಡುವ ಗಣಿಗಾರಿಕೆಯಲ್ಲೂ 100% ಎಫ್‌ಡಿಐಗೆ ಅವಕಾಶ ಕಲ್ಪಿಸಲಾಗಿದೆ. ಇದು ಒಂದೆಡೆಯಲ್ಲಿ ಸಾರ್ವಜನಿಕ ವಲಯದ ಕೋಲ್ ಇಂಡಿಯಾ ಲಿ.ಗೆ ಏಟು ಹಾಕಿದರೆ, ಇನ್ನೊಂದೆಡೆಯಲ್ಲಿ ವಿದೇಶಿ ಗಣಿ ಕಂಪನಿಗಳಿಗೆ ನಮ್ಮ ಖನಿಜ ಸಂಪತ್ತನ್ನು ಲೂಟಿ ಮಾಡಲು, ನಮ್ಮ ಆಂತರಿಕ ಅಗತ್ಯಗಳನ್ನು, ಆದ್ಯತೆಗಳನ್ನು ಗಮನಕ್ಕೆ ತಗೊಳ್ಳದೆ ನಮ್ಮ ಖನಿಜಗಳ ರಫ್ತಿಗೂ ಅವಕಾಶ ಕಲ್ಪಿಸಿಕೊಡುತ್ತದೆ ಎಂದು ಸಿಐಟಿಯು ಟೀಕಿಸಿದೆ.

ಇದಲ್ಲದೆ ಈ ಸರಕಾರ ಉಕ್ಕು, ಔಷಧಿ, ಇಂಜಿನಿಯರಿಂಗ್ ಮುಂತಾದ ಆಯಕಟ್ಟಿನ ವಲಯಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಖಾಸಗೀಕರಣದ ನಿರ್ಧಾರವನ್ನು ಈಗಾಗಲೇ ಮಾಡಿದೆ.

ಆದ್ದರಿಂದಲೇ **ಇವೆಲ್ಲವೂ ದೇಶೀ ಕೈಗಾರಿಕಾ ಸಾಮರ್ಥ್ಯವನ್ನು ಮತ್ತು ಆರ್ಥಿಕ ಸಾರ್ವಭೌಮತೆಯನ್ನು ಧ್ವಂಸ ಮಾಡುವ ಕ್ರಮಗಳು ಎಂದು ಬಲವಾಗಿ ಟೀಕಿಸುತ್ತ, ಸಿಐಟಿಯು, ದೇಶದ ದುಡಿಯುವ ಜನಗಳಿಗೆ ಮತ್ತು ದೇಶಪ್ರೇಮಿ ಜನವಿಭಾಗಗಳಿಗೆ ರಾಷ್ಟ್ರೀಯ ಆರ್ಥಿಕ ವಸ್ಥೆಯನ್ನು ಈ ರೀತಿ ಧ್ವಂಸ ಮಾಡುತ್ತಿರುವುದರ ವಿರುದ್ಧ ದನಿಯೆತ್ತಬೇಕು ಎಂದು ಕರೆ ನೀಡಿದೆ.**

ಎಪ್ರಿಲ್–ಜೂನ್ 2019ರಲ್ಲಿ ಜಿಡಿಪಿ ಬೆಳವಣಿಗೆ ದರ 5%ಕ್ಕೆ ಇನ್ನಷ್ಟು ಇಳಿದಿದೆ ಎಂದು ಸುದ್ದಿ ಬಂದಿದೆ. ದೇಶದಲ್ಲಿ ಆರ್ಥಿಕ ಪರಿಸ್ಥಿತಿ ಹದಗೆಡುತ್ತಿದ್ದರೂ, ಅದು ಚೆನ್ನಾಗಿಯೇ ಇದೆ ಎಂದು ಹೇಳುತ್ತಲೇ ಒಂದು ಹತಾಶ ಸರಕಾರ ಮಾತ್ರವೇ ಕೈಗೊಳ್ಳಬಹುದಾದ ಕ್ರಮಗಳನ್ನು ಕೈಗೊಳ್ಳುತ್ತಿರುವುದು ದೇಶಿ–ವಿದೇಶಿ ಖಾಸಗಿ ಕಾರ್ಪೊರೇಟ್‌ಗಳಿಗೆ ಮಾತ್ರ ಪ್ರಯೋಜನಕಾರಿ, ಇದೀಗ 'ಸಂಪತ್ತಿನ ಸೃಷ್ಟಿಕರ್ತ'ರನ್ನು ಗೌರವಿಸುವ 'ನಯಾಭಾರತ್' ಮಾದರಿ!

## ಬಿಜೆಪಿಯ ಹೊಸ ಸದಸ್ಯರ ಸಂಖ್ಯೆ 7 ಕೋಟಿ

ಎಂದು ಅದರ ರಾಷ್ಟ್ರೀಯ ಕಾರ್ಯಕಾರಿ ಅಧ್ಯಕ್ಷರು ಹೇಳಿರುವದಾಗಿ ವರದಿಯಾಗಿದೆ(ದಿ ಹಿಂದು, ಆಗಸ್ಟ್ 30). ಇದು 50% ಹೆಚ್ಚಳವಂತೆ. 2015ರಲ್ಲಿ ಮಾಡಿದ್ದ 11 ಕೋಟಿ ಸದಸ್ಯತ್ವ ಸಂಖ್ಯೆಗೆ 2.2 ಕೋಟಿ ಹೊಸ ಸದಸ್ಯರನ್ನು ಸೇರಿಸಬೇಕು ಎಂಬ ಗುರಿಯಿತ್ತಂತೆ. ಆ ಗುರಿ ದುಪ್ಪಟ್ಟನ್ನೂ ಮೀರಿದೆ, ಇದು ಜನಸಮೂಹಗಳಲ್ಲಿ ಬಿಜೆಪಿ ಬಗ್ಗೆ ಇರುವ "ಭಾರೀ ಹುಮ್ಮಸ್ಸನ್ನು" ತೋರಿಸುತ್ತದೆ ಎಂದು ಕಾರ್ಯಕಾರಿ ಅಧ್ಯಕ್ಷರು ಹೇಳಿದ್ದಾರೆ.

ಇವರಲ್ಲಿ ಬೇರೆ ಪಕ್ಷಗಳಿಂದ ಪಕ್ಷಾಂತರಗೊಂಡ/ ಮಾಡಿಸಿದ ಮುಖಂಡರ ಸಂಖ್ಯೆಯೆಷ್ಟು ಎಂದೇನೂ ಕೇಳುವಂತಿಲ್ಲವಲ್ಲ.

ಪಶ್ಚಿಮ ಬಂಗಾಲದಲ್ಲಿ ಸದಸ್ಯತ್ವ ನೋಂದಣಿ ಕಾರ್ಯಕ್ರಮಕ್ಕೆ ಭಾರೀ ಸ್ಪಂದನ ದೊರೆತಿದೆ, 80 ಲಕ್ಷ ಹೊಸ ಸದಸ್ಯರು ಸೇರಿದ್ದಾರೆ ಎಂದೂ ಕಾರ್ಯಕಾರಿ ಅಧ್ಯಕ್ಷರು ಹೇಳಿದ್ದಾರೆ.

ಜಮ್ಮು ಮತ್ತು ಕಾಶ್ಮೀರದಲ್ಲಿಯೂ ಬಹಳ ಹುಮ್ಮಸ್ಸು ವ್ಯಕ್ತವಾಯಿತಂತೆ, ಅದೂ ವಿಶೇಷವಾಗಿ ಯುವತಿಯರ ನಡುವೆ. ಆರು ಲಕ್ಷ ಹೊಸ ಸದಸ್ಯರು ಸೇರಿದ್ದಾರಂತೆ. ಶ್ರೀನಗರದ ಶೇರ್–ಎ–ಕಾಶ್ಮೀರ್ ಕನ್ವೆನ್ಶನ್ ಸೆಂಟರ್ ತುಂಬಿ ತುಳುಕುತ್ತಿತ್ತಂತೆ. ಇದು ಆಗಸ್ಟ್ 5ರ ಮೊದಲೋ ಅಥವ ನಂತರವೋ ಎಂದು ಹೇಳಿಲ್ಲ.

ಕಾಶ್ಮೀರ ಎಂದರೆ ಕೇಂದ್ರ ಸುದ್ದಿ ಮತ್ತು ಪ್ರಸಾರ ಮಂತ್ರಿಗಳು ಹೇಳಿದರೆನ್ನಲಾದ ನುಡಿಮುತ್ತನ್ನು ನೆನಪಿಸಿಕೊಳ್ಳದಿರಲು ಸಾಧ್ಯವಿಲ್ಲ.

**"ಜನಗಳಿಗೆ ಅತ್ಯಂತ ದೊಡ್ಡ ಶಿಕ್ಷೆ ಎಂದರೆ, ಅವರು ಯಾರನ್ನೂ ಸಂಪರ್ಕಿಸಲು ಸಾಧ್ಯವಾಗದೇ ಇರುವುದು, ಯಾರೊಂದಿಗೂ ಮಾತಾಡಲು ಸಾಧ್ಯವಾಗದಿರುವುದು, ಮತ್ತು ಸಂಪರ್ಕಿಸಲು ಯಾವುದೇ ಸಾಧನ ಇಲ್ಲದಿರುವುದು, ಇದು ಅತ್ಯಂತ ದೊಡ್ಡ ಶಿಕ್ಷೆ"** ಎಂದು ಅವರು ಸಮಾರಂಭವೊಂದರಲ್ಲಿ ಹೇಳಿರುವುದಾಗಿ ವರದಿಯಾಗಿತ್ತು. ಕಳೆದ ಸುಮಾರು ಒಂದು ತಿಂಗಳಿಂದ ಕಾಶ್ಮೀರ ಕಣಿವೆಯಲ್ಲಿನ ಸುದ್ದಿಗಳ ಬಗ್ಗೆ ನಿರೀಕ್ಷಿಸುತ್ತಿರುವವರಿಗೆ ಸಹಜವಾಗಿ ಇವರು ಅದರ ಬಗ್ಗೆಯೇ ಹೇಳಿದ್ದಾರೆಯೇ ಎಂದು ಅನಿಸಿದರೆ ತಪ್ಪೇನು? ಆದರೆ ಪತ್ರಿಕೆಗಳು ತಪ್ಪು ವರದಿ ಮಾಡಿವೆ ಎಂದು ಅವರು ಹೇಳಿದ್ದಾರೆ. ಅದೇನೇ ಇರಲಿ, ಈ ಮಾತುಗಳಂತೂ, ಅವರದ್ದೇ ಮಾತುಗಳಾಗಿದ್ದರೂ ಅಕ್ಷರಶಃ ಸತ್ಯ ಎಂದು ಕಾಶ್ಮೀರದ ಜನತೆ ಹೇಳುತ್ತಿದ್ದಾರೆ ಎಂದು ಅಲ್ಲಿಂದ ಹೊರ ಬರುತ್ತಿರುವ ಸುದ್ದಿಗಳು ಹೇಳುತ್ತಿರುವದಂತೂ ನಿಜ.



**"ನೀವು ನಿರಾಕರಿಸಲಾಗದ ಆಫರ್"** ಚಿತ್ರ: ಪೆನ್ಸಿಲಾಶನ್

**"ಅಭಿವೃದ್ಧಿ ಮೇಲಿನಲ್ಲಿ ಆದರೆ ಅದು ಕೆಳಗೂ ತೊಟ್ಟಿಕ್ಕಿ ಬಂದೇ ಬರುತ್ತದೆ ಎಂಬ ಆರ್ಥಿಕ ಸಿದ್ಧಾಂತವನ್ನು ಪಾಶ್ಚಿಮಾತ್ಯರು ರೂಪಿಸುವುದಕ್ಕಿಂತ ನೂರಾರು ವರ್ಷಗಳ ಮೊದಲೇ ಪ್ರಾಚೀನ ಭಾರತೀಯರು ಇದನ್ನು ಆಚರಣೆಗೆ ತಂದಿದ್ದರು ಎಂದು ನೀವು ಭಾವಿಸುತ್ತೀರಾ?"**

ಹಾಗೆ ತಂದಿದ್ದರು ಎಂದೇನೂ ಇದುವರೆಗೆ ನಮ್ಮ ಕೇಂದ್ರ ಮಾನವ ಸಂಪನ್ಮೂಲ ಮಂತ್ರಿಗಳು ಹೇಳಿಲ್ಲ. ಆದರೂ ಈ ಆರ್ಥಿಕ ತಜ್ಞರುಗಳಿಗೆ ಅವರ ಈ ಹಿಂದಿನ ಹೇಳಿಕೆಗಳು ಈ ದಿಕ್ಕಿನಲ್ಲಿ ಗಹನವಾಗಿ ಯೋಚಿಸುವಂತೆ ಮಾಡಿರಬಹುದು.




ಈ ಮಾನ್ಯ ಮಂತ್ರಿಗಳ ಇತ್ತೀಚಿನ ಹೇಳಿಕೆಯೆಂದರೆ ನಮ್ಮ ಪ್ರಾಚೀನ ಭಾರತೀಯ ಇಂಜಿನಿಯರುಗಳು ನಿರ್ಮಿಸಿದ ರಾಮಸೇತು ಈಗಲೂ ಜಗತ್ತನ್ನು ವಿಸ್ಮಿತಗೊಳಿಸುತ್ತಿದೆ. ಇದು ಅವರು ಖರಗ್‌ಪುರದಲ್ಲಿ ಐಐಟಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಹೇಳಿರುವ ಮಾತುಗಳು.

ಇದಕ್ಕೆ ಮೊದಲು ಅವರು ನ್ಯೂಟನ್ ಗುರುತ್ವಾಕರ್ಷಣೆಯ ಬಗ್ಗೆ ಹೇಳುವ ಎಷ್ಟೋ ಮೊದಲು ಭಾರತೀಯ ಶಾಸ್ತ್ರಗಳು ಇದನ್ನು ಪ್ರಸ್ತಾಪಿಸಿದ್ದವು, ಎಂದು ಐಐಟಿ, ಎನ್‌ಐಟಿ, ಯುಜಿಸಿ ಮುಂತಾದ ಸಂಸ್ಥೆಗಳ ನಿರ್ದೇಶಕರುಗಳನ್ನು ಉದ್ದೇಶಿಸಿ ಮಾತನಾಡುತ್ತ ಹೇಳಿದರಂತೆ.



**ದುರದೃಷ್ಟವಶಾತ್, ಶೋಧಿಸಿದವರು ಅದನ್ನು ಪ್ರತಿಪಾದಿಸಲು ಬದುಕುಳಿಯಲಿಲ್ಲ!**
ಎರಡೂ ವ್ಯಂಗ್ಯಚಿತ್ರಗಳು: ಆರ್.ಪ್ರಸಾದ್

ಅದಕ್ಕೂ ಮೊದಲು ಐಐಟಿ, ಮುಂಬೈನ ವಿದ್ಯಾರ್ಥಿಗಳಿಗೆ ಅಣು–ಪರಮಾಣುಗಳನ್ನು ಸಂಶೋಧಿಸಿದವರು ಚರಕ, ಕಣಾದ ಋಷಿಗಳು ಎಂದರೆ, ಅದಕ್ಕೆ ಮೊದಲು, ಕಂಪ್ಯೂಟರುಗಳು ಜೀವಂತವಾಗಿರಬೇಕಾದರೆ ಅದು ಸಂಸ್ಕೃತದ ನೆರವಿನಿಂದ ಮಾತ್ರ ಸಾಧ್ಯ ಎಂದು ನಾಸಾ ಕೂಡ ಹೇಳಿದೆ ಎಂದಿದ್ದರು. ಈ ಬಗ್ಗೆ ಟೀಕೆಗಳು ಬಂದಾಗ ಎಂದಿನಂತೆ "ತಪ್ಪಾಗಿ ವರದಿಯಾಗಿದೆ" ಎನ್ನುತ್ತ ನಾಸಾ ವಿಜ್ಞಾನಿಯೊಬ್ಬರು ಹೇಳಿದ್ದಾರೆ ಅಂದಿದ್ದರು.

ಇವರು ಮಾನವ ಸಂಪನ್ಮೂಲ ಮಂತ್ರಿಗಳಾಗುವ ಮೊದಲೂ ಜ್ಯೋತಿಷ್ಯಶಾಸ್ತ್ರದ ಎದುರು ವಿಜ್ಞಾನ ಕುಬ್ಜ ಎಂದಿದ್ದರು. ಬಹುಶಃ ಅದಕ್ಕಾಗಿಯೇ ಅವರನ್ನು ಮಾನವ ಸಂಪನ್ಮೂಲ ಮಂತ್ರಿಯಾಗಿ ಮಾಡಿರಬೇಕು.

# ಜಾಗತಿಕ ಬಂಡವಾಳಶಾಹಿಯ ವ್ಯವಸ್ಥಾಗತ ಬಿಕ್ಕಟ್ಟು

## ಹಣಕಾಸು ಬಂಡವಾಳದ ಯಜಮಾನಿಕೆ ಇರುವ ವರೆಗೆ ಬೆಂಬಿಡದು




**ನವ ಉದಾರ ಬಂಡವಾಳಶಾಹಿಯು ಈಗ ಆ ಬಿಕ್ಕಟ್ಟುಗಳಿಗಿಂತ ಭಿನ್ನವಾದ ಒಂದು ವ್ಯವಸ್ಥಾಗತ ಬಿಕ್ಕಟ್ಟಿಗೆ ಒಳಗಾಗಿದೆ. ತೇಪೆ ಹಚ್ಚುವ ಕೆಲಸಗಳ ಮೂಲಕ ಈ ಬಿಕ್ಕಟ್ಟನ್ನು ಪರಿಹರಿಸಲು ಸಾಧ್ಯವಿಲ್ಲ; ಎಲ್ಲಿಯವರೆಗೆ ಹಣಕಾಸು ಬಂಡವಾಳದ ಯಜಮಾನಿಕೆ ಮುಂದುವರೆಯುತ್ತದೆಯೋ ಮತ್ತು ಜಾಗತಿಕ ಹಣಕಾಸಿನ ಹರಿವಿನ ಸುಳಿಗೆ ಸಿಕ್ಕಿದ ದೇಶ ದೇಶಗಳು ಆ ಸುಳಿಯಲ್ಲಿಯೇ ಉಳಿಯುತ್ತವೆಯೋ ಅಲ್ಲಿಯವರೆಗೆ ಈ ಬಿಕ್ಕಟ್ಟೂ ಮುಂದುವರೆಯುತ್ತದೆ, ಮತ್ತಷ್ಟು ಹದಗೆಡುತ್ತದೆ. ಇಂತಹ ಅಂತಾರಾಷ್ಟ್ರೀಯ ಹಣಕಾಸು ಬಂಡವಾಳದ ಯಜಮಾನಿಕೆಯಿಂದ ಹೊರ ಬರಲು, ಪ್ರತಿಯೊಂದು ದೇಶದ ಒಳಗೂ, ಒಂದು ಪರ್ಯಾಯ ಅಜೆಂಡಾದೊಂದಿಗೆ ದುಡಿಯುವ ಜನತೆಯನ್ನು ಅಣಿನೆರೆಸಬೇಕಾಗುತ್ತದೆ.**

**ಪ್ರೊ. ಪ್ರಭಾತ್ ಪಟ್ನಾಯಕ್** ಅನು: ಕೆ.ಎಂ. ನಾಗರಾಜ್

ಬಂಡವಾಳಶಾಹಿ ಅರ್ಥವ್ಯವಸ್ಥೆಯಲ್ಲಿ ಆಗಾಗ ಅಥವಾ ಚಕ್ರೀಯವಾಗಿ ಬಿಕ್ಕಟ್ಟುಗಳು ಉಂಟಾಗುತ್ತವೆ. ಅಂತಹ ಸಂದರ್ಭದಲ್ಲಿ, ವ್ಯವಸ್ಥೆಯ ಚೌಕಟ್ಟಿನೊಳಗೆ, ಅಂದರೆ ವ್ಯವಸ್ಥೆಯ ಪ್ರಚಲಿತ ವರ್ಗಗಳ ರೂಪ ರಚನೆ ಇವುಗಳಿಗೆ ಅನುಗುಣವಾಗಿ ಬಿಕ್ಕಟ್ಟನ್ನು ಪರಿಹರಿಸಲು ಸಾಧ್ಯವಿರುವ ಎಲ್ಲ ಪ್ರಯತ್ನಗಳನ್ನು ಮಾಡಲಾಗತ್ತದೆ. ಇದರಿಂದ ಬಿಕ್ಕಟ್ಟು ಮತ್ತಷ್ಟು ಹದಗೆಡುತ್ತದಷ್ಟೇ. ಈ ಅರ್ಥದಲ್ಲಿ ನವ ಉದಾರ ಬಂಡವಾಳಶಾಹಿಯು ಈಗ ಆ ಬಿಕ್ಕಟ್ಟುಗಳಿಗಿಂತ ಭಿನ್ನವಾದ ಒಂದು ವ್ಯವಸ್ಥಾಗತ ಬಿಕ್ಕಟ್ಟಿಗೆ ಒಳಗಾಗಿದೆ. ತೇಪೆ ಹಚ್ಚುವ ಕೆಲಸಗಳ ಮೂಲಕ ಈ ಬಿಕ್ಕಟ್ಟನ್ನು ಪರಿಹರಿಸಲು ಸಾಧ್ಯವಿಲ್ಲ; ಈ ತೇಪೆದಾರಿಗಿಂತಲೂ ಹೆಚ್ಚು ಉಪಯುಕ್ತ ಎನ್ನುವ ಕ್ರಮ ಕೈಗೊಂಡರೂ ಬಿಕ್ಕಟ್ಟು ಉಲ್ಬಣಗೊಳ್ಳುತ್ತಲೇ ಹೋಗುತ್ತದೆ. ಈ ಮಾತಿಗೆ ಉದಾಹರಣೆಯಾಗಿ ಅಮೇರಿಕಾದಲ್ಲಿ ಟ್ರಂಪ್, ಚೀನಾ, ಭಾರತ ಮತ್ತು ಇತರ ಕೆಲವು ದೇಶಗಳ ಆಮದುಗಳ ಮೇಲೆ ಅಧಿಕ ಸುಂಕ ಹೇರುವ ಮೂಲಕ ಕೈಗೊಂಡಿರುವ ರಕ್ಷಣಾತ್ಮಕ ಕ್ರಮಗಳನ್ನು ಗಮನಿಸಬಹುದು. ಆದರೆ, ನವ ಉದಾರವಾದಿ ಜಾಗತೀಕರಣದ ವಿಶಾಲ ಚೌಕಟ್ಟನ್ನು ಮೀರದ ಹೊರತು, ಅಂದರೆ, ಈ ಜಾಗತೀಕರಣದ ಚಾಲಕ ಶಕ್ತಿಯೇ ಆಗಿರುವ ಅಂತಾರಾಷ್ಟ್ರೀಯ ಹಣಕಾಸು ಬಂಡವಾಳದ ಯಜಮಾನಿಕೆಯಿಂದ ಹೊರ ಬರದ ಹೊರತು, ಟ್ರಂಪ್ ಎಷ್ಟೇ ರಕ್ಷಣಾತ್ಮಕ ಕ್ರಮಗಳನ್ನು ಕೈಗೊಂಡರೂ ಬಿಕ್ಕಟ್ಟು ಪರಿಹಾರವಾಗುವುದಿಲ್ಲ. ಅದು ಇನ್ನಷ್ಟು ಹದಗೆಡುತ್ತದೆ.

ಈ ಬಿಕ್ಕಟ್ಟಿನ ರೋಗ ಲಕ್ಷಣಗಳು ಸ್ಪಷ್ಟವಾಗಿಯೇ ಪ್ರಕಟಗೊಂಡಿವೆ. 2008ರ ಬಿಕ್ಕಟ್ಟಿನ ನಂತರ, ಬಡ್ಡಿದರಗಳನ್ನು ಹತ್ತಿರ ಹತ್ತಿರ ಸೊನ್ನೆಯ ಮಟ್ಟಕ್ಕೆ ಇಳಿಸುವ "ಅಗ್ಗದ ಬಡ್ಡಿ ನೀತಿ"ಯನ್ನು ಅಮೇರಿಕಾ ಮತ್ತು ಹಲವು ದೇಶಗಳು ಅನುಸರಿಸಿದವು. ಈ ಕ್ರಮದಿಂದಾಗಿ ಜಾಗತಿಕ ಬಂಡವಾಳಶಾಹಿಗೆ ಉಸಿರಾಟ ಸರಾಗವಾಯಿತು. ಅಷ್ಟಾಗಿಯೂ, ವಿಶ್ವವು ಈಗ ಮತ್ತೊಮ್ಮೆ ಆರ್ಥಿಕ ಹಿಂಜರಿತವನ್ನು ಎದುರಿಸುತ್ತಿದೆ. ಅಮೇರಿಕಾದಲ್ಲಿ ವ್ಯವಹಾರ ಮತ್ತು ಉದ್ದಿಮೆಗಳ ಮೇಲಿನ ಹೂಡಿಕೆ ಇಳಿಯುತ್ತಿದೆ. ಈ ವರ್ಷದ ಜುಲೈನಲ್ಲಿ ಅಮೇರಿಕಾದ ಕೈಗಾರಿಕಾ ಉತ್ಪಾದನೆ ಅದರ ಹಿಂದಿನ ತಿಂಗಳಿಗಿಂತ ಶೇ.0.2 ಕಡಿಮೆ ಇತ್ತು. ಈ ವರ್ಷದ ಎರಡನೆಯ ತ್ರೈಮಾಸಿಕದಲ್ಲಿ ಬ್ರಿಟನ್ನಿನ ಮತ್ತು ಜರ್ಮನಿಯ ಅರ್ಥವ್ಯವಸ್ಥೆಗಳೂ ಕುಗ್ಗಿದವು. ಇಟಲಿ, ಬ್ರೆಜಿಲ್, ಮೆಕ್ಸಿಕೊ, ಅರ್ಜೆಂಟೈನಾ ಮತ್ತು ಭಾರತದಂತಹ ದೇಶಗಳಲ್ಲೂ ಅದೇ ಪರಿಸ್ಥಿತಿ ಇದೆ. ಈ ಜಾಗತಿಕ ಹಿಂಜರಿತದ ಪರಿಣಾಮವಾಗಿ ಚೀನಾದಲ್ಲೂ ಬೆಳವಣಿಗೆಯ ದರ ಇಳಿಯುತ್ತಿದೆ.

ಈಗ ತಲೆದೋರುತ್ತಿರುವ ಆರ್ಥಿಕ ಹಿಂಜರಿತಕ್ಕೆ ಎಲ್ಲ ದೇಶಗಳ ನೀತಿ–ನಿರೂಪಕರು ಮತ್ತೊಮ್ಮೆ ಬಡ್ಡಿ ದರಗಳ ಮತ್ತಷ್ಟು ಇಳಿಕೆ ಮಾಡುವ ಮೂಲಕವೇ ಸ್ಪಂದಿಸುತ್ತಿದ್ದಾರೆ. ಈಗಾಗಲೇ ಬಡ್ಡಿ ದರಗಳನ್ನು ಹತ್ತಿರ ಹತ್ತಿರ ಋಣಾತ್ಮಕ ಮಟ್ಟಕ್ಕೆ ಇಳಿಸಿರುವ ಯೂರೋಪಿಯನ್ ಕೇಂದ್ರೀಯ ಬ್ಯಾಂಕ್, ಬಡ್ಡಿ ದರಗಳನ್ನು ಇನ್ನೂ ಕೆಳಗಿಳಿಸುವ ಯೋಜನೆಯಲ್ಲಿದೆ. ಭಾರತದಲ್ಲೂ ಸಹ ಈಗಾಗಲೇ ಬಡ್ಡಿ ದರಗಳ ಇಳಿಕೆಯಾಗಿದೆ. ಈ ರೀತಿಯಲ್ಲಿ ಬಡ್ಡಿ ದರಗಳನ್ನು ಇಳಿಕೆ ಮಾಡುತ್ತಿರುವ ಉದ್ದೇಶ ಏನೆಂದರೆ, ಬಡ್ಡಿ ದರ ಕಡಿಮೆ ಇದ್ದರೆ ಬಂಡವಾಳ ಹೂಡಿಕೆ ವೃದ್ಧಿಸುತ್ತದೆ ಎಂಬುದಕ್ಕಿಂತಲೂ ಹೆಚ್ಚಾಗಿ; ಕಡಿಮೆಯ ಬಡ್ಡಿ ದರಗಳಿಂದಾಗಿ ಆಸ್ತಿಗಳ ಬೆಲೆ "ಗುಳ್ಳೆಗಳು" ಏಳುತ್ತವೆ ಎಂಬುದು. ಇವರ ಪ್ರಕಾರ, ಆಸ್ತಿಗಳ ಬೆಲೆ "ಗುಳ್ಳೆಗಳು" ಒಟ್ಟಾರೆ ಬೇಡಿಕೆಯನ್ನು ಹೆಚ್ಚಿಸುತ್ತವೆ. ಹೇಗೆಂದರೆ, ಆಸ್ತಿಗಳ ಬೆಲೆ "ಗುಳ್ಳೆಗಳು" ತಮ್ಮ ಸಂಪತ್ತನ್ನು ಹೆಚ್ಚಿಸಿವೆ ಆಸ್ತಿಯ ಒಡೆಯರಿಗೆ ಅನಿಸುತ್ತದೆ. ಅನೇಕ ರೀತಿಯಲ್ಲಿ ಹೆಚ್ಚು ಖರ್ಚುಮಾಡುತ್ತಾರೆ, ಅದರಿಂದಾಗಿ ಬೇಡಿಕೆ ವೃದ್ಧಿಸುತ್ತದೆ.

ಎಲ್ಲ ದೇಶಗಳ ನೀತಿ–ನಿರೂಪಕರೂ ಇದೇ ಮಾದರಿಯಲ್ಲೇ ಏಕೆ ಸ್ಪಂದಿಸುತ್ತಿದ್ದಾರೆ ಎಂಬುದನ್ನು ಸ್ಪಷ್ಟಪಡಿಸಬೇಕಾಗುತ್ತದೆ. ಎರಡನೆಯ ಮಹಾ ಯುದ್ಧದ ನಂತರದ ಅವಧಿಯಲ್ಲಿ–ಅಂದರೆ, ನವ ಉದಾರವಾದಿ ಜಾಗತೀಕರಣವು ಹೆಜ್ಜೆ ಇಡುವ ಮುನ್ನ, ಆರ್ಥಿಕ ಹಿಂಜರಿತದ ಸೂಚನೆ ಇದ್ದಾಗ, ಒಟ್ಟಾರೆ ಬೇಡಿಕೆಯನ್ನು ಹೆಚ್ಚಿಸುವ ಸಲುವಾಗಿ ಸರ್ಕಾರದ ವೆಚ್ಚಗಳನ್ನು ಹೆಚ್ಚಿಸಬಹುದಿತ್ತು. ಸರ್ಕಾರಗಳು, ಅಗತ್ಯವಿದ್ದರೆ, ತಮ್ಮ ವಿತ್ತೀಯ ಕೊರತೆಯ ಮಟ್ಟವನ್ನು ಹೆಚ್ಚಿಸಿಕೊಳ್ಳಬಹುದಿತ್ತು. ಏಕೆಂದರೆ, ಆ ಸಮಯದಲ್ಲಿ ಬಂಡವಾಳದ ಹರಿದಾಡುವಿಕೆಯ ಮೇಲೆ ನಿಯಂತ್ರಣವಿತ್ತು. ಹಾಗಾಗಿ, ವಿತ್ತೀಯ ಕೊರತೆಯ ಮಟ್ಟ ಏರಿದ ಕಾರಣದಿಂದಲೇ ಬಂಡವಾಳವು ಪಲಾಯನ ಗೈಯ್ಯುವ ಅಪಾಯವಿರಲಿಲ್ಲ.

ಯುದ್ಧಾನಂತರದಲ್ಲಿ ಬಂಡವಾಳಶಾಹಿ ಅರ್ಥವ್ಯವಸ್ಥೆಯ ಶಿಲ್ಪಿಗಳಲ್ಲಿ ಒಬ್ಬರಾದ ಪ್ರಸಿದ್ಧ ಅರ್ಥಶಾಸ್ತ್ರಜ್ಞ ಜಾನ್ ಮೇನಾರ್ಡ್ ಕೀನ್ಸ್ ಅವರು ವಿಶ್ವ ಹೀಗಿರಬೇಕು ಎಂದು ಕಲ್ಪಿಸಿಕೊಂಡಿದ್ದ ದೃಶ್ಯ ಇದಾಗಿತ್ತು. ಹಣಕಾಸು ಬಂಡವಾಳದ ಅಂತಾರಾಷ್ಟ್ರೀಕರಣವನ್ನು ಕೀನ್ಸ್ ವಿರೋಧಿಸಿದ್ದರು. (ಹಣಕಾಸು ಬಂಡವಾಳವು ಎಲ್ಲಕ್ಕಿಂತ ಮಿಗಿಲಾಗಿ ರಾಷ್ಟ್ರೀಯವಾಗಿಯೇ ಇರಬೇಕು ಎಂದು ಅವರು ಹೇಳಿದ್ದರು). ಉದ್ಯೋಗ ಸೃಷ್ಟಿಯ ಉದ್ದೇಶಕ್ಕಾಗಿ ಸರ್ಕಾರವು ಕೈಗೊಳ್ಳುವ ಹೆಚ್ಚು ಹೆಚ್ಚು ಖರ್ಚಿನ ಕ್ರಮಗಳನ್ನು ಯಾವತ್ತೂ ವಿರೋಧಿಸುವ ಹಣಕಾಸು ಬಂಡವಾಳವು ಪ್ರಭುತ್ವವನ್ನು ತನ್ನ ಕೈಗೊಂಬೆಯಾಗಿಸಿಕೊಳ್ಳುವ ಮೂಲಕ, ರಾಷ್ಟ್ರ–ಪ್ರಭುತ್ವದ ಉದ್ಯೋಗ ಸೃಷ್ಟಿಯ ಸಾಮರ್ಥ್ಯವನ್ನು ಒಳಗೊಳಗೇ ನಾಶಪಡಿಸುತ್ತದೆ ಎಂಬ ನೆಲೆಯಲ್ಲಿ ಅವರು ಹಣಕಾಸು ಬಂಡವಾಳವು ಅಂತಾರಾಷ್ಟ್ರೀಕರಣಗೊಳ್ಳುವುದನ್ನು ವಿರೋಧಿಸಿದ್ದರು. ಬಂಡವಾಳಶಾಹಿ ಅರ್ಥವ್ಯವಸ್ಥೆಯ ಸಂರಕ್ಷಕರಾಗಿದ್ದ ಕೀನ್ಸ್, ರಾಷ್ಟ್ರ–ಪ್ರಭುತ್ವವು ಸಾಕಷ್ಟು ಉದ್ಯೋಗಗಳನ್ನು ಸೃಷ್ಟಿಸದ ಹೊರತು, ಸಮಾಜವಾದವು ಒಡ್ಡಿದ ಬೆದರಿಕೆಯಿಂದ ಬಂಡವಾಳಶಾಹಿಗೆ ಉಳಿಗಾಲವಿಲ್ಲ ಎಂದು ಭಯಪಟ್ಟಿದ್ದರು.


ಆದರೆ, ಯುದ್ಧಾನಂತರದ ಕೆಲವು ವರ್ಷಗಳ ಕಾಲಾವಧಿಯಲ್ಲಿ, ಅಮೇರಿಕಾದ ಪಾವತಿ ಶೇಷದ ಚಾಲ್ತಿ ಖಾತೆಯಲ್ಲಿ ಸತತವಾಗಿ ಬಹಳ ಕಾಲ ಭಾರಿ ಮೊತ್ತದ ಕೊರತೆಯ ಹಣ (ಇದು ಬೇರೆ ಬೇರೆ ದೇಶಗಳು ತಮ್ಮ ರಫ್ತುಗಳ ಮೂಲಕ ಗಳಿಸಿದ ಹಣ), ಮತ್ತು, ತದನಂತರದ ಅವಧಿಯಲ್ಲಿ, ಅಂದರೆ 1970ರ ದಶಕದಲ್ಲಿ, ತೈಲ ಬೆಲೆಗಳ ವಿಪರೀತ ಹೆಚ್ಚಳದಿಂದಾಗಿ ತೈಲ ಉತ್ಪಾದಕ ದೇಶಗಳ ಅಪಾರ ಲಾಭದ ಆದಾಯವು ಅಭಿವೃದ್ಧಿ ಹೊಂದಿದ ದೇಶಗಳ ಮಹಾ ನಗರ ಕೇಂದ್ರಿತ ಬ್ಯಾಂಕ್‌ಗಳಲ್ಲಿ ಶೇಖರಣೆಯಾಗಿತ್ತು. ಅಂತಹ ಪರಿಸ್ಥಿತಿಯಲ್ಲಿ, ಬಂಡವಾಳದ ಹರಿದಾಡುವಿಕೆಯ ಮೇಲಿದ್ದ ನಿಯಂತ್ರಣವನ್ನು ಕಿತ್ತುಹಾಕುವಂತೆ ಹಣಕಾಸು ಬಂಡವಾಳವು ಒತ್ತಡ ಹೇರಿತು. ತನಗೆ ಎಲ್ಲಿಗೆ ಬೇಕೊ ಅಲ್ಲಿಗೆ ಮುಕ್ತವಾಗಿ ಚಲಿಸಲು ಅನುವಾಗುವಂತೆ ಇಡೀ ವಿಶ್ವವನ್ನೇ ತೆರೆದಿಡಬೇಕು ಎಂದು ಹಣಕಾಸು ಬಂಡವಾಳವು ಬಯಸಿತು ಮತ್ತು ಆ ಪ್ರಯತ್ನದಲ್ಲಿ ಕೊನೆಗೆ ಯಶಸ್ವಿಯೂ ಆಯಿತು. ಈ ರೀತಿಯಲ್ಲಿ ಹಣಕಾಸು ಬಂಡವಾಳವು ಜಾಗತಿಕವಾಗಿ ತನ್ನ ಯಜಮಾನಿಕೆಯನ್ನು ಸ್ಥಾಪಿಸಿಕೊಂಡಿತು. ಈ ವಿದ್ಯಮಾನವು, ಉದ್ಯೋಗ ಸೃಷ್ಟಿಯ ಮಟ್ಟ ಕಾಯ್ದುಕೊಳ್ಳುತ್ತಿದ್ದ ತನ್ನ ಜವಾಬ್ದಾರಿಕೆಯಿಂದ ರಾಷ್ಟ್ರ–ಪ್ರಭುತ್ವವು ಹಿಂದೆ ಸರಿಯಿತು ಎಂಬುದನ್ನು ಸೂಚಿಸುತ್ತದೆ. ಹಾಗಾಗಿ, ಈ ರೀತಿಯಲ್ಲಿ ಅಸ್ತಿತ್ವಕ್ಕೆ ಬಂದ ನವ ಉದಾರ ಹಣಕಾಸು ಬಂಡವಾಳವು ಒಟ್ಟಾರೆ ಬೇಡಿಕೆಯನ್ನು ಉತ್ತೇಜಿಸಲು ಉಳಿಸಿಕೊಂಡಿರುವ ಏಕೈಕ ಮಾರ್ಗವೇ ಆಸ್ತಿಗಳ ಬೆಲೆ ಗುಳ್ಳೆಗಳ ಉದ್ದೀಪನೆ; ಮತ್ತು ಈ ಉದ್ದೇಶಕ್ಕಾಗಿ ಬಡ್ಡಿದರ ನೀತಿಯ ಬಳಕೆ.

ಆದರೆ, ಯಾವಾಗ ಬೇಕಾದರೂ ನಿಯಂತ್ರಿಸಬಹುದಾದ ಸರ್ಕಾರದ ವೆಚ್ಚಗಳಂತಲ್ಲದೆ, ಬೇಕು ಎಂದ ಕೂಡಲೇ "ಗುಳ್ಳೆಗಳು" ಪ್ರತ್ಯಕ್ಷವಾಗುವುದಿಲ್ಲ. 1990ರ ದಶಕದಲ್ಲಿ (ಅಮೇರಿಕಾದಲ್ಲಿ "ಡಾಟ್–ಕಾಂ ಗುಳ್ಳೆಗಳು"), ಮತ್ತು ಈ ಶತಮಾನದ ಆರಂಭದ ವರ್ಷಗಳಲ್ಲಿ (ಅಮೇರಿಕಾದಲ್ಲಿ "ವಸತಿ ಗುಳ್ಳೆಗಳು") ಈ "ಗುಳ್ಳೆಗಳು" ಒಟ್ಟಾರೆ ಬೇಡಿಕೆಯನ್ನು ಸ್ವಲ್ಪ ಸಮಯದ ವರೆಗೆ ಉದ್ದೀಪಿಸಿದಂತೆ ಕಂಡಿತು. ಆದರೆ, ವಸತಿ "ಗುಳ್ಳೆಗಳು" ಒಡೆದ ಕೂಡಲೇ ಜನ ಜಾಗೃತರಾದರು. ಬಡ್ಡಿದರಗಳನ್ನು ಹತ್ತಿರ ಹತ್ತಿರ ಸೊನ್ನೆಯ ಮಟ್ಟಕ್ಕೆ ಇಳಿಸಿದರೂ ಸಹ, ಅಷ್ಟೇ ಪರಿಣಾಮದ ಹೊಸ "ಗುಳ್ಳೆಗಳು" ಪ್ರತ್ಯಕ್ಷವಾಗಲಿಲ್ಲ.

ಅದೇ ಸಮಯದಲ್ಲಿ, ಪ್ರತಿಯೊಂದು ದೇಶದಲ್ಲೂ ಮತ್ತು ಇಡೀ ವಿಶ್ವದಲ್ಲೇ ಒಟ್ಟಾರೆ ಬೇಡಿಕೆಯನ್ನು ತಗ್ಗಿಸುವ ನಿಟ್ಟಿನಲ್ಲಿ ಪ್ರಭಾವಪೂರ್ಣವಾಗಿ ಕಾರ್ಯ ಪ್ರವೃತ್ತವಾಗಿರುವ ಇನ್ನೊಂದು ಅಂಶವೂ ಇದೆ. ಒಟ್ಟು ಉತ್ಪತ್ತಿಯಲ್ಲಿ ಮಿಗುತಾಯದ ಪಾಲು ಹೆಚ್ಚುತ್ತಿರುವ ಅಂಶವೇ ಆ ಇನ್ನೊಂದು ಅಂಶ. ಜಾಗತೀಕರಣವೆಂದರೆ, ಎಲ್ಲಕ್ಕಿಂತ ಮಿಗಿಲಾಗಿ, ಹಣಕಾಸೂ ಸೇರಿದಂತೆ, ಬಂಡವಾಳವು ದೇಶ ದೇಶಗಳ ಗಡಿಯಾಚೆಗೆ ಮುಕ್ತವಾಗಿ ಚಲಿಸುವ ಅವಕಾಶ. ಬಂಡವಾಳದ ಈ ಚಲನೆಯಿಂದಾಗಿ, ಜಾಗತಿಕ ಬೇಡಿಕೆಯನ್ನು ಪೂರೈಸಲು ಹೆಚ್ಚು–ಕೂಲಿಯ ಬೃಹತ್ ನಗರಗಳಲ್ಲಿ ನೆಲೆಸಿದ್ದ ಅನೇಕಾನೇಕ ಚಟುವಟಿಕೆಗಳು ಕಡಿಮೆ–ಕೂಲಿಯ ಮೂರನೆಯ ಜಗತ್ತಿನ ದೇಶಗಳಲ್ಲಿ ಮರು–ನೆಲೆಗೊಂಡವು. ಈ ವಿದ್ಯಮಾನದಿಂದಾಗಿ ಮುಂದುವರೆದ ದೇಶಗಳ ಕಾರ್ಮಿಕರನ್ನು ಮೂರನೆಯ ಜಗತ್ತಿನ ದೇಶಗಳ ಕಾರ್ಮಿಕರೊಂದಿಗೆ ಪೈಪೋಟಿಗೆ ತಳ್ಳಿದ ಕಾರಣದಿಂದಾಗಿ ಮುಂದುವರೆದ ದೇಶಗಳ ಕಾರ್ಮಿಕರ ಕೂಲಿಯು ಕೆಳ ಮಟ್ಟದಲ್ಲೇ ಉಳಿಯುವಂತಾಗಿದೆ. ಅದೇ ಸಮಯದಲ್ಲಿ, ಮೂರನೆಯ ಜಗತ್ತಿನ ದೇಶಗಳ ಕಾರ್ಮಿಕರ ಕೂಲಿಯು ಬದುಕುಳಿಯುವ ಮಟ್ಟದಲ್ಲೇ ಉಳಿದಿದೆ, ಏಕೆಂದರೆ, ಕೈಗಾರಿಕಾ ಚಟುವಟಿಕೆಗಳು ಮರು–ನೆಲೆಗೊಂಡ ಬಳಿಕವೂ ಬರಿದಾಗದಷ್ಟು ದೊಡ್ಡ ಪ್ರಮಾಣದ ಮೀಸಲು ಶ್ರಮಿಕ ಪಡೆ ಮೂರನೆಯ ಜಗತ್ತಿನ ದೇಶಗಳಲ್ಲಿದೆ. ಆದ್ದರಿಂದ, ಜಗತ್ತಿನಾದ್ಯಂತ ಕಾರ್ಮಿಕರ ಉತ್ಪಾದಕತಾ ಪರಿಮಾಣವು ಹೆಚ್ಚಿದರೂ ಸಹ, ಜಗತ್ತಿನಾದ್ಯಂತ ಕಾರ್ಮಿಕರ ಕೂಲಿಯ ದರದ ಏರಿಕೆಯ ಪರಿಮಾಣವು ಹೆಚ್ಚಾಗುವುದಿಲ್ಲ. ಈ ಕಾರಣದಿಂದಾಗಿಯೇ ಪ್ರತಿಯೊಂದು ದೇಶದಲ್ಲೂ ಮತ್ತು ಇಡೀ ವಿಶ್ವದಲ್ಲೇ ಮಿಗುತಾಯದ ಪಾಲು ಹೆಚ್ಚುತ್ತಿದೆ.

ಮಿಗುತಾಯದ ಪಾಲಿನ ಈ ಪರಿಯ ಹೆಚ್ಚಳವು ಅಗತ್ಯಕ್ಕಿಂತ ಅಧಿಕವಾಗಿ ಉತ್ಪಾದಿಸುವ (overproduction) ಪ್ರವೃತ್ತಿಯನ್ನು ಬೆಳೆಸುತ್ತದೆ, ಏಕೆಂದರೆ, ತಮ್ಮ ವರಮಾನದ ಪ್ರತಿ ಯೂನಿಟ್‌ನಲ್ಲಿ

ಪುಟ 14 ಕ್ಕೆ



**ಸರ್ಕಾರದ ವೆಚ್ಚಗಳು ಏರಿಕೆಯಾಗದ ಸಂಭರ್ದದಲ್ಲಿ ಒಂದು ದೇಶವು ಅನುಸರಿಸಬಹುದಾದ ನೀತಿಯನ್ನು ಆಯ್ದುಕೊಳ್ಳಲು ಆ ದೇಶಕ್ಕೆ "ನನ್ನ ನೆರೆಯವನು ಹಾಳಾಗಲಿ" ಎನ್ನುವ ನೀತಿಯನ್ನು ಬಿಟ್ಟರೆ ಬೇರೆ ಆಯ್ಕೆಯೇ ಇಲ್ಲ ಎಂಬಂತಾಗಿದೆ. ಇದರಿಂದಾಗಿ ಎಲ್ಲ ದೇಶಗಳ ಬಿಕ್ಕಟ್ಟಿನ ಪರಿಸ್ಥಿತಿ ಮತ್ತಷ್ಟು ಹದಗೆಡುತ್ತದೆ. ಈ ಪರಿಸ್ಥಿತಿಯೇ ನವ ಉದಾರ ಬಂಡವಾಳಶಾಹಿಯ ವ್ಯವಸ್ಥಾಗತ ಬಿಕ್ಕಟ್ಟಿನ ಹೆಗ್ಗುರುತು.**

# ಹೊಸ ಸವಾಲಿನೊಂದಿಗೆ ಚಳುವಳಿ ಕಟ್ಟುವ ಸಂಕಲ್ಪ.....

ಪುಟ 16 ರಿಂದ

ಸ್ವಿಗ್ಗಿ, ಜೊಮಾಟೊ, ಬಿಗ್ ಬ್ಯಾಸ್ಕೆಟ್, ಹೀಗೆ ನೂರಾರು ಕಂಪನಿಗಳಲ್ಲಿ ಕಾರ್ಮಿಕರು ಗಂಟೆಗಳ ಆಧಾರದಲ್ಲಿ, ಡೆಲಿವರಿಯ ಆಧಾರದಲ್ಲಿ, ಟ್ರಿಪ್‌ಗಳ ಆಧಾರದಲ್ಲಿ ಕೆಲಸ ಮಾಡುವುದನ್ನು ಕಾಣಬಹುದು. ಈ ಆಪ್ ಆಧಾರಿತ ಕೆಲಸಗಳು ಕಾರ್ಮಿಕರ ಕೆಲಸದ ಸ್ವರೂಪವನ್ನೇ ಬದಲಾಯಿಸಿಬಿಟ್ಟಿದೆ. ಎಲ್ಲ ಕೆಲಸಗಳನ್ನೂ ಅತಂತ್ರಗೊಳಿಸುತ್ತಾ, ಅಸಂಘಟಿತಗೊಳಿಸುತ್ತಾ ಇದು ಬೆಳೆಯುತ್ತಿದೆ. ಮುಂದಿನ ದಿನಗಳಲ್ಲಿ ಎಲ್ಲಾ ರಂಗಗಳಲ್ಲೂ ಇಂತಹ ತಂತ್ರಜ್ಞಾನಗಳ ಬೆಳವಣಿಗೆ ಹೆಚ್ಚಾಗಲಿದೆ. ಹೀಗಾಗಿ ಇಂತಹ ಕ್ಷೇತ್ರಗಳಿಗೆ ಸಂಬಂಧಿಸಿ ಇರುವ ಕಾಯ್ದೆ ಮತ್ತು ಕಾನೂನುಗಳನ್ನು ಪುನರ್‌ರೂಪಿಸಲು ಮತ್ತು ನೂತನವಾದ ಕಾನೂನುಗಳನ್ನು ಜಾರಿಗೆ ತರುವುದು ಅಗತ್ಯವಿದೆ. ಈ ನಿಟ್ಟಿನಲ್ಲಿ ಡಿಜಿಟಲ್ ಲೇಬರ್ ಪ್ಲಾಟ್‌ಫಾರ್ಮ್‌ಗಳ ವಿಧಾನವನ್ನು ಅರ್ಥ ಮಾಡಿಕೊಂಡು ಕಾರ್ಮಿಕರನ್ನು ಸಂಘಟಿಸಲು ಮುಂದಾಗಬೇಕಾಗಿದೆ. (Digital Labour Platforms and the Future of Work, ILO, Geneva, 2018)

**ಹೆಚ್ಚುತ್ತಿರುವ ನಿರುದ್ಯೋಗ**

ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ ಸಿಎಸ್‌ಇ ಕೇಂದ್ರವು ನಡೆಸಿದ ಅಧ್ಯಯನದಲ್ಲಿ ಕೆಲವು ಬೆಚ್ಚಿಬೀಳಿಸುವ ನಿರುದ್ಯೋಗದ ಅಂಕಿ-ಸಂಖ್ಯೆಗಳು ಹೊರಬಂದಿವೆ. 2016 ಮತ್ತು 2018 ರ ನಡುವೆ 50 ಲಕ್ಷ ಜನರು ಉದ್ಯೋಗ ಕಳೆದುಕೊಂಡಿದ್ದಾರೆ. ಕಾಕತಾಳೀಯವೆಂಬಂತೆ ನೋಟು ರದ್ದತಿಯ ಜೊತೆಯಲ್ಲೇ ಉದ್ಯೋಗ ಕುಸಿತವು ಆರಂಭಗೊಂಡಿದೆ. ನಿರುದ್ಯೋಗ ದರವು 2018 ರಲ್ಲಿ ಶೇ.6 ರಷ್ಟು ದಾಖಲಾಗಿದೆ. ಇದು 2000-2011 ರ ಕಾಲಕ್ಕೆ ಹೋಲಿಸಿದರೆ ಎರಡು ಪಟ್ಟು ಹೆಚ್ಚಾಗಿದೆ. 2019 ರಲ್ಲಿ ದೇಶದ ಆರ್ಥಿಕ ಹಿಂಜರಿತ ಕಾಣುತ್ತಿದ್ದು, ಆಟೋಮೊಬೈಲ್ ವಲಯದಲ್ಲಿ ಹೆಚ್ಚಿನ ರೀತಿಯಲ್ಲಿ ಉದ್ಯೋಗ ನಾಶ ದಾಖಲಾಗುತ್ತಿದೆ. ಪರಿಣಾಮವಾಗಿ ಬೆಂಗಳೂರಿನಲ್ಲಿ ಗಣನೀಯ ಪ್ರಮಾಣದ ಉದ್ಯೋಗ ನಾಶವಾಗುತ್ತಿದೆ. ಲೇ ಆಫ್‌ಗಳು ಹೆಚ್ಚುತ್ತಿವೆ.

ನಿರುದ್ಯೋಗಿಗಳಾಗುತ್ತಿರುವವರಲ್ಲಿ ಬಹುತೇಕ ವಿದ್ಯಾವಂತರು ಮತ್ತು 20-24 ವಯಸ್ಸಿನ ಯುವಜನರು. ಕಡಿಮೆ ವಿದ್ಯಾಭ್ಯಾಸದ ಯುವಜನರು ಅನೌಪಚಾರಿಕ ವಲಯದಲ್ಲಿ ಕೆಲಸ ಕಳೆದುಕೊಂಡಿದ್ದಾರೆ ಅಥವಾ ಕಡಿಮೆ ಅವಕಾಶಗಳನ್ನು ಹೊಂದಿದ್ದಾರೆ. ಮಹಿಳೆಯರು ಹೆಚ್ಚಿನ ಭಾಧಿತರಾಗಿದ್ದಾರೆ.

ಮೋದಿ ಸರ್ಕಾರದ ತಪ್ಪು ಆರ್ಥಿಕ ನೀತಿಗಳಿಂದಾಗಿ ಭಾರತ ಆರ್ಥಿಕ ಹಿಂಜರಿತದತ್ತ ಸಾಗಿದೆ. ಆಟೋ ಬಿಡಿಭಾಗಗಳ ವಲಯದಲ್ಲಿ ಈಗಾಗಲೇ ಸುಮಾರು 3.5 ಲಕ್ಷ ಕಾರ್ಮಿಕರು ಕೆಲಸ ಕಳೆದುಕೊಂಡಿದ್ದಾರೆಂದು ವರದಿಯಾಗಿದೆ. ವಾಹನಗಳ ವ್ಯಾಪಾರವು ಕುಸಿತ ಕಂಡಿರುವುದರಿಂದ ಸುಮಾರು 10 ಲಕ್ಷ ಉದ್ಯೋಗಗಳು ನಾಶವಾಗುತ್ತವೆಂದು ಹೇಳಲಾಗುತ್ತಿದೆ. ಜವಳಿ ಉದ್ಯಮವು ಅತ್ಯಂತ ತೀವ್ರ ಬಿಕ್ಕಟ್ಟಿಗೆ ಸಿಕ್ಕಿದೆ. ಜವಳಿ ರಫ್ತು ಸಂಪೂರ್ಣವಾಗಿ ಕುಸಿದಿದೆ. ಒಂದು ಕೋಟಿಗೂ ಹೆಚ್ಚಿನ ಉದ್ಯೋಗ ನಾಶವಾಗುತ್ತದೆಂದು ಹೇಳಲಾಗಿದೆ. ಈಗಷ್ಟೇ ಪಾರ್ಲೆ-ಜಿ ಕಂಪನಿಯಲ್ಲಿ 10 ಸಾವಿರ ಉದ್ಯೋಗ ಕಡಿತಗೊಳಿಸುವ ಪ್ರಸ್ತಾವವಾಗಿದೆ. ಗ್ರಾಮೀಣ ಭಾರತದಲ್ಲಿ ಅತ್ಯಂತ ಕಡಿಮೆ ಬೆಲೆಯ ಬಿಸ್ಕತ್ತುಗಳನ್ನು ಕೊಳ್ಳಲೂ ಹಿಂಜರಿಯುತ್ತಿರುವುದರಿಂದ ವ್ಯಾಪಾರ ಕುಸಿತವಾಗಿದೆಯೆಂದು ಹೇಳಲಾಗುತ್ತಿದೆ. ಜನರ ಕೊಳ್ಳುವ ಶಕ್ತಿ ಎಲ್ಲಾ ವಲಯಗಳಲ್ಲೂ ಕುಸಿಯುತ್ತಿರುವುದನ್ನು ಇದು ಸೂಚಿಸುತ್ತಿದೆ.

**ಕಾರ್ಮಿಕರ ಪರಿಸ್ಥಿತಿ**

ಬೆಂಗಳೂರು ಮತ್ತು ರಾಮನಗರ ಜಿಲ್ಲೆಗಳಲ್ಲಿ ಕೃಷಿ ಚಟುವಟಿಕೆಯ ಕುಸಿತ ಮುಂದುವರಿದಿದೆ. ಗ್ರಾಮೀಣ ಭೂರಹಿತರು ಮತ್ತು ಬಡ ರೈತರು ಕೃಷಿಯಿಂದ ಹೊರದೂಡಲ್ಪಡುತ್ತಿದ್ದಾರೆ. ಇಂತಹವರು ಬೆಂಗಳೂರಿನಲ್ಲಿ ಆಟೋ, ಟ್ಯಾಕ್ಸಿ, ಸೆಕ್ಯೂರಿಟಿ ಗಾರ್ಡ್‌ಗಳು, ಬೀದಿ ಬದಿ ವ್ಯಾಪಾರ, ಮನೆಗೆಲಸ, ಕಟ್ಟಡ ಮುಂತಾದ ಅಸಂಘಟಿತ ಕಾರ್ಮಿಕರ ಸಾಲಿಗೆ ಸೇರುತ್ತಿದ್ದಾರೆ. ಕರ್ನಾಟಕದ ಗ್ರಾಮೀಣ ನಿರುದ್ಯೋಗಿ ಯುವಕರು ಮತ್ತು ನಗರದ ಅರೆ-ಉದ್ಯೋಗಿ ಮತ್ತು ನಿರುದ್ಯೋಗಿ ಯುವಕರು ಬೆಂಗಳೂರಿನಲ್ಲಿ ಆಪ್ ಆಧಾರಿತ ಕೆಲಸಗಳಲ್ಲಿ ತೊಡಗುತ್ತಿದ್ದಾರೆ. ಇಂತಹ ಅಸಂಘಟಿತ ಕಾರ್ಮಿಕರ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿದೆ. ಹೊರ ರಾಜ್ಯಗಳ ಮುಖ್ಯವಾಗಿ ಬಿಹಾರ, ಉತ್ತರ ಪ್ರದೇಶ, ಪಶ್ಚಿಮ ಬಂಗಾಳ, ಒರಿಸ್ಸಾ ರಾಜ್ಯಗಳ ಬಡವರು ಬೆಂಗಳೂರಿನ ಕಟ್ಟಡ ಕಾರ್ಮಿಕರಲ್ಲಿ ಗಣನೀಯವಾಗಿದ್ದಾರೆ. ಈಶಾನ್ಯ ರಾಜ್ಯಗಳ ಯುವಜನರು ಹೋಟೆಲ್ ಮತ್ತಿತರ ಕೆಲಸಗಳಲ್ಲಿ ಗಣನೀಯವಾಗಿದ್ದಾರೆ.

**ಕಾರ್ಮಿಕರಲ್ಲಿ ಪರಕೀಯ ಪ್ರಜ್ಞೆ**

ಬೆಂಗಳೂರಿನಲ್ಲಿ ಕಳೆದ ಒಂದು ದಶಕದಿಂದೀಚೆಗೆ ಕರ್ನಾಟಕದ ವಿವಿಧ ಜಿಲ್ಲೆಗಳಿಂದ ಬರುವ ಕಾರ್ಮಿಕರ ಸಂಖ್ಯೆ ಹೆಚ್ಚಾಗುತ್ತಿದೆ. ಗ್ರಾಮೀಣ ಊಳಿಗಮಾನ್ಯ ಮೌಲ್ಯಗಳ ಜೊತೆ ಬರುವ ಕಾರ್ಮಿಕರು ಬಹಳ ಬೇಗ ಜಾತಿ ಸಂಘಗಳ ಜೊತೆ ಗುರುತಿಸಿಕೊಳ್ಳುವುದನ್ನು ಕಾಣಬಹುದು. ಈಗಾಗಲೇ ಅಸ್ತಿತ್ವದಲ್ಲಿರುವ ಜಾತಿವಾರು ಸಂಘಗಳಿಗೆ ಇದರಿಂದ ಮತ್ತಷ್ಟು ಪುಷ್ಟಿ ಸಿಗುತ್ತಿದೆ. ಜಾತಿ ಮತ್ತು ಪ್ರದೇಶವಾರು ವಿಭಜನೆಯ ಪ್ರಜ್ಞೆಯನ್ನು ಹೆಚ್ಚಿನ ಆಡಳಿತ ವರ್ಗಗಳು ತಮ್ಮ ಅನುಕೂಲಕ್ಕೆ ಬಳಸಿಕೊಳ್ಳುತ್ತವೆ. ಕಾರ್ಮಿಕ ಸಂಘಗಳ ಐಕ್ಯತೆಗೆ ಇದರಿಂದ ತೊಡಕಾಗಿದೆ.

ಕಾರ್ಮಿಕರಲ್ಲಿ ತೀವ್ರವಾಗಿ ಬೆಳೆದಿರುವ ಮತ್ತೊಂದು ಪ್ರವೃತ್ತಿಯೆಂದರೆ ಕೋಮುವಾದ. ಇದರಲ್ಲಿ ಎರಡು ಪ್ರವೃತ್ತಿಗಳಿವೆ. ನೇರವಾಗಿ ಕೋಮುವಾದವನ್ನು ಬೆಂಬಲಿಸುವುದು, ಮತ್ತೊಂದು, ಆರ್ಥಿಕ ಪ್ರಶ್ನೆಗಳಲ್ಲಿ ಸರ್ಕಾರವನ್ನು ವಿರೋಧಿಸುವುದು. ಆದರೆ ಮತೀಯ ವಿಚಾರಗಳಲ್ಲಿ ಸರ್ಕಾರವನ್ನು ಬೆಂಬಲಿಸುವುದು. ಮೋದಿ ಸರ್ಕಾರದ ಮತೀಯ ವಿಭಜನೆಯ ತಂತ್ರಗಳಿಗೆ ಸಾಕಷ್ಟು ಕಾರ್ಮಿಕರು ಬಲಿಯಾಗಿರುವುದನ್ನು ಗಂಭೀರವಾಗಿ ಪರಿಗಣಿಸಬೇಕಾಗಿದೆ.

ಜಾತಿ ತಾರತಮ್ಯಗಳು ನಡೆದಾಗ, ಜಾತಿ ದೌರ್ಜನ್ಯಗಳು ಸಂಭವಿಸಿದಾಗ, ಹಿಂದೂ-ಮುಸ್ಲಿಂ ಗಲಭೆಗಳಾದಾಗ, ಗಣನೀಯ ಪ್ರಮಾಣದ ಕಾರ್ಮಿಕರು ಅಂತಹವುಗಳನ್ನು ಸಮರ್ಥಿಸುವುದನ್ನು ಕಾಣಬಹುದಾಗಿದೆ. ಈ ಬೆಳವಣಿಗೆಯು ಹೆಚ್ಚುತ್ತಿರುವ ಅಸಹನೆಯ ಭಾಗವಾಗಿದೆ. ಜಾತಿ ಪ್ರಜ್ಞೆ, ಮತೀಯ ಪ್ರಜ್ಞೆ ಮತ್ತು ಪ್ರಾದೇಶಿಕ ಸಂಕುಚಿತ ಪ್ರಜ್ಞೆಗಳಿಂದ ಕಾರ್ಮಿಕರನ್ನು ಹೊರತರದೇ ಇದ್ದಲ್ಲಿ, ಅವರಲ್ಲಿ ತೀವ್ರವಾದ ರೀತಿಯಲ್ಲಿ ಕಾರ್ಮಿಕ ಪ್ರಜ್ಞೆಯನ್ನು ಬೆಳೆಸದೇ ಇದ್ದಲ್ಲಿ, ಕಾರ್ಮಿಕ ಚಳುವಳಿಗೆ ಗಂಭೀರವಾದ ಸಮಸ್ಯೆಗಳು ಎದುರಾಗಲಿವೆ. ಇದು ಕಾರ್ಮಿಕರ ಐಕ್ಯತೆಗೆ ಮತ್ತು ವರ್ಗದ ನೆಲೆಯ ಹೋರಾಟಗಳಿಗೆ ಅಡ್ಡಿಯುಂಟು ಮಾಡುತ್ತದೆ.

**ಆಕರ್ಷಕ ರ್‍ಯಾಲಿ**

ಆಗಸ್ಟ್ 25 ರಂದು ಹೊಸೂರು ರಸ್ತೆಯ ಬೊಮ್ಮನಹಳ್ಳಿ ಸರ್ಕಲ್ ನಿಂದ ಮೆರವಣಿಗೆ ಆರಂಭಿಸಿದ ಸಿಐಟಿಯು ಕಾರ್‍ಯಕರ್ತರು ಕಾಲ್ನಡಿಗೆ ಮೂಲಕ ಮೂರು ಕಿಮೀ ಮೆರವಣಿಗೆ ನಡೆಸಿದರು. ಸಂಚಾರ ದಟ್ಟಣೆಗೆ ಅಡ್ಡಿಯಾಗದಂತೆ ಶಿಸ್ತುಬದ್ಧವಾಗಿ ಕೆಂಬಾವುಟಗಳೊಂದಿಗೆ ಸಾಗಿದ ಮೆರವಣಿಗೆ ಜನರ ಗಮನ ಸೆಳೆಯಿತು.

ಬೇಗೂರು ಸರ್ಕಾರಿ ಪ್ರೌಢಶಾಲಾ ಮೈದಾನದಲ್ಲಿ ನಡೆದ ಬಹಿರಂಗಸಭೆಯನ್ನು ಉದ್ದೇಶಿಸಿ ಸಿಐಟಿಯು ರಾಜ್ಯ ಕಾರ್ಯದರ್ಶಿ ಕೆ.ಎನ್.ಉಮೇಶ್ ಮಾತನಾಡಿದರು. ಜಿಲ್ಲಾಧ್ಯಕ್ಷ ಡಾ.ಕೆ.ಪ್ರಕಾಶ್ ಅಧ್ಯಕ್ಷತೆ ವಹಿಸಿದ್ದರು. ಬೇಗೂರು ವಾರ್ಡ್ ಬಿಬಿಎಂಪಿ ಸದಸ್ಯ ಎಂ.ಆಂಜನಪ್ಪ, ರಾಜ್ಯ ಕಾರ್‍ಯದರ್ಶಿ ಎನ್.ಪ್ರತಾಪ್ ಸಿಂಹ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಿ.ಎನ್. ಮಂಜುನಾಥ್, ಸ್ವಾಗತ ಸಮಿತಿ ಉಪಾಧ್ಯಕ್ಷರಾದ ಬಿಳೇಕಹಳ್ಳಿ ನಾರಾಯಣ, ಕನಕರಾಜ್ ಹಾಗು ಜಿಲ್ಲಾ ಪದಧಿಕಾರಿಗಳು ವೇದಿಕೆಯಲ್ಲಿದ್ದರು.

ಭಾಷಣದ ಮಧ್ಯೆ ಭೂಮ್ತಾಯಿ ಬಳಗದ ಗೆಳೆಯರು ಹಾಡಿದ ಹಾಡುಗಳು ಜನಮನ ಸೂರೆಗೊಂಡವು. ಕೊನೆಯಲ್ಲಿ 'ಯೂತ್ ಫಾರ್ ನೇಷನ್' ವೇದಿಕೆಯ ವಿದ್ಯಾರ್ಥಿಗಳು 'ನನ್ನೊಳಗೊಬ್ಬ ಭಗತ್‌ಸಿಂಗ್' ಎಂಬ ಕಿರುನಾಟಕ ಪ್ರದರ್ಶಿಸಿದರು.

**26 ಜನ ಪದಾಧಿಕಾರಿಗಳ ಸಮಿತಿ ಆಯ್ಕೆ:**

ಸಮ್ಮೇಳನದಲ್ಲಿ 26 ಜನ ಪದಾಧಿಕಾರಿಗಳ ನೂತನ ಸಮಿತಿ ಆಯ್ಕೆ ಮಾಡಲಾಯಿತು. ಅಧ್ಯಕ್ಷರಾಗಿ ಡಾ.ಪ್ರಕಾಶ್.ಕೆ., ಹಾಗು ಪ್ರಧಾನ ಕಾರ್ಯದರ್ಶಿಯಾಗಿ ಬಿ.ಎನ್. ಮಂಜುನಾಥ್ ಪುನರಾಯ್ಕೆಯಾದರು. ಖಜಾಂಚಿಯಾಗಿ ಟಿ.ಜೆ. ಥಾಮಸ್ ಆಯ್ಕೆಯಾದರು. ●

# ಜಾಗತಿಕ ಬಂಡವಾಳಶಾಹಿಯ ವ್ಯವಸ್ಥಾಗತ ಬಿಕ್ಕಟ್ಟು

ಪುಟ 13 ರಿಂದ

ಕೂಲಿಗಾರರ ಬಳಕೆಯ ಭಾಗವು, ಮಿಗುತಾಯ ಸಂಪಾದಿಸುವವರ ವರಮಾನದ ಪ್ರತಿ ಯೂನಿಟ್‌ನ ಬಳಕೆಯ ಭಾಗಕ್ಕಿಂತ ಬಹಳ ದೊಡ್ಡದಿರುತ್ತದೆ. ಅಗತ್ಯಕ್ಕಿಂತ ಅಧಿಕವಾಗಿ ಉತ್ಪಾದಿಸುವ ಈ ಪ್ರವೃತ್ತಿಯನ್ನು ಪ್ರತಿಯೊಂದು ದೇಶದೊಳಗೂ ಸರ್ಕಾರದ ವೆಚ್ಚಗಳನ್ನು ಏರಿಸುವ ಮೂಲಕ ಸರಿದೂಗಿಸಬಹುದಿತ್ತು. ಆದರೆ ಇದು ಸಾಧ್ಯವೇ ಇಲ್ಲದುದರಿಂದ, ಅಗತ್ಯಕ್ಕಿಂತ ಅಧಿಕವಾಗಿ ಉತ್ಪಾದಿಸುವ ಪ್ರವೃತ್ತಿಯನ್ನು ತಡೆಯುವ ಏಕ ಮಾತ್ರ ಸಾಧ್ಯತೆ ಎಂದರೆ, ಆಸ್ತಿಗಳ ಬೆಲೆ ಗುಳ್ಳೆಗಳನ್ನು ಎಬ್ಬಿಸುವುದು. ಇಂತಹ ಗುಳ್ಳೆಗಳು ಏಳದೆ ಇದ್ದಾಗ ಅಗತ್ಯಕ್ಕಿಂತ ಅಧಿಕವಾಗಿ ಉತ್ಪಾದಿಸುವ ಪ್ರವೃತ್ತಿಯು ಪೂರ್ಣ ಬಲದೊಂದಿಗೆ ಕೆಲಸಮಾಡುತ್ತದೆ. ನಾವೀಗ ನೋಡುತ್ತಿರುವುದು ಈ ವಿದ್ಯಮಾನವನ್ನೇ.

ಇಂತಹ ಪರಿಸ್ಥಿತಿಯಲ್ಲಿ ರೂಢಿಗತವಾಗಿ ಬಳಸುವ ಬಡ್ಡಿ ದರ ಇಳಿಸುವ ಉಪಕರಣವು ಪರಿಣಾಮಕಾರಿಯಾಗಿ ಕೆಲಸ ಮಾಡುವುದಿಲ್ಲ. ಆದ್ದರಿಂದ, ಒಟ್ಟಾರೆ ಬೇಡಿಕೆಯ ಕೊರತೆಯನ್ನು ಸರಿದೂಗಿಕೊಳ್ಳುವ ಪ್ರಯತ್ನವಾಗಿ, ಸರ್ಕಾರದ ವೆಚ್ಚಗಳನ್ನು ಹೆಚ್ಚಿಸಲಾರದ ಪರಿಸ್ಥಿತಿಯಲ್ಲಿ, ಡೊನಾಲ್ಡ್ ಟ್ರಂಪ್ ತಮ್ಮ ದೇಶ ಎದುರಿಸುತ್ತಿರುವ ಬಿಕ್ಕಟ್ಟಿನಿಂದ ಹೊರಬರಲು ರಕ್ಷಣಾತ್ಮಕ ಕ್ರಮಗಳನ್ನು ಅಳವಡಿಸಿಕೊಳ್ಳುವ ಮೂಲಕ ತಮ್ಮ ಬಿಕ್ಕಟ್ಟನ್ನು ಬೇರೆ ಬೇರೆ ದೇಶಗಳಿಗೆ, ಅದರಲ್ಲೂ ಮುಖ್ಯವಾಗಿ ಚೀನಾ ದೇಶಕ್ಕೆ, ರಫ್ತು ಮಾಡುತ್ತಿದ್ದಾರೆ ಚೀನಾದಿಂದ ಆಮದು ಮಾಡಿಕೊಳ್ಳುವ ಅನೇಕ ವಸ್ತುಗಳ ಮೇಲೆ ಟ್ರಂಪ್ ಶೇ.25ರಷ್ಟು ಸುಂಕ ಹೇರಿದ್ದಾರೆ. ಮುಯ್ಯಿಗೆ ಮುಯ್ಯಿ ಎಂಬಂತೆ ಅಮೇರಿಕಾದಿಂದ ಆಮದು ಮಾಡಿಕೊಳ್ಳುವ ಅನೇಕ ವಸ್ತುಗಳ ಮೇಲೆ ಚೀನಾ ಶೇ.25ರಷ್ಟು ಸುಂಕ ಹೇರಿದೆ.

ಬಿಕ್ಕಟ್ಟಿನಿಂದ ಹೊರಬರುವ ಸಾಧನವಾಗಿ ಅಮೇರಿಕಾ ಆರಂಭಿಸಿದ ಈ ವ್ಯಾಪಾರ ಸಮರವು ಇಡೀ ವಿಶ್ವದ ಅರ್ಥವ್ಯವಸ್ಥೆಯೇ ಬಿಕ್ಕಟ್ಟಿಗೆ ಒಳಗಾಗುವಂತೆ ಮಾಡಿದೆ, ಹೇಗೆಂದರೆ, ವಿಶ್ವದ ಬಂಡವಾಳಗಾರರಲ್ಲಿ ಕೆಲವರಿಗಾದರೂ ಹೂಡಿಕೆ ಮಾಡಲು ಇದ್ದ ಅಲ್ಪ ಸ್ವಲ್ಪ ಪ್ರೇರಣೆಯನ್ನೂ ಈ ವ್ಯಾಪಾರ ಸಮರವು ಒಳಗೊಳಗೇ ಕುಗ್ಗಿಸಿದೆ. ಆಸ್ತಿಗಳ ಬೆಲೆ ಗುಳ್ಳೆಗಳನ್ನು ಎಬ್ಬಿಸುವ ಉದ್ದೇಶದಿಂದ ಕೈಗೊಂಡ ಬಡ್ಡಿ ದರ ಇಳಿಕೆಯ ಕ್ರಮವು ಅಂದುಕೊಂಡದ್ದಕ್ಕಿಂತ ಭಿನ್ನವಾಗಿ ಪರಿಣಮಿಸಿದೆ – ವಿಶ್ವದ ಷೇರು ಮಾರುಕಟ್ಟೆಗಳು ಕುಸಿದು ಬೀಳುತ್ತಿವೆ. ಉದಾಹರಣೆಗೆ, ನ್ಯೂಯಾರ್ಕ್‌ನ ವಾಲ್ ಸ್ಟ್ರೀಟ್ ಷೇರು ಮಾರುಕಟ್ಟೆಯು ಆಗಸ್ಟ್ 14ರಂದು ಈ ವರ್ಷದ ಅತಿ ದೊಡ್ಡ ಕುಸಿತ ಕಂಡಿದೆ. ಅದನ್ನು ಹಿಂಬಾಲಿಸಿ ವಿಶ್ವದ ಷೇರು ಮಾರುಕಟ್ಟೆಗಳೂ ಕುಸಿದು ಬಿದ್ದಿವೆ.

ಪ್ರತಿಯೊಂದು ದೇಶದೊಳಗೂ ಸರ್ಕಾರದ ವೆಚ್ಚಗಳನ್ನು ಏರಿಸುವುದು ಸಾಧ್ಯವಾದರೆ, "ನನ್ನ ನೆರೆಯವನು ಹಾಳಾಗಲಿ" ಎನ್ನುವ ನೀತಿಯ ಅಗತ್ಯವಿಲ್ಲ. ಸರ್ಕಾರದ ವೆಚ್ಚಗಳಿಂದ ಉಂಟಾದ ಬೇಡಿಕೆ ಹೊರ ದೇಶಗಳಿಗೆ "ಸೋರಿಕೆ"ಯಾಗುವುದನ್ನು ತಡೆಯುವ ಉದ್ದೇಶದಿಂದ ಒಂದು ವೇಳೆ ರಕ್ಷಣಾತ್ಮಕ ಕ್ರಮಗಳನ್ನು ಅಳವಡಿಸಿಕೊಂಡರೂ ಸಹ, ಅದರಿಂದಾಗಿ ಬೇರೇ ದೇಶಗಳಿಂದ ಮಾಡಿಕೊಳ್ಳುವ ಆಮದುಗಳಲ್ಲಿ ಕಡಿತವಾಗುವುದಿಲ್ಲ, ಏಕೆಂದರೆ, ಮಾರುಕಟ್ಟೆಯು ತನ್ನಷ್ಟಕ್ಕೆ ತಾನೇ ಬೆಳೆಯುತ್ತಿರುತ್ತದೆ. ಆದರೆ. ಸರ್ಕಾರದ ವೆಚ್ಚಗಳು ಏರಿಕೆಯಾಗದ ಸಂರ್ಭದಲ್ಲಿ (ಅಂತಾರಾಷ್ಟ್ರೀಯ ಹಣಕಾಸು ಬಂಡವಾಳವು ಸರ್ಕಾರದ ವೆಚ್ಚಗಳ ಏರಿಕೆಯನ್ನು ವಿರೋಧಿಸುತ್ತದೆ; ಈ ಕಾರಣದಿಂದಾಗಿಯೇ ಬಹುತೇಕ ಎಲ್ಲಾ ದೇಶಗಳೂ ತಮ್ಮ ವಿತ್ತೀಯ ಕೊರತೆಗೆ ಮಿತಿಯನ್ನು ವಿಧಿಸುವ ಕಾನೂನು ತಂದಿವೆ), ಒಂದು ದೇಶವು ಅನುಸರಿಸಬಹುದಾದ ನೀತಿಯನ್ನು ಆಯ್ದುಕೊಳ್ಳಲು



ಆ ದೇಶಕ್ಕೆ "ನನ್ನ ನೆರೆಯವನು ಹಾಳಾಗಲಿ" ಎನ್ನುವ ನೀತಿಯನ್ನು ಬಿಟ್ಟರೆ ಬೇರೆ ಆಯ್ಕೆಯೇ ಇಲ್ಲ ಎಂಬಂತಾಗಿದೆ. ಇದರಿಂದಾಗಿ ಎಲ್ಲ ದೇಶಗಳ ಬಿಕ್ಕಟ್ಟಿನ ಪರಿಸ್ಥಿತಿ ಮತ್ತಷ್ಟು ಹದಗೆಡುತ್ತದೆ.

ನಿಖರವಾಗಿ ಹೇಳುವುದಾದರೆ, ಈ ಪರಿಸ್ಥಿತಿಯೇ ನವ ಉದಾರ ಬಂಡವಾಳಶಾಹಿಯ ವ್ಯವಸ್ಥಾಗತ ಬಿಕ್ಕಟ್ಟಿನ ಹೆಗ್ಗುರುತು. ಎಲ್ಲಿಯವರೆಗೆ ಹಣಕಾಸು ಬಂಡವಾಳದ ಯಜಮಾನಿಕೆ ಮುಂದುವರೆಯುತ್ತದೆಯೋ ಮತ್ತು ಜಾಗತಿಕ ಹಣಕಾಸಿನ ಹರಿವಿನ ಸುಳಿಗೆ ಸಿಕ್ಕಿದ ದೇಶ ದೇಶಗಳು ಆ ಸುಳಿಯಲ್ಲಿಯೇ ಉಳಿಯುತ್ತವೆಯೋ ಅಲ್ಲಿಯವರೆಗೆ ಈ ಬಿಕ್ಕಟ್ಟೂ ಮುಂದುವರೆಯುತ್ತದೆ. ಈ ಬಿಕ್ಕಟ್ಟನ್ನು ಪರಿಹರಿಸಲು ಸಾಧ್ಯವಿರುವ ಎಷ್ಟು ಪ್ರಯತ್ನಗಳನ್ನು ಮಾಡಿದರೂ ಬಿಕ್ಕಟ್ಟು ಮತ್ತಷ್ಟು ಹದಗೆಡುತ್ತದೆ. ಅಂತಾರಾಷ್ಟ್ರೀಯ ಹಣಕಾಸು ಬಂಡವಾಳದ ಯಜಮಾನಿಕೆಯಿಂದ ಹೊರ ಬರಲು, ಪ್ರತಿಯೊಂದು ದೇಶದ ಒಳಗೂ, ಒಂದು ಪರ್ಯಾಯ ಅಜೆಂಡಾದೊಂದಿಗೆ ದುಡಿಯುವ ಜನತೆಯನ್ನು ಅಣಿನೆರೆಸಬೇಕಾಗುತ್ತದೆ. ●

## ಜಗತ್ತಿನ ಶ್ವಾಸಕೋಶದಂತಿರುವ

# ಅಮೆಜಾನ್ ಹೊತ್ತಿ ಉರಿಯುತ್ತಿರುವಾಗ, ಬೊಲ್ಸೊನಾರೊ ಪಿಟಿಲು



ಇಡೀ ಜಗತ್ತಿನ ಶ್ವಾಸಕೋಶದಂತಿರುವ ಬ್ರೆಜಿಲ್ ನ ಅಮೆಜಾನ್ ಕಾಡುಗಳು ಹೊತ್ತಿ ಉರಿಯುತ್ತಿವೆ. ಇದು ಫ್ರಾನ್ಸ್ ನ ಬಿಯಾರಿಟ್ಜ್ ನಲ್ಲಿ ನಡೆದ ಜಿ–7 ಶೃಂಗ ಸಭೆಯಲ್ಲಿ ತೀವ್ರ ಚರ್ಚೆಗೆ ಗ್ರಾಸವಾಯಿತು. ಬ್ರೆಜಿಲ್ ನ ಬಲಪಂಥೀಯ ಅಧ್ಯಕ್ಷ ಬೊಲ್ಸೊನಾರೊ ಪ್ರಕಾರ ಈ ಬೇಸಿಗೆಯೊಂದರಲ್ಲೇ ಸುಮಾರು 72,843 ಕಾಡ್ಗಿಚ್ಚುಗಳು ಸಂಭವಿಸಿವೆ. ಒಟ್ಟಾರೆ ಬೆಂಕಿಯ ಪ್ರಮಾಣ ಕಳೆದ ವರ್ಷದ ಬೇಸಿಗೆ ಗಿಂತ ಶೇ. 84 ರಷ್ಟು ಹೆಚ್ಚುವರಿ ಎಂದು ಪರಿಸರವಾದಿಗಳು ಅಂದಾಜಿಸಿದ್ದಾರೆ. ಸಾವೊ ಪೊವಲ್ ವಿಶ್ವವಿದ್ಯಾಲಯದ ಪರಿಸರ ವಿದ್ವಾಂಸ ಕಾರ್ಲೋಸ್ ನೊಬ್ರೆ ಪ್ರಕಾರ ಈಗಾಗಲೇ, 10,000 ಚದರ ಕಿಲೋಮೀಟರ್ ಗಿಂತಲೂ ಹೆಚ್ಚು ಕಾಡು ಸುಟ್ಟು ಹೋಗಿದೆ.

ದೊಡ್ಡ ಪ್ರಮಾಣದಲ್ಲಿ ಪರಿಸರವಾದಿಗಳೇ ಅಂದರೆ, ಎನ್.ಜಿ.ಓ.ಗಳು ಈ ಕಾಡಿಗೆ ಬೇಕೆಂತಲೇ ಬೆಂಕಿ ಹಚ್ಚಿ ಸುಟ್ಟು ಹಾಕಿ, ನಮ್ಮ ಆಡಳಿತದ ಮೇಲೆ ಗೂಬೆ ಕೂರಿಸಲು ಪ್ರಯತ್ನ ಮಾಡುತ್ತಿದ್ದಾರೆ. ಇದರಲ್ಲಿ ಬ್ರೆಜಿಲಿನ ಜನರಿಗಿಂತ, ಬಾಹ್ಯ ಶಕ್ತಿಗಳು ಹೆಚ್ಚಾಗಿದ್ದಾರೆ. ಬ್ರೆಜಿಲ್ ನ ಅದ್ಯಕ್ಷ ಬೊಲ್ಸೊನಾರೊ ರ ಪರಿಸರ ವಾದಿಗಳ ಮೇಲೆ ಮಾಡಿರುವ ಇಂತಹ, ಸುಳ್ಳು ಅತಿರೇಕ ಆಪಾದನೆಗಳನ್ನು ಪರಿಸರ ವಿದ್ವಾಂಸರು ತಿರಸ್ಕಾರ ಮಾಡಿದ್ದಾರೆ. ಅಪಾದನೆಗಳಿಗೆ ಯಾವುದೇ ಸಾಕ್ಷ್ಯಾಧಾರಗಳು ಇಲ್ಲದ ಕಾರಣ, ಬೊಲ್ಸೊನಾರೊ ರ ಆಪಾದನೆಗಳ ವಿರುದ್ದ ಬ್ರೆಜಿಲ್ ನಲ್ಲಿ ಪ್ರತಿಭಟನೆಗಳು ನಡೆದಿವೆ. ಬೊಲ್ಸನಾರೊ ಅವರ ಈ ವಿಕ್ಷಿಪ್ತ ಹೇಳಿಕೆ, ರೋಮ್ ಹತ್ತಿ ಉರಿಯುತ್ತಿದ್ದಾಗ ದೊರೆ ನಿರೋ ಪಿಟೀಲು ಬಾರಿಸುತ್ತಿದ್ದಂತಿದೆ. ಇದು ವಿಶ್ವದ ಉನ್ನತ ಕೈಗಾರಿಕೀಕರಣ ರಾಷ್ಟ್ರಗಳ ನಾಯಕರ ನಡುವೆ ಈ ಬಾರಿಯ ಜಿ–7 ಸಭೆಯಲ್ಲಿ ಚರ್ಚಾ ವಸ್ತುವಾಗಿ ಪರಿಣಮಿಸಿದೆ. ಪರಿಸರ ರಕ್ಷಣೆಗೆ ಸೂಕ್ತ ಕ್ರಮಗಳನ್ನು ಕೈಗೊಂಡು, ಈ ಕಾಡ್ಗಿಚ್ಚು ತಡೆಗಟ್ಟ ಬೇಕೆಂದು ಜಿ–7 ಸಭೆಯ ಸಮಯದಲ್ಲಿ ಫ್ರಾನ್ಸ್ ನಲ್ಲಿಯು ಪ್ರತಿಭಟನೆಗಳು ನಡೆದಿವೆ. ಇದರಲ್ಲಿ ಬ್ರೆಜಿಲ್ ನ ಗುಡ್ಡ ಗಾಡು ಪ್ರದೇಶದಲ್ಲಿ ವಾಸಿಸುವ ಜನಾಂಗೀಯರು ಹೆಚ್ಚಾಗಿ ಮಹಿಳೆಯರು ಮತ್ತು ಫ್ರಾನ್ಸ್ ನ ಹಳದಿ ನಡುವಂಗಿ ಹೋರಾಟಗಾರರು ಭಾಗವಹಿಸಿದ್ದಾರೆ.

ಅಮೆಜಾನ್ ಕಾಡ್ಗಿಚ್ಚಿನ ಹಿನ್ನೆಲೆಯಲ್ಲಿ ಹಲವಾರು ಯುರೋಪಿಯನ್ ಸರ್ಕಾರಗಳು, ಬ್ರೆಜಿಲಿಯನ್ ನ ಕೆಲವು ಉತ್ಪನ್ನಗಳ ಆಮದನ್ನು ಬಹಿಷ್ಕರಿಸುವ ಆಲೋಚನೆಯನ್ನು ಮುಂದಿಟ್ಟಾಗ, ಬೊಲ್ಸೊನಾರ್ ರವರು ಅಮೆಜಾನ್ ಕಾಡುಗಳು ಬ್ರೆಜಿಲ್ ಗೆ ಸೇರಿವೆ. ಇದು ಬೇರೆಯವರ ವ್ಯವಹಾರವಲ್ಲವೆಂದು ಹೇಳುತ್ತಾರೆ. ಆದರೆ, ಬ್ರೆಜಿಲ್ ನೊಳಗೆ ಇವರ ನೀತಿಗಳ ವಿರುದ್ಧ ನಡೆಯುತ್ತಿರುವ ಪ್ರತಿಭಟನೆಗಳಿಗೆ ಇವರ ಬಳಿ ಉತ್ತರವಿಲ್ಲ ಏಕೆ? ಬದಲಿಗೆ, ಕಾಡಿನ ಬೆಂಕಿಯ ವಿರುದ್ಧ ನಡೆಯುವ ಪ್ರತಿಭಟನೆಗಳನ್ನು ಎದುರಿಸಲು ಮಿಲಿಟರಿಯನ್ನು ಸಜ್ಜುಗೊಳಿಸುವುದಾಗಿ ಬೆದರಿಕೆ ಒಡ್ಡಿದ್ದಾರೆ.

ಯುಎಸ್ ಅದ್ಯಕ್ಷ ಟ್ರಂಪ್ ಹಾಗೂ ಬೊಲ್ಸೊನಾರೊ, ಹವಾಮಾನ ಬದಲಾವಣೆಯ ಪುರಾವೆಗಳನ್ನು ನಂಬಲು ನಿರಾಕರಿಸುತ್ತಾರೆ.




ಆದಾಗ್ಯೂ, ಕಾಡ್ಗಿಚ್ಚಿನ ವ್ಯಾಪ್ತಿಯ ಬಗ್ಗೆ ಬ್ರೆಜಿಲ್ ಬಾಹ್ಯಕಾಶ ಸಂಸ್ಥೆ ಆನ್ ಲೈನ್ ಮೂಲಕ ಉಪಗ್ರಹ ಪೋಟೋಗಳನ್ನು ಪೋಸ್ಟ್ ಮಾಡಿದಾಗ, ಬೊಲ್ಸೊನಾರೊ ಏಜೆನ್ಸಿ ಮಂತ್ರಿಯನ್ನು ವಜಾ ಮಾಡಿದ್ದಾರೆ.

ಕಾಡ್ಗಿಚ್ಚುಗಳು ಅಗಾಧವಾದ ಪರಿಸರ ಸಮಸ್ಯೆಗಳನ್ನು ಹುಟ್ಟಿ ಹಾಕುತ್ತವೆ. ಅಮೆಜಾನ್ ಮಳೆಗಾಡು ಎಷ್ಟು ದೊಡ್ಡದಾಗಿದೆ ಎಂದರೆ, ಅದರ ಎಲೆಗಳು ದ್ಯುತಿಸಂಶ್ಲೇಷಣೆಯ ಮೂಲಕ ಇಂಗಾಲದ ಡೈಆಕ್ಸೈಡ್ ಅನ್ನು ಪರಿವರ್ತಿಸಿ ವಿಶ್ವಕ್ಕೆ ಅವಶ್ಯವಿರುವ ಒಟ್ಟಾರೆಯ ಆಮ್ಲಜನಕದಲ್ಲಿ ಶೇ.20 ರಷ್ಟು ಆಮ್ಲಜನಕವನ್ನು, ಅಮೆಜಾನ್ ಮಳೆಗಾಡುಗಳೇ ಉತ್ಪತ್ತಿ ಮಾಡುತ್ತವೆ. ಆಮ್ಲಜನಕವಿಲ್ಲದೆ, ಪ್ರಾಣಿಗಳು ಮತ್ತು ಮನುಷ್ಯರು ಬದಕಲು ಅಸಾಧ್ಯವೆಂಬುದು ತಿಳಿದಿರುವ ಸಂಗತಿ. ಆದ್ದರಿಂದ ಅಮೆಜಾನ್ ಕಾಡುಗಳು ವಿಶ್ವದ ಶ್ವಾಸಕೋಶಗಳಿದ್ದಂತೆ. ಅದು ಬೆಂಕಿಯಿಂದ ಹೊತ್ತಿ ಉರಿಯುವಾಗ ವಿಶ್ವವು ಅಕ್ಷರಶಃ ತನ್ನ ಉಸಿರಾಟಕ್ಕಾಗಿ ವಿಲವಿಲ ಒದ್ದಾಡಿದಂತೆ.

ವಿಶ್ವದ ಕೈಗಾರಿಕಾ ಬೃಹತ್ ರಾಷ್ಟ್ರಗಳ ನಾಯಕರು ಜಿ–7 ನಲ್ಲಿ, ಪ್ರಾನ್ಸ್ ನ ರೆಸಾರ್ಟ್ ನಗರ ಬಿಯಾರಿಟ್ಜ್ ನಲ್ಲಿ ಭೇಟಿಯಾದ ಸಂದರ್ಭದಲ್ಲಿ, ನಡೆದ ಪ್ರತಿಭಟನೆಗಳಲ್ಲಿ ಈ ಜಿ–7 ರಾಷ್ಟ್ರಗಳ ಬಂಡವಾಳಶಾಹಿ–ಪರ ಕೈಗಾರಿಕೀಕರಣ ಶೋಷಣಾ ನೀತಿಗಳೇ, ಈ ಕಾಡ್ಗಿಚ್ಚಿಗೆ ಮೂಲ ಕಾರಣವೆಂದು ಪ್ರತಿಭಟನಾಕಾರರು ಬಲವಾಗಿ ಟೀಕಿಸಿದ್ದಾರೆ. ಇದು ಬ್ರೆಜಿಲ್ ನ ಸಮಸ್ಯೆ ಮಾತ್ರವಲ್ಲ, ವಿಶ್ವ ಪರಿಸರಕ್ಕೆ ಇಡೀ ಮನುಕುಲಕ್ಕೆ ಸಂಬಂಧಿಸಿದ್ದು ಎಂಬ ವಾದ ಪರಿಸರ ವಾದಿಗಳದ್ದು.

ಈ ನಡುವೆ ಫ್ರಾನ್ಸಿನ ಅಧ್ಯಕ್ಷ ಅಮೆಜಾನ್ ಕಾಡ್ಗಿಚ್ಚಿನ ಬಗ್ಗೆ ಮಾಡಿದ ಹೇಳಿಕೆಗಳು ಬ್ರೆಜಿಲಿಗೆ ಅವಮಾನ. ಅವರು ಅದಕ್ಕಾಗಿ ಕ್ಷಮೆ ಕೇಳದಿದ್ದರೆ, ಜಿ–7 ಕಾಡ್ಗಿಚ್ಚು ನಿಯಂತ್ರಣಕ್ಕೆ ನೆರವಿಗೆ ಕೊಡುವ ಸಹಾಯಧನ ತೆಗೆದುಕೊಳ್ಳುವುದಿಲ್ಲ ಎಂಬ ಬ್ರೆಜಿಲ್ ಅಧ್ಯಕ್ಷ ಬೊಲ್ಸೊನಾರೊ ಅವರ ಪ್ರಹಸನವೂ ನಡೆದು ಹೋಯಿತು.




### ಕಾರ್ಪೋರೇಟ್ ಬೆಂಬಲಿತ ಉಗ್ರ ಅಧ್ಯಕ್ಷ

ಬ್ರೆಜಿಲಿನ ಅಧ್ಯಕ್ಷರಾದ ಬೊಲ್ಸೊನಾರೊ ರನ್ನು" "ಬ್ರೆಜಿಲಿನ ಟ್ರಂಪ್" ಎಂದು ಪರಿಸರವಾದಿಗಳು ಟೀಕಿಸುತ್ತಾರೆ. ಇದಕ್ಕೆ ಕಾರಣಗಳು ಉಂಟು. ಇವರೊಬ್ಬ ಕಾರ್ಪೋರೇಟ್ ಬೆಂಬಲಿತ ಉಗ್ರ ಸ್ವರೂಪಿ ಅದ್ಯಕ್ಷ. 2018ರ ಚುನಾವಣಾ ಪ್ರಚಾರದ ಸಮಯದಲ್ಲಿ ಸ್ವಚ್ಛ ಆಡಳಿತ ನೀಡುವುದಾಗಿ ಹೇಳಿಕೊಂಡ್ಡಿದ್ದ ಬೊಲ್ಸೊನಾರೊ ರವರು, ಸಾವೊ ಪಾಲೊ ದ ಮಾಜಿ ಮೇಯರ್ ಫರ್ನಾಂಡೊ ಹಡ್ಡಾದ್ ಅವರ, ನಡು–ಎಡ–ಕಾರ್ಮಿಕ ಪಕ್ಷದ ಮೈತ್ರಿ ಉಮೇದುವಾರಿಕೆಯ ವಿರುದ್ಧ, ಉಗ್ರಗಾಮಿ ಬಲಪಂಥೀಯ ಲಿಬರಲ್ ಪಕ್ಷದ ಅಭ್ಯರ್ಥಿಯಾಗಿ ಎರಡನೇ ಸುತ್ತಿನಲ್ಲಿ ಶೇ 55 ರಷ್ಟು ಮತ ಪಡೆದು ಚುನಾಯಿತರಾಗಿ, ಅಧ್ಯಕ್ಷರಾದವರು. ಭ್ರಷ್ಟಾಚಾರದ ಸುಳ್ಳು ಹಗರಣಗಳ ಹೆಸರಿನಲ್ಲಿ, ನಡು–ಎಡ–ಕಾರ್ಮಿಕರ ಪಕ್ಷದ ಮಾಜಿ ಅದ್ಯಕ್ಷ ಲೂಲಾ ರವರನ್ನು ಜೈಲಿಗೆ ಕಳುಹಿಸಿದ ಕಾರಣ, ಬೊಲ್ಸೊನಾರೊ ಗೆದ್ದರು, ಲೂಲಾರವರೇ ಚುನಾವಣಾ ಕಣದಲ್ಲಿ ಇದ್ದಿದ್ದರೆ, ಬೊಲ್ಸೊನಾರ್ ಗೆಲ್ಲುವುದು ಕಷ್ಟವಿತ್ತು ಎಂದು ಹಲವಾರು ಸಮೀಕ್ಷಾ ವರದಿಗಳು ಹೇಳಿದ್ದವು ಎಂಬುದನ್ನು ಇಲ್ಲಿ ನೆನಪಿಸಿ ಕೊಳ್ಳಬೇಕು.

ಬೊಲ್ಸೊನಾರೊ ವಾಸ್ತವವಾಗಿ ಬ್ರೆಜಿಲ್ ದೇಶೀಯ ರಾಜಕೀಯದ ಪ್ರಮುಖ ಅಂಶಗಳಾದ, "ದನ, ಬೈಬಲ್ ಮತ್ತು ಬಾಂಬು' (ಬೋಯಿ, ಬಿಬ್ಲಿಯ ಮತ್ತು ಬುಲೆಟ್) ಹಿತಾಸಕ್ತಿಗಳ ರಕ್ಷಣೆ ಮಾಡುವುದಾಗಿ ಪ್ರತಿಪಾದಿಸಿದ್ದಾರೆ. ಇವೆಲ್ಲವೂ ದೇಶೀಯ ಮತ್ತು ಅಂತರಾಷ್ಟ್ರೀಯ ಏಕಸ್ವಾಮ್ಯ ಬಂಡವಾಳದ ಪ್ರಮುಖ ಪ್ರತಿಗಾಮಿ ಅಂಶಗಳಾಗಿವೆ. ಮೊದಲನೆಯದಾಗಿ, ದನ ಅಂದರೆ, ಜಾನುವಾರು ಸಾಕಣೆ ಹಿತಾಸಕ್ತಿಗಳಿಂದ ಮೊದಲು ಗೊಂಡು, ಅಮೆಜಾನ್ ಕಾಡಿನ ಅರಣ್ಯನಾಶದ ವರೆವಿಗೂ ವಿಸ್ತರಿಸಿರುವ ಬೊಲ್ಸೊನಾರ್ ರ ಪ್ರಮುಖ ಕಾರ್ಯಸೂಚಿ. ಎರಡನೆಯದು, ಬೈಬಲ್ ಎಂದರೆ ಬುಡಕಟ್ಟು ಮಹಿಳೆಯರು ಮತ್ತು ಎಲ್.ಜಿ.ಬಿ.ಟಿ.ಕ್ಯೂ ಸಮುದಾಯ ತಮ್ಮ ಹಕ್ಕುಗಳಿಗಾಗಿ ನಡೆಸುತ್ತಿರುವ ಹೋರಾಟದ ಅಭಿಯಾನವನ್ನು ನಾಶಗೊಳಿಸಲು, ಬಲಪಂಥೀಯ ಇವಾಂಜೆಲಿಕಲ್ ಕ್ರಿಶ್ಚಿಯನ್ ರ ಹೂಡಿಕೆಯನ್ನು ಪ್ರೋತ್ಸಾಹಿಸುವುದು. ಮೂರನೆಯದು, ಬುಲೆಟ್ ನ ನಿಜವಾದ ಅರ್ಥವೆಂದರೆ, ಕಡಿಮೆ ಪ್ರಮಾಣದ ಪ್ರಜಾಪ್ರಭುತ್ವ, ಮತ್ತು ಸಾಮಾಜಿಕ ನ್ಯಾಯ ಹಾಗೂ ಹೆಚ್ಚು ದಮನಕಾರಿ ಪ್ರವೃತ್ತಿಯನ್ನು ಹತ್ತಿಕ್ಕಲು ಬಯುಸುವ ಪ್ರಮುಖ ವಾಗಿ ಮಾಜಿ ಹಾಗೂ ಸಕ್ರಿಯ ಮಿಲಿಟರಿ ಮತ್ತು ಪೋಲೀಸ್ ಅಧಿಕಾರಿಗಳ ಹಿತಾಸಕ್ತಿಗಳನ್ನು ಕಾಯ್ದಿರಿಸುವುದು.




ನಾಗರಾಜ ನಂಜುಂಡಯ್ಯ

ಬೊಲ್ಸೊನಾರೊ ಮತ್ತು ಟ್ರಂಪ್ ಅವರ ವಿಚಾರಗಳು ಬಹಳ ಹೋಲುತ್ತವೆ. ಅವುಗಳಲ್ಲಿ, ವರ್ಣಭೇದ ನೀತಿ, ಲಿಂಗ ಬೇಧಬಾವ, ಸಲಿಂಗಕಾಮ–ಭೀತಿ ಮತ್ತು ಕಮ್ಯೂನಿಸ್ಟ್ ವಿರೋಧಿಯಾದ ಪ್ರಚೋದನಾಕಾರಿ ಮತ್ತು ಉಗ್ರಗಾಮಿ ನಿಲುವುಗಳನ್ನು ಈ ಇಬ್ಬರೂ ಹೊಂದಿರುವುದು. ಒಮ್ಮೊಮ್ಮೆ, 1964 ರಿಂದ1985 ರವರೆಗೂ, ಬ್ರೆಜಿಲ್ ಅನ್ನು ಆಳಿದ ಹಿಂಸಾತ್ಮಕ ಮಿಲಿಟರಿ ಸರ್ವಾಧಿಕಾರ ಆಡಳಿತವನ್ನು ಬೊಲ್ಸೊನಾರೊ ಜೋರಾಗಿ ಹೊಗಳುತ್ತಿರುತ್ತಾರೆ.

ಕಾರ್ಪೋರೇಟ್ ಕೃಷಿ ಮತ್ತು ಗಣಿಗಾರಿಕೆ ಹಿತಾಸಕ್ತಿಗಳ ರಕ್ಷಣೆಗಾಗಿ ಪಣತೊಟ್ಟಿರುವ ಬೊಲ್ಸೊನಾರ್, ಬ್ರೆಜಿಲ್ ನ 9 ಲಕ್ಷ ಅಮೆಜೋನಿಯನ್ ಸ್ಥಳೀಯ ಸಮುದಾಯಗಳಿಗೆ ಮೀಸಲಾಗಿರವ ಪ್ರದೇಶಗಳನ್ನು ಕಾರ್ಪೋರೇಟ್ ವಲಯಕ್ಕೆ ಜಾನುವಾರು ಸಾಗಾಣಿಕೆ ಮತ್ತು ಗಣಿಗಾರಿಕೆಗೆ ತೆರೆಯುವ ಉದ್ದೇಶವನ್ನು ಬೊಲ್ಸೊನಾರೊ ಮತ್ತು ಅವನ ಪರಿಸರ ಮಂತ್ರಿ ಈಗಾಗಲೇ ಘೋಷಿಸಿದ್ದಾರೆ. ಎಷ್ಟೋ ಕಡೆ ಕಾಡಿಗೆ ಬೆಂಕಿ ಕೊಡುವುದು ಇಂತಹ ಪಟ್ಟಭದ್ರ ಹಿತಾಸಕ್ತಿಗಳೇ. ಅಲ್ಲದೆ ಅರಣ್ಯ ರಕ್ಷಣೆಯ ಸಿಬ್ಬಂದಿಯಲ್ಲಿ ತೀವ್ರ ಕಡಿತ ಸಹ ಅಭೂತಪೂರ್ವ ಬೆಂಕಿ ಹರಡುವುದಕ್ಕೆ ಕಾರಣವಾಗಿದೆ.

ಅಮೆಜಾನ್ ಅನ್ನು ಧ್ವಂಸಗೊಳಿಸುವ ಅಭೂತಪೂರ್ವ ಬೆಂಕಿ ಅಂತರರಾಷ್ಟ್ರೀಯ ದುರಂತ ಮತ್ತು ಹವಾಮಾನ ಅವ್ಯವಸ್ಥೆಗೆ ಅಪಾಯಕಾರಿ ಕೊಡುಗೆಯಾಗಿದೆ. ಈ ವಿನಾಶವು ಅದ್ಯಕ್ಷ ಬೊಲ್ಸೊನಾರೊ ಅವರ ಪರಿಸರ ವಿರೋಧಿ ಧೊರಣೆಗಳಿಗೂ ನೇರವಾಗಿ ಸಂಬಂಧಿಸಿದೆ. •

JANASHAKTHI KANNADA VARA PATRIKE September 2-8, 2019 Price: Rs. 10/- Date of Publication: 30 August 2019 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at Bangalore PSO, BG - 560026 Licensed to Post without prepayment License No. WPP-283




# ನವೋದ್ಯಮದಲ್ಲಿ ಅತಂತ್ರ ಕಾರ್ಮಿಕರು ಹೊಸ ಸವಾಲಿನೊಂದಿಗೆ ಚಳುವಳಿ ಕಟ್ಟುವ ಸಂಕಲ್ಪ

ಲಿಂಗರಾಜು

ಬೆಂಗಳೂರು ದಕ್ಷಿಣ ಜಿಲ್ಲೆಯ ಸಿಐಟಿಯು 12ನೇ ಸಮ್ಮೇಳನವು 25 – 26 ಆಗಸ್ಟ್ 2019 ರಂದು ನಗರದ ಬೊಮ್ಮನಹಳ್ಳಿ ಪ್ರದೇಶದಲ್ಲಿ ನಡೆಯಿತು. ಬೆಂಗಳೂರು ನಗರದಲ್ಲಿ ತಂತ್ರಜ್ಞಾನ ಮತ್ತು ಕೈಗಾರಿಕಾ ಬೆಳವಣಿಗೆಯು ಉದ್ಯೋಗದ ಸ್ವರೂಪವನ್ನೇ ಸಂಪೂರ್ಣವಾಗಿ ಬದಲಾಯಿಸುವ ಬೆಳವಣಿಗೆಗಳು ಘಟಿಸುತ್ತಿರುವ ಹಿನ್ನೆಲೆಯಲ್ಲಿ ಸಮ್ಮೇಳನದಲ್ಲಿ ಗಂಭೀರವಾದ ಚರ್ಚೆಗಳು ನಡೆದಿವೆ. ಅದರ ಸಂಕ್ಷಿಪ್ತ ವರದಿ.

ಬೆಂಗಳೂರು ತನ್ನ ಒಟ್ಟಾರೆ ಜಿಡಿಪಿಯ ಆಧಾರದಲ್ಲಿ ದೇಶದಲ್ಲಿ 4 ನೇ ಸ್ಥಾನದಲ್ಲಿದೆ. ಮುಂಬೈ, ದೆಹಲಿ ಮತ್ತು ಕೊಲ್ಕೊತ್ತಾ ನಂತರ ಇರುವ ಬೆಂಗಳೂರಿನ 5 ಲಕ್ಷದ 81 ಸಾವಿರ ಕೋಟಿ ರೂಗಳು. 2011 ರಲ್ಲಿ ಇದು 99,325 ಕೋಟಿ ರೂಗಳಷ್ಟಿತ್ತು. ರಾಜ್ಯದ ಒಟ್ಟಾರೆ ಆರ್ಥಿಕತೆಗೆ ಬೆಂಗಳೂರು ಸಿಂಹಪಾಲನ್ನು ಒದಗಿಸುತ್ತಿದೆ. ಒಂದು ಅಂದಾಜಿನ ಪ್ರಕಾರ ಇದು ಶೇ.87 ರಷ್ಟಿದೆ.

**ಕೈಗಾರಿಕಾ ಪರಿಸ್ಥಿತಿ**

ಕರ್ನಾಟಕದಲ್ಲಿ ಪ್ರಸ್ತುತ 69,278 ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ **(MSME-Micro, Small and Medium Enterprises)** ನೋಂದಾಯಿತ ಕೈಗಾರಿಕೆಗಳಿದ್ದು, ಅದರಲ್ಲಿ 14,877 ಕೋಟಿ ರೂ. ಬಂಡವಾಳ ಹೂಡಿಕೆಯಾಗಿದೆ. ಇವುಗಳಲ್ಲಿ 5,82,943 ಕಾರ್ಮಿಕರು ಇದ್ದಾರೆ. ಕರ್ನಾಟಕದ ಶೇ.42 ರಷ್ಟು ಒಖಒಇ ಕೈಗಾರಿಕೆಗಳು ಮತ್ತು ಇವುಗಳಲ್ಲಿ ಕೆಲಸ ಮಾಡುವ ಶೇ.54 ರಷ್ಟು ಕಾರ್ಮಿಕರು ಬೆಂಗಳೂರು ನಗರ ಮತ್ತು ರಾಮನಗರ ಜಿಲ್ಲೆಗಳಲ್ಲಿ ಇದ್ದಾರೆ. ಇದರಲ್ಲಿ ಬಹುತೇಕ ಕಾರ್ಮಿಕರು ಸಂಘಟಿತರಾಗಿಲ್ಲ ಮತ್ತು ಬಹುತೇಕರಿಗೆ ಕಾರ್ಮಿಕ ಕಾನೂನುಗಳ ರಕ್ಷಣೆಯಾಗಲೀ ಅಥವಾ ಸುರಕ್ಷತೆಯಾಗಲೀ ಇಲ್ಲ.

**ಐಟಿ ಉದ್ಯಮ**

ಕರ್ನಾಟಕದ ಆರ್ಥಿಕತೆಯ ಪ್ರಮುಖ ಉದ್ಯಮವಾಗಿ ಬೆಳೆದಿರುವ ಐಟಿ ರಂಗವು ಬೆಂಗಳೂರಿನಲ್ಲಿ ಕೇಂದ್ರೀಕೃತವಾಗಿದೆ. ಸಾಫ್ಟ್‌ವೇರ್ ರಫ್ತನ್ನು ಪ್ರೋತ್ಸಾಹಿಸುವ ಹೆಸರಿನಲ್ಲಿ ಅತ್ಯಂತ ವೇಗದ ಸಂಪರ್ಕ ಸೇವೆಗಳನ್ನು ಒದಗಿಸಲು ಸ್ಯಾಟಲೈಟ್ ಅರ್ಥ್ ಸ್ಟೇಷನ್‌ನನ್ನು 1992 ರಲ್ಲೇ ಸ್ಥಾಪಿಸಿದ ಮೊದಲ ನಗರವೆಂಬ ಹೆಸರು ಬೆಂಗಳೂರಿಗಿದೆ.

ಬೆಂಗಳೂರನ್ನು "ಐಟಿ ರಾಜಧಾನಿ" "ಸಿಲಿಕಾನ್ ವ್ಯಾಲಿ" ಇತ್ಯಾದಿ ಹೆಸರುಗಳಿಂದ ಕರೆಯಲಾಗಿದೆ. ಈಗ "ಸ್ಟಾರ್ಟ್ ಅಪ್ ಕ್ಯಾಪಿಟಲ್" ಎಂಬ ಹೊಸ ಕಿರೀಟ ಧಾರಣೆಯಾಗಿದೆ. ದೇಶದ ಶೇ.30 ರಷ್ಟು ಸ್ಟಾರ್ಟ್ ಅಪ್‌ಗಳು ಬೆಂಗಳೂರಿನಲ್ಲಿವೆ ಎನ್ನಲಾಗಿದೆ. 2020 ರಷ್ಟರಲ್ಲಿ ಬೆಂಗಳೂರಿನಲ್ಲಿ 20,000 ಸ್ಟಾರ್ಟ್ ಅಪ್‌ಗಳನ್ನು ಹೊಂದುವ ಗುರಿ ರೂಪಿಸಲಾಗಿದೆ. 2017–18 ರ ಆರ್ಥಿಕ ಸಮೀಕ್ಷೆ ಗುರುತಿಸಿರುವಂತೆ ರಾಜ್ಯದಲ್ಲಿ 3500 ಐಟಿ ಕಂಪನಿಗಳಿದ್ದು ಅದರಲ್ಲಿ ಶೇ.90 ಕ್ಕಿಂತ ಹೆಚ್ಚು ಕಂಪನಿಗಳು ಬೆಂಗಳೂರಿನಲ್ಲಿವೆ. ಇದರಲ್ಲಿ ನೇರವಾಗಿ 10 ಲಕ್ಷ ಮತ್ತು ಪರೋಕ್ಷವಾಗಿ 30 ಲಕ್ಷ ಉದ್ಯೋಗಗಳು ಇವೆ.

ದೇಶದ ಸಾಫ್ಟ್‌ವೇರ್ ರಫ್ತಿನಲ್ಲಿ ರಾಜ್ಯದ ಪಾಲು ಶೇ.38 ರಷ್ಟಿದ್ದರೆ, ಇದರಲ್ಲಿ ಬೆಂಗಳೂರಿನ ಪಾಲು ಶೇ.98 ರಷ್ಟಿದೆ. 2020 ರಲ್ಲಿ ನೇರವಾಗಿ 20 ಲಕ್ಷ ಉದ್ಯೋಗಗಳನ್ನು ಹೊಂದುವ ಮೂಲಕ ಜಗತ್ತಿನಲ್ಲೇ ಬೃಹತ್ತಾದ ಐಟಿ ಕ್ಲಸ್ಟರ್ ಎಂಬ ಹೆಗ್ಗಳಿಕೆಗೆ ಕರ್ನಾಟಕ ಪಾತ್ರವಾಗಲಿದೆ ಎನ್ನಲಾಗಿದೆ.

ಐಟಿ ಕಂಪನಿಗಳಿಗೆ ಇಂಡಸ್ಟ್ರಿಯಲ್ ಎಂಪ್ಲಾಯ್‌ಮೆಂಟ್ಸ್ (ಸ್ಟ್ಯಾಂಡಿಂಗ್ ಆರ್ಡರ್ಸ್) ಕಾಯ್ದೆಯಿಂದ ವಿನಾಯಿತಿಯನ್ನು ಮುಂದಿನ ಐದು ವರ್ಷಗಳಿಗೆ ವಿಸ್ತರಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ. ಐಟಿ ಕಾರ್ಮಿಕರ ಹಕ್ಕುಗಳ ಮೇಲಿನ ದಾಳಿಯನ್ನು ಮುಂದುವರಿಸಲಾಗಿದೆ. ಐಟಿ ಸೇವಾ ಕಂಪನಿಗಳಿಗೆ ತೆರಿಗೆ ರಜೆಯನ್ನು ಸರ್ಕಾರ ಮುಂದುವರಿಸಿದೆ. ಮುಖ್ಯವಾಗಿ ಕಾರ್ಪೊರೇಟ್ ತೆರಿಗೆಯನ್ನು ಒಂದು ದಶಕಕ್ಕೂ ಹೆಚ್ಚಿನ ಕಾಲದಿಂದ ನೀಡಲಾಗುತ್ತಿದೆ.

**ಕೃತಕ ಬುದ್ದಿಮತ್ತೆ (AI-Artificial Intelligence)**

ಅನಾಲಿಟಿಕ್ಸ್, ಇಂಟರ್ನೆಟ್ ಆಫ್ ಥಿಂಗ್ಸ್, ರೋಬೋಟಿಕ್ಸ್, ಕಂಪ್ಯೂಟರ್ ವಿಷನ್, ಎಆರ್, ವಿಆರ್, ನ್ಯಾಚುರಲ್ ಲಾಂಗ್ವೇಜ್ ಪ್ರೊಸೆಸಿಂಗ್ ಮುಂತಾದ ನೂತನ ಕೃತಕ ಬುದ್ದಿಮತ್ತೆ ತಂತ್ರಜ್ಞಾನಗಳ ಮೂಲಕ ಆರೋಗ್ಯ, ಕೃಷಿ, ಶಿಕ್ಷಣ, ಸಾರ್ವಜನಿಕ ಸೇವೆಗಳು, ಸುರಕ್ಷತೆ, ಸ್ಮಾರ್ಟ್ ಸಿಟಿ, ಸಾರಿಗೆ, ಆಡಳಿತ, ಕಸ ನಿರ್ವಹಣೆ ಮುಂತಾದ ಕ್ಷೇತ್ರಗಳಲ್ಲಿ ಸುಧಾರಣೆ ತರುವ ಹೆಸರಿನಲ್ಲಿ ಕರ್ನಾಟಕ ಸರ್ಕಾರ ನಾಸ್ಕಾಂ ಜೊತೆಗೂಡಿ "AI For GOOD" ಎಂಬ ಯೋಜನೆಯನ್ನು ರೂಪಿಸಿದೆ. ಜತೆಗೆ ಇವುಗಳಿಗೆ ವಿವಿಧ ರಿಯಾಯಿತಿಗಳನ್ನು ಸರ್ಕಾರ ನೀಡುತ್ತಿದೆ. ಇವೆಲ್ಲವೂ ಬೆಂಗಳೂರಿನಿಂದಲೇ ಕಾರ್ಯಾಚರಣೆ ಮಾಡಲಿವೆ. ಅತ್ಯಂತ ಉನ್ನತ ತಂತ್ರಜ್ಞಾನದ ಈ ಕ್ಷೇತ್ರಗಳಲ್ಲಿ ಕೆಲಸ ಮಾಡುವವರ ರಕ್ಷಣೆಗೆ ಬೇಕಾದ ಯಾವ ಕಾನೂನುಗಳೂ ಇಲ್ಲ ಎಂಬುದು ಗಮನಾರ್ಹ.

**ಬಯೋಟೆಕ್**

ಬೆಂಗಳೂರನ್ನು ಭಾರತದ ಬಯೋಟೆಕ್ ರಾಜಧಾನಿ ಎಂದೂ ಕರೆಯಲಾಗಿದೆ. ರಾಜ್ಯದಲ್ಲಿ 380 ಬಯೋಟೆಕ್ ಕೈಗಾರಿಕೆಗಳು ಮತ್ತು 194 ಸ್ಟಾರ್ಟ್ ಅಪ್ ಕಂಪನಿಗಳಿವೆ. ಇವು ದೇಶದಲ್ಲಿರುವ ಒಟ್ಟು ಕೈಗಾರಿಕೆಗಳ ಶೇ.60 ರಷ್ಟಿವೆ ಎಂಬುದು ಗಮನಾರ್ಹ. ಈ ಕೈಗಾರಿಕೆಯಲ್ಲಿ ಉತ್ಪತ್ತಿಯಾಗುವ ಒಟ್ಟು ಆದಾಯವು ಭಾರತದ ಬಯೋಟೆಕ್ ಉದ್ದಿಮೆಯ ಶೇ.35 ರಷ್ಟು ಪಾಲನ್ನು ಹೊಂದಿದೆ ಮತ್ತು ಶೇ.54 ರಷ್ಟು ಉದ್ಯೋಗಿಗಳ ಪಾಲನ್ನು ಹೊಂದಿದೆ.


ಡಾ.ಪ್ರಕಾಶ್ ಕೆ., ಅಧ್ಯಕ್ಷರು
ಬಿ.ಎನ್.ಮಂಜುನಾಥ್ ಪ್ರಧಾನ ಕಾರ್ಯದರ್ಶಿ
ಟಿ.ಜೆ.ಥಾಮಸ್ ಖಜಾಂಚಿ

ಕರ್ನಾಟಕ ಬಯೋಟೆಕ್ನಾಲಜಿ ನೀತಿ–3 (2017–2022) ಈಗ ಜಾರಿಯಲ್ಲಿದೆ. ಬಯೋ–ಕೃಷಿ, ಮತ್ಸ್ಯ ಜೀವಶಾಸ್ತ್ರ, ರೇರ್ ಡಿಸೀಸ್ ಮೇನೇಜ್‌ಮೆಂಟ್, ಸಿಂಥೆಟಿಕ್ ಬಯಾಲಜಿ, ಸ್ಟೆಮ್ ಸೆಲ್ ಮತ್ತು ರಿಜನರೇಟಿವ್ ಮೆಡಿಸನ್, ಬಯೋ–ಇಂಜಿನಿಯರಿಂಗ್, ಮೈಕ್ರೋಬಯೋಮ್ ಮುಂತಾದ ನೂತನ ತಂತ್ರಜ್ಞಾನಗಳ ಸಂಶೋಧನೆ ಮತ್ತು ಬೆಳವಣಿಗೆಗೆ ಬೆಂಬಲಿಸುವ ಮೂಲಕ ಬಯೋ–ಆರ್ಥಿಕತೆಯನ್ನು ಬೆಳೆಸಲಾಗುವುದು ಎಂದು ಹೇಳಲಾಗಿದೆ.

ರಾಜ್ಯದ ಏರೋಸ್ಪೇಸ್ ನೀತಿ 2013–2023 ಯನ್ನು ತಿದ್ದುಪಡಿ ಮಾಡಿ ಬೆಂಗಳೂರು ಸುತ್ತಮುತ್ತಲಿನ ವಲಯ–4 ರಲ್ಲಿ ಸ್ಥಾಪಿಸಲಾಗುವ ಏರೋಸ್ಪೇಸ್ ಉದ್ದಿಮೆಗಳಿಗೆ ವಿಶೇಷ ರಿಯಾಯಿತಿಗಳನ್ನು ನೀಡಲಾಗುವುದೆಂದು ಹೇಳಲಾಗಿದೆ. ಬೆಂಗಳೂರನ್ನು ಕೇಂದ್ರೀಕರಿಸಿ ಎಲೆಕ್ಟ್ರಾನಿಕ್ ಸಿಸ್ಟಮ್ ಡಿಸೈನ್ ಅಂಡ್ ಮ್ಯಾನುಫ್ಯಾಕ್ಚರಿಂಗ್ (ESDM) ಕ್ಷೇತ್ರದಲ್ಲಿ ಹೊಸ ಕಂಪನಿಗಳು ಬೆಳೆಯುತ್ತಿವೆ. ಕರ್ನಾಟಕವು ಈಗಾಗಲೇ ಚಿಪ್ ಡಿಸೈನ್ ಕ್ಷೇತ್ರದಲ್ಲಿ ದೇಶದಲ್ಲಿ 2 ನೇ ಸ್ಥಾನದಲ್ಲಿದೆ. 5 ವರ್ಷಗಳಲ್ಲಿ 15 ಸಾವಿರ ಯುವಜನರಿಗೆ ಈ ಕ್ಷೇತ್ರದಲ್ಲಿ ತರಬೇತಿಯನ್ನು ನೀಡಲಾಗುವುದು ಎಂದು ಸರ್ಕಾರ ಹೇಳಿದೆ. ಡಿಸೈನಿಂಗ್, ಪ್ರೋಟೊಟೈಪಿಂಗ್, ಟೆಸ್ಟಿಂಗ್, ಕ್ಯಾರೆಕ್ಟರೈಸೇಷನ್ ಮುಂತಾದವುಗಳಿಗಾಗಿ ವಿಶ್ವ ದರ್ಜೆಯ ಎರಡು ಸಂಶೋಧನಾ ಕೇಂದ್ರಗಳನ್ನು ತೆರೆಯಲಾಗುವುದು ಎಂದು ಆರ್ಥಿಕ ಸಮೀಕ್ಷೆಯಲ್ಲಿ ಸರ್ಕಾರ ಪ್ರಕಟಿಸಿದೆ.

**ಬದಲಾಗುತ್ತಿರುವ ಉದ್ಯೋಗದ ಸ್ವರೂಪ**

ಡಿಜಿಟಲ್ ಲೇಬರ್ ಪ್ಲಾಟ್‌ಫಾರ್ಮ್ (ಗಿಗ್ ಆರ್ಥಿಕತೆ): ಇತ್ತೀಚಿನ ಅವಧಿಯಲ್ಲಿ ರೂಪಾಂತರವಾಗುತ್ತಿರುವ ಅತ್ಯಂತ ಮಹತ್ವದ ಉದ್ಯೋಗ ಸ್ವರೂಪಗಳಲ್ಲಿ ಒಂದೆಂದರೆ, 'ಡಿಜಿಟಲ್ ಲೇಬರ್ ಪ್ಲಾಟ್‌ಫಾರ್ಮ್'ಗಳ ಬೆಳವಣಿಗೆ. ಇದರಲ್ಲಿ ಎರಡು ರೀತಿಗಳಿವೆ: ವೆಬ್ ಆಧಾರಿತ ("ಕ್ರೌಡ್ ವರ್ಕ್"), ಹಾಗು ಸ್ಥಳ–ಆಧಾರಿತ ಅಪ್ಲಿಕೇಶನ್ಸ್ (ಆಪ್ಸ್). ಇಲ್ಲಿ ಕೆಲಸದ ವಿಧಾನಗಳು ಹಿಂದಿನಿಂದ ಬಂದ ಹಲವಾರು ಕೆಲಸದ ವಿಧಾನಗಳ ರೀತಿಯಲ್ಲೇ ಕಾಣುತ್ತವೆ, ಆದರೆ ಆ ಕೆಲಸಗಳನ್ನು ಡಿಜಿಟಲ್ ಸಾಧನಗಳೆಂಬ ಮಧ್ಯವರ್ತಿಗಳ ಮೂಲಕ ನಿರ್ವಹಿಸುವ ವಿಧಾನಗಳು ಮಾತ್ರ ತಂತ್ರಜ್ಞಾನದ ಬೆಳವಣಿಗೆಯ ಉತ್ಪನ್ನವಾಗಿದ್ದು, ಅವೇ ಡಿಜಿಟಲ್ ಲೇಬರ್ ಪ್ಲಾಟ್‌ಫಾರ್ಮ್‌ಗಳಾಗಿವೆ.

ವೆಬ್ ಆಧಾರಿತ ಎಂದರೆ ಭೌಗೋಳಿಕವಾಗಿ ಚದುರಿಕೊಂಡಿರುವ ಸಮೂಹಗಳಿಗೆ ಬಹಿರಂಗ ಕರೆಯ ಮೂಲಕ ಕೆಲಸವನ್ನು ಹೊರಗುತ್ತಿಗೆ ನೀಡುವುದು. ಒಂದು ಕಂಪ್ಯೂಟರ್ ಅಥವಾ ಇಂಟರ್‌ನೆಟ್ ಸಂಪರ್ಕ ಬಳಸಿ ಜಗತ್ತಿನ ಯಾವುದೇ ಮೂಲೆಯಿಂದಾದರೂ ಮಾಡಬಹುದಾದ ಬಹುತೇಕ ಕ್ಲೆರಿಕಲ್ ಕೆಲಸಗಳನ್ನು – ಇಮೇಜ್ ಐಡೆಂಟಿಫಿಕೇಷನ್, ಟ್ರಾನ್ಸ್‌ಕ್ರಿಪ್ಶನ್ ಮತ್ತು ಅನ್ನೋಟೇಶನ್, ಕಂಟೆಂಟ್ ಮಾಡರೇಷನ್, ಡೇಟಾ ಕಲೆಕ್ಷನ್ ಮತ್ತು ಪ್ರೊಸೆಸಿಂಗ್, ಆಡಿಯೋ ಮತ್ತು ವಿಡಿಯೋ ಟ್ರಾನ್ಸ್‌ಕ್ರಿಪ್ಶನ್, ಮುಂತಾದವುಗಳನ್ನು – ಇದು ಒಳಗೊಂಡಿದೆ. ಕೆಲಸವನ್ನು ನೀಡುವವರು ಈ ಪ್ಲಾಟ್‌ಫಾರ್ಮ್‌ಗಳನ್ನು ಬಳಸಿ ತಮಗೆ ಆಗಬೇಕಾದ ಕೆಲಸವನ್ನು ಅದರಲ್ಲಿ ಹಾಕುತ್ತಾರೆ. ಇದರಲ್ಲಿ ಬೇಕಾದ್ದನ್ನು ಆಯ್ಕೆ ಮಾಡಿಕೊಂಡು ಕೆಲಸ ಮಾಡುವ ಕಾರ್ಮಿಕರಿಗೆ ನಿಗದಿಪಡಿಸಿದ ಮೊತ್ತವನ್ನು ನೀಡಲಾಗುತ್ತದೆ. ಈ ಕಾರ್ಮಿಕರಿಗೆ ಕಾಯ್ದೆಗಳ ಮತ್ತು ಸಾಮಾಜಿಕ ಸುರಕ್ಷತೆಗಳ ಯಾವುದೇ ರಕ್ಷಣೆ ಇವುಗಳಲ್ಲಿ ಇಲ್ಲ. ಮಾಡಿದ ಕೆಲಸಕ್ಕೆ ಹೇಗೆ ಮತ್ತು ಎಲ್ಲಿ ಹಣ ನೀಡಲಾಗುವುದು, ಇವರ ಕೆಲಸವನ್ನು ಹೇಗೆ ಮೌಲ್ಯಮಾಪನ ಮಾಡಲಾಗುವುದು, ಸಮಸ್ಯೆಯಾದಲ್ಲಿ ಕಾರ್ಮಿಕರಿಗೆ ಪರಿಹಾರದ ದಾರಿ ಏನಿದೆ, ಮುಂತಾದ ಅಂಶಗಳು ಷರತ್ತುಗಳಿಗೆ ಒಳಪಟ್ಟಿರುತ್ತದೆ. ಇದರಿಂದ ಕಾರ್ಮಿಕರು ಅಪಾರವಾದ ಶೋಷಣೆಗೆ ಒಳಗಾಗುತ್ತಿದ್ದಾರೆ.

ಸ್ಥಳ–ಆಧಾರಿತ ಅಪ್ಲಿಕೇಶನ್ಸ್, ಅಂದರೆ ನಿರ್ದಿಷ್ಟ ಭೌಗೋಳಿಕ ಪ್ರದೇಶದಲ್ಲಿ ವ್ಯಕ್ತಿಗಳಿಗೆ ಕೆಲಸವನ್ನು ಹಂಚುವುದು. ವಸತಿ, ಸಾರಿಗೆ, ಎಲ್ಲಾ ರೀತಿಯ ವಸ್ತುಗಳ ಡೆಲಿವರಿ, ಗೃಹ ಕೆಲಸಗಳು ಮುಂತಾದ ಕೆಲಸಗಳನ್ನು ಇದು ಒಳಗೊಂಡಿದೆ. ಬೆಂಗಳೂರಿನಲ್ಲಿ ಇದು ವ್ಯಾಪಕವಾಗಿ ಬಹಿರಂಗವಾಗಿ ಕಾಣಬಹುದು. ಅಮೇಜಾನ್, ಫ್ಲಿಪ್‌ಕಾರ್ಟ್, ಊಬರ್, ಓಲಾ,

**ಪುಟ 14 ಕ್ಕೆ**

**JANASHAKTHI KANNADA VARA PATRIKE:** Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**